ಸ್ಥಾಪನೆ : 1939


ದೂರವಾಣಿ : (08182) 250513, 250514 (ಕೇಂದ್ರ ಕಛೇರಿ)
ಫ್ಯಾಕ್ಸ್ : (08182) 250513
ಇ–ಮೇಲ್ : homamcos@gmail.com
ವೆಬ್‌ಸೈಟ್ : www.mamcos.info


# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

**81 ಸಾರ್ಥಕ ವರ್ಷಗಳು**

ಸಹಕಾರಂ ಗೆಲ್ಗೆ ★ ಸಹಕಾರಂ ಬಾಳ್ಗೆ

## 81ನೇ ಸರ್ವ ಸದಸ್ಯರ ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಸಭೆಯ ತಿಳಿವಳಿಕೆ ಮತ್ತು ವಾರ್ಷಿಕ ವರದಿ : 2020–21




**The Malnad Areca Marketing Co-Operative Society Ltd.**
**Shivamogga**

ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಸಭೆಯ ವಾರ್ಷಿಕ ಮಹಾಸಭೆಯ ದಿನಾಂಕ : 23–12–2021
ಗುರುವಾರ ಬೆಳಿಗ್ಗೆ 11–00 ಗಂಟೆಗೆ

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

## ಅಭಿವೃದ್ಧಿ ತಃಖ್ತೆ

(ರೂಪಾಯಿಗಳಲ್ಲಿ)

| ಕ್ರ. ಸಂ. | ವಿವರ | 2018–19 | 2019–20 | 2020–21 |
|---|---|---|---|---|
| 1 | ಸದಸ್ಯತ್ವ ('ಎ' ಮತ್ತು 'ಸಿ' ತರಗತಿ) | 25494 | 26191 | 27153 |
| 2 | ಪಾವತಿಯಾದ ಷೇರು ಬಂಡವಾಳ | 7,41,43,950 | 7,61,96,990 | 7,78,15,990 |
| 3 | **ನಿಧಿಗಳು:** | | | |
| | ಆಪದ್ಧನ (ರಿಜರ್ವ್) ನಿಧಿ | 11,28,94,668 | 12,18,51,989 | 12,14,82,234 |
| | ಇತರೆ ನಿಧಿಗಳು | 38,70,59,160 | 40,46,71,096 | 44,88,43,761 |
| 4 | ಠೇವಣಿಗಳು | 1,17,61,97,436 | 1,44,92,36,583 | 1,72,96,83,639 |
| 5 | ಸ್ವಂತ ಬಂಡವಾಳ | 57,40,97,778 | 60,27,20,074 | 64,81,41,985 |
| 6 | ದುಡಿಯುವ ಬಂಡವಾಳ | 2,90,06,32,608 | 2,91,52,96,853 | 3,17,15,06,143 |
| 7 | ಅಡಿಕೆ ಸಂಗ್ರಹಣೆ (ಮೂಟೆ) | 2,46,627 | 2,18,175 | 2,42,333 |
| 8 | ಅಡಿಕೆ ಮಾರಾಟ (ಮೂಟೆ) | 2,51,351 | 2,55,534 | 2,26,966 |
| 9 | ಅಡಿಕೆ ಖರೀದಿ | 1,75,59,40,972 | 1,48,60,64,927 | 1,97,54,30,633 |
| 10 | ಅಡಿಕೆ ಮಾರಿದ ಬೆಲೆ (ಕಮಿಷನ್ ಮಾರಾಟ) | 3,64,45,89,334 | 4,15,27,14,108 | 4,08,45,69,380 |
| 11 | ಬಂದ ಕಮೀಷನ್ | 6,22,85,547 | 7,08,33,484 | 6,85,40,469 |
| 12 | ಅಡಿಕೆ ಮಾರಾಟ | 1,23,87,05,615 | 2,06,70,17,823 | 1,83,20,82,011 |
| 13 | ಕೊಳೆ ರೋಗದ ಔಷಧಿ ಮತ್ತು ಖಾಲಿ ಚೀಲ & ಇತರೆ | 6,31,01,697 | 7,25,92,872 | 9,35,44,100 |
| 14 | ಸದಸ್ಯರಿಗೆ ವಿತರಿಸಿದ ಅಡಿಕೆ ಆಧಾರ ಸಾಲ | 1,53,87,01,103 | 1,12,65,26,499 | 1,12,84,83,204 |
| 15 | ವಸೂಲಾದದ್ದು | 1,60,70,86,343 | 1,38,38,38,299 | 1,13,77,07,659 |
| 16 | ಕಟಾವು ಸಾಲ | 28,85,25,279 | 29,17,93,936 | 28,66,04,777 |
| 17 | ವಸೂಲಾದದ್ದು | 28,26,68,603 | 31,32,24,414 | 29,57,20,328 |
| 18 | ಕೊಳೆ ರೋಗ ಔಷಧದ ಸಾಲ | 1,06,18,000 | 1,06,75,836 | 1,02,71,384 |
| 19 | ವಸೂಲಾದದ್ದು | 1,08,69,802 | 1,13,03,380 | 1,05,82,231 |
| 20 | ವರ್ತಕರಿಗೆ ಕೊಟ್ಟ ಕ್ರೆಡಿಟ್ ವ್ಯಾಪಾರ | 4,75,77,15,469 | 5,44,06,39,533 | 4,40,34,24,682 |
| 21 | ವರ್ತಕರಿಂದ ವಸೂಲಿ | 4,60,90,07,659 | 4,91,20,58,685 | 4,39,06,21,516 |
| 22 | (ಅ) ನಗದು ಮತ್ತು ಬ್ಯಾಂಕ್ ಶಿಲ್ಕು | 7,66,53,761 | 35,90,08,992 | 63,47,91,925 |
| | (ಆ) ಹೊರಗಡೆ ಠೇವಣಿ | 3,98,85,496 | 5,36,84,335 | 3,97,53,752 |
| | (ಇ) ನೆಲೆಗೊಳಿಸಿದ ಸ್ಥಿರ ಆಸ್ತಿಗಳು | 12,29,15,036 | 25,70,95,228 | 29,48,80,531 |
| 23 | ವ್ಯಾಪಾರ ಲಾಭ | 9,12,95,951 | 10,90,02,837 | 11,22,30,205 |
| 24 | ನಿವ್ವಳ ಲಾಭ | 3,06,30,399 | 3,01,64,613 | 3,32,16,873 |
| 25 | ಆಡಿಟ್ ವರ್ಗೀಕರಣ | 'ಎ' | 'ಎ' | 'ಎ' |

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

## ಆಡಳಿತ ಮಂಡಳಿ

**ಶ್ರೀಯುತ ಕೆ.ಬಿ. ಶಿವಕುಮಾರ್,** ಐ.ಎ.ಎಸ್.
ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು
ಶಿವಮೊಗ್ಗ

**ಶ್ರೀಯುತ ಮಹೇಶ್ ಹೆಚ್.ಎಸ್**
ಉಪಾಧ್ಯಕ್ಷರು
ಹುಲ್ಕುಳಿ, ಕಟ್ಟೆಹಕ್ಕಲು ಅಂಚೆ
ತೀರ್ಥಹಳ್ಳಿ ತಾಲ್ಲೂಕು

## ನಿರ್ದೇಶಕರುಗಳು

**ಶ್ರೀಯುತರುಗಳಾದ :**

1) **ಈಶ್ವರಪ್ಪ ಸಿ.ಬಿ.,** ಚಂದವಳ್ಳಿ, ಖಂಡಖ, ನೊಣಬೂರು ಅಂಚೆ, ತೀರ್ಥಹಳ್ಳಿ ತಾಲ್ಲೂಕು
2) **ನರೇಂದ್ರ ಬಿ.ಸಿ.,** ಬೆಳಗದ್ದೆ, ಹೊಸಕೊಪ್ಪ ಅಂಚೆ, ಕೊಪ್ಪ ತಾಲ್ಲೂಕು
3) **ಕೀರ್ತಿರಾಜ್ ಕೆ.,** ಕಾನಹಳ್ಳಿ, ಉಳವಿ ಅಂಚೆ, ಸೊರಬ ತಾಲ್ಲೂಕು
4) **ಕೃಷ್ಣಮೂರ್ತಿ ಕೆ.ವಿ.,** ಕಿರುಗುಳಿಗೆ, ಮತ್ತಿಮನೆ ಅಂಚೆ, ಹೊಸನಗರ ತಾಲ್ಲೂಕು
5) **ಪರಾಶರ ಟಿ.ಕೆ.,** ಕಟ್ಟೆಬಾಗಿಲು, ಭಾರತೀಬೀದಿ, ಶೃಂಗೇರಿ
6) **ಭೀಮರಾವ್ ಟಿ.ಆರ್.,** ತಡಸ, ಅಗರದಹಳ್ಳಿ ಅಂಚೆ, ಭದ್ರಾವತಿ ತಾಲ್ಲೂಕು
7) **ರತ್ನಾಕರ ಕೆ.,** ಬಿಳುಗಿನಮನೆ, ದೇಮ್ಲಾಪುರ ಅಂಚೆ, ತೀರ್ಥಹಳ್ಳಿ ತಾಲ್ಲೂಕು
8) **ತಿಮ್ಮಪ್ಪ ಎಸ್.ಎಂ.,** ಶ್ರೀಧರಪುರ, ಮಾಸೂರು ಅಂಚೆ, ಸಾಗರ ತಾಲ್ಲೂಕು
9) **ಸುಬ್ರಹ್ಮಣ್ಯ ವೈ.ಎಸ್.,** ಯಡಗೆರೆ, ಕಮಲಾಪುರ ಗ್ರಾಮ, ಸೀತೂರು ಅಂಚೆ, ಎನ್.ಆರ್. ಪುರ ತಾಲ್ಲೂಕು
10) **ವಿರೂಪಾಕ್ಷಪ್ಪ ಜಿ.ಈ.,** ಗೊಂದಿಚಟ್ನಹಳ್ಳಿ, ಗೊಂದಿಚಟ್ನಹಳ್ಳಿ ಅಂಚೆ, ಶಿವಮೊಗ್ಗ ತಾಲ್ಲೂಕು
11) **ಸುಬ್ರಹ್ಮಣ್ಯ ಹೆಚ್.ಟಿ.,** ವಡ್ಡಿನಬೈಲು, ರ್‍ಯಾವೆ ಅಂಚೆ, ಹೊಸನಗರ ತಾಲ್ಲೂಕು
12) **ಸುರೇಶಚಂದ್ರ ಎ.,** ಅಂಬ್ಲೂರು, ಕಾವಡಿ ಅಂಚೆ, ಶೃಂಗೇರಿ ತಾಲ್ಲೂಕು
13) **ಬಡಿಯಣ್ಣ ಹೆಚ್.ಎಂ.,** ಹೊಲಗೋಡು, ಮೇಲುಕೊಪ್ಪ ಅಂಚೆ, ಕೊಪ್ಪ ತಾಲ್ಲೂಕು
14) **ಭೀಮರಾಜ್ ಆರ್.,** 'ಕೃಷಿ ಸಂಪದ', ತೀರ್ಥಹಳ್ಳಿ ರಸ್ತೆ, ಹೊಸಹಳ್ಳಿ ಅಂಚೆ, ಶಿವಮೊಗ್ಗ ತಾಲ್ಲೂಕು
15) **ದೇವಾನಂದ ಆರ್.,** ಮಂಡಲಕಾನು ರಸ್ತೆ, ತರೀಕೆರೆ
16) **ದಿನೇಶ ಬಿ.ಜಿ,** ಬರದವಳ್ಳಿ, ಶಿರವಂತೆ ಅಂಚೆ, ಸಾಗರ ತಾಲ್ಲೂಕು
17) **ಶ್ರೀಮತಿ ಜಯಶ್ರೀ ಕೆ.ಕೆ.,** 'ಸುರಭಿ' ಕಡಗೋಡು ಕಾಂಪೌಂಡ್, ಆಜಾದ್‌ರಸ್ತೆ, ತೀರ್ಥಹಳ್ಳಿ
18) **ಶ್ರೀಮತಿ ವಿಜಯಲಕ್ಷ್ಮೀ. ಯು.ಹೆಚ್. ರಾಮಪ್ಪ,** ಅಗ್ರಹಾರ (ಗಾಂಧಿನಗರ) ಸಾಗರ
19) **ರಾಘವೇಂದ್ರ ಆರ್.,** ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

## ಸಭಾ ಸೂಚನಾ ಪತ್ರ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಇ60 ಸಿಎಲ್ಎಮ್ 2021(ಇ)ಬೆಂಗಳೂರು,ದಿನಾಂಕ 04-08-2021 ರ ಪ್ರಕಾರ ಸಂಘದ 2020-21ನೇ ಸಾಲಿನ 81ನೇ ಸರ್ವಸದಸ್ಯರ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಸಭೆಯು ದಿನಾಂಕ:23/12/2021ರ ಗುರುವಾರದಂದು ಬೆಳಿಗ್ಗೆ 11-00 ಗಂಟೆಗೆ ಸಂಘದ ಅಧ್ಯಕ್ಷರು ಹಾಗೂ ಶಿವಮೊಗ್ಗ ಜಿಲ್ಲಾಧಿಕಾರಿಗಳೂ ಆದ **ಶ್ರೀಯುತ ಕೆ. ಬಿ. ಶಿವಕುಮಾರ್, ಐ.ಎ.ಎಸ್**. ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಸದಸ್ಯರೆಲ್ಲರೂ ಈ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ.

ಸ್ಥಳ : ಶಿವಮೊಗ್ಗ
ದಿನಾಂಕ : 08/11/2021

"ಆಡಳಿತ ಮಂಡಳಿ ಒಪ್ಪಿಗೆಯ ಮೇರೆಗೆ"
ಸಹಿ/-
**ರಾಘವೇಂದ್ರ ಆರ್**.
ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

## ಸಭೆಯ ಕಾರ್ಯಕಲಾಪಗಳು

1. ಪ್ರಾರ್ಥನೆ ಮತ್ತು ರೈತಗೀತೆ.
2. ಸ್ವಾಗತ.
3. ಅಗಲಿದ ಸಂಘದ ಸದಸ್ಯರು ಮತ್ತು ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದು.
4. ಸಭಾ ಸೂಚನಾ ಪತ್ರವನ್ನು (ಮೀಟಿಂಗ್ ನೋಟಿಸ್) ಓದಿ ದಾಖಲು ಮಾಡುವುದು.

   **ಪುಟ ಸಂಖ್ಯೆ: 2-5**

5. ದಿನಾಂಕ:21/12/2020ರಂದು ನಡೆದ ಸರ್ವ ಸದಸ್ಯರ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಸಭೆಯ ನಡಾವಳಿಯನ್ನು ಪರಿಶೀಲಿಸಿ, ಓದಿ ದಾಖಲು ಮಾಡುವುದು ಹಾಗೂ ಆ ನಡಾವಳಿಯ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸುವುದು.

   **ಟಿಪ್ಪಣಿ:** ನಡಾವಳಿ ವಿವರಗಳನ್ನು ಲಗತ್ತಿಸಿದೆ. **ಪುಟ ಸಂಖ್ಯೆ: 37-67**

6. ಅಧ್ಯಕ್ಷರಿಂದ ಸಂಘದ ಮುಂದಿನ ವರ್ಷದ ಧ್ಯೇಯ ಧೋರಣೆಗಳ ಬಗೆಗೆ ವಿವರಣಾತ್ಮಕ ನುಡಿ.
7. 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸುವುದು.

   **ಟಿಪ್ಪಣಿ:** ಅಂಗೀಕರಿಸಲು ಇರಿಸಿದೆ. **ಪುಟ ಸಂಖ್ಯೆ: 13-19**

8. 2020-21ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಆಡಳಿತ ಮಂಡಳಿಯ ಸಮಜಾಯಿಷಿಯೊಂದಿಗೆ ಪರಿಶೀಲಿಸಿ, ಅಂಗೀಕರಿಸುವುದು.

   **ಟಿಪ್ಪಣಿ:** ಲೆಕ್ಕಪತ್ರಗಳ ವಿವರಗಳನ್ನು ಲಗತ್ತಿಸಿದ್ದು, ಆಡಿಟ್ ವರದಿಯನ್ನು ಪ್ರತ್ಯೇಕವಾಗಿ ಸಂಘದ ಕೇಂದ್ರ ಕಛೇರಿ, ಶಾಖೆ ಮತ್ತು ಏಜೆನ್ಸಿಗಳಲ್ಲಿ ಇರಿಸಿದೆ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

   **ಪುಟ ಸಂಖ್ಯೆ: 68-83**

9. 2020–21ನೇ ಸಾಲಿನಲ್ಲಿ ಸಂಘವು ಸಂಪಾದಿಸಿದ ಲಾಭವನ್ನು ಹಂಚುವುದು.

**ಟಿಪ್ಪಣಿ:** ಲಾಭ ವಿಲೇವಾರಿ ಹಂಚಿಕೆ ವಿವರಗಳನ್ನು ಲಗತ್ತಿಸಿದೆ. **ಪುಟ ಸಂಖ್ಯೆ: 84**

10. 2020–21ನೇ ಸಾಲಿನಲ್ಲಿ ಅಂದಾಜು ಆಯ–ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಪರಿಶೀಲಿಸಿ, ಅಂಗೀಕರಿಸುವುದು.

**ಟಿಪ್ಪಣಿ:** ವಿವರಗಳನ್ನು ಲಗತ್ತಿಸಿದೆ. **ಪುಟ ಸಂಖ್ಯೆ: 85–88**

11. 2021–22 ಮತ್ತು 2022–23ನೇ ಸಾಲುಗಳ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.

**ಟಿಪ್ಪಣಿ:** ವಿವರಗಳನ್ನು ಲಗತ್ತಿಸಿದೆ. **ಪುಟ ಸಂಖ್ಯೆ: 85–88**

12. ಮುಂಬರುವ ಸಾಲಿಗಾಗಿ ಸಮಿತಿಯಿಂದ ತಯಾರಿಸಲಾದ ಸಂಘದ ಕಾರ್ಯಚಟುವಟಿಕೆಗಳ ಬಗೆಗಿನ ಕಾರ್ಯಕ್ರಮವನ್ನು ಅನುಮೋದಿಸುವುದು.

**ಟಿಪ್ಪಣಿ:** ಸಂಘದ ಮಾನ್ಯ ಅಧ್ಯಕ್ಷರ ನುಡಿಯಲ್ಲಿ ಪ್ರಸ್ತಾಪಿಸಲಾಗುವುದು.

13. ಕಾರ್ಯಾಚರಣೆಯಲ್ಲಿ ಕೊರತೆ ಏನಾದರೂ ಇದ್ದರೆ, ಅದರ ಪುನರವಲೋಕನ ಮತ್ತು ಅಂತಹ ಕೊರತೆಯನ್ನು ನೀಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

**ಟಿಪ್ಪಣಿ:** ಈ ಬಗೆಗೆ ಪರಿಶೀಲಿಸಲಾಗಿದ್ದು, ಕ್ರಮವಿಡಲಾಗಿದೆ.

14. ಸಂಘದ 2021–22ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರಿಂದ ಮಾಡಿಸುವ ಬಗೆಗೆ ಒಪ್ಪಿಗೆ ನೀಡುವ ವಿಚಾರ.

ದಿನಾಂಕ: 08–11–2021ರ ಆಡಳಿತ ಮಂಡಳಿ ಸಭೆಯಲ್ಲಿ ಮೆ॥ ಎಸ್. ಕೃಷ್ಣಸ್ವಾಮಿ ಅಂಡ್ ಕೋ, ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ ಇವರಿಂದ ಮಾಡಿಸುವ ಬಗೆಗೆ ಶಿಫಾರಸ್ಸು ಮಾಡಿದ್ದು, ಅನುಮೋದನೆಗೆ ಮಂಡಿಸಿದೆ.

15. ಸದಸ್ಯರುಗಳನ್ನು ಸೇರಿಸಿಕೊಂಡ, ತೆಗೆದು ಹಾಕಿದ ಬಗೆಗಿನ ಟಿಪ್ಪಣಿ.

**ಟಿಪ್ಪಣಿ:**

| ತರಗತಿ | ವರ್ಷದ ಪ್ರಾರಂಭದಲ್ಲಿ | | ವರದಿ ಸಾಲಿನಲ್ಲಿ ಸೇರ್ಪಡೆ | | ಸಾಲಿನಲ್ಲಿ ವಾಪಸಾತಿ | | ವರ್ಷಾಂತ್ಯಕ್ಕೆ | |
|---|---|---|---|---|---|---|---|---|
| | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು |
| 'ಎ' | 26165 | 7,61,94,390 | 1316 | 30,41,300 | 354 | 14,22,300 | 27127 | 7,78,13,390 |
| 'ಸಿ' | 26 | 2,600 | – | – | – | – | 26 | 2,600 |

16. ಸಹಕಾರ ಸಂಘದ ಸಮಿತಿ ಸದಸ್ಯರ, ಪದಾಧಿಕಾರಿಗಳ ಮತ್ತು ನೌಕರರುಗಳ ವರ್ತನಾ ನೀತಿ ಸಂಹಿತೆಗಳನ್ನು ರಚಿಸುವುದು.

**ಟಿಪ್ಪಣಿ:** ರಚಿಸಿ ಅಂಗೀಕೃತವಾದ ನಿಯಮಾವಳಿ ಜಾರಿಯಲ್ಲಿದೆ.

17. ಸಂಘದ ಸದಸ್ಯರು ಮತ್ತು ನಿರ್ದೇಶಕರಿಂದ ಸಂಘದ ಸೇವೆಗಳ ಬಳಕೆಯ ಬಗೆಗೆ ಪರಿಶೀಲನೆ.

**ಟಿಪ್ಪಣಿ:** ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ ಹಾಗೂ ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ 65 ಕೆ.ಜಿ.ಗಿಂತ ಹೆಚ್ಚಿನ ಅಡಿಕೆ ಹಾಕಿದವರು 15326 ಸದಸ್ಯರು (ಶೇ.56.50) ಮತ್ತು 65 ಕೆ.ಜಿ.ಗಿಂತ ಕಡಿಮೆ ಅಡಿಕೆ ಹಾಕಿದವರು 280 ಸದಸ್ಯರು (ಶೇ.1.03) ಸಂಘದ ಸೇವೆಯನ್ನು ಬಳಸಿಕೊಂಡಿರುತ್ತಾರೆ. ಸಂಘಕ್ಕೆ ಅಡಿಕೆಯನ್ನೇ ಹಾಕದವರು 11521 ಸದಸ್ಯರು (ಶೇ.42.47) ಇರುತ್ತಾರೆ.

18. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳು ಯಾವುದಾದರೂ ಇದ್ದಲ್ಲಿ ಮತ್ತು ಮುಂಗಡಗಳ ಸುಸ್ತಿದಾರರು ಯಾರಾದರೂ ಇದ್ದಲ್ಲಿ, ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.

**ಟಿಪ್ಪಣಿ:** ಯಾವುದೂ ಇರುವುದಿಲ್ಲ.

19. ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರಿಗೆ ಅವರ ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಪಟ್ಟ ಸಭೆಗಳಲ್ಲಿ ಅವರು ಹಾಜರಾದುದಕ್ಕೆ ಸಂಬಂಧಿಸಿ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ಭತ್ಯೆಗಳ ಪರಿಶೀಲನೆ.

**ಟಿಪ್ಪಣಿ:** 2020–21ನೇ ಸಾಲಿನಲ್ಲಿ, ಅಂದರೆ ದಿನಾಂಕ: 01/04/2020 ರಿಂದ 31/03/2021ರ ವರೆಗೆ ಒಟ್ಟು 07 ಆಡಳಿತ ಮಂಡಳಿ ಸಭೆ, 16 ಕಾರ್ಯನಿರ್ವಾಹಕ ಸಮಿತಿ ಸಭೆ, 07 ಲೆಕ್ಕಪರಿಶೋಧನೆ ಮತ್ತು ಹಣಕಾಸು ಸಮಿತಿ ಸಭೆ, 08 ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ ಹಾಗೂ ಅಡಿಕೆ ಖರೀದಿ ವ್ಯವಹಾರ ಸಮಿತಿಯ 10 ಸಭೆಗಳು ನಡೆದಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ನಿರ್ದೇಶಕರಿಗೆ ನಿಯಮಾನುಸಾರ ಒಟ್ಟು ರೂ.8,79,126.00 ರಷ್ಟು ಭತ್ಯೆ ಪಾವತಿಸಿದೆ.

20. ಯಾವುದೇ ಪೂರಕ ಸಂಸ್ಥೆಯೇನಾದರೂ ಇದ್ದರೆ, ಅವುಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪುನರವಲೋಕಿಸುವುದು.

**ಟಿಪ್ಪಣಿ:** ಯಾವುದೂ ಇರುವುದಿಲ್ಲ.

21. ಇತರ ಸಹಕಾರ ಸಂಘಗಳಲ್ಲಿ ಆ ಸಂಘದ ಸದಸ್ಯತ್ವವನ್ನು ಅನುಮೋದಿಸುವುದು.

**ಟಿಪ್ಪಣಿ:** ಯಾವುದೂ ಇರುವುದಿಲ್ಲ.

22. ಸಮಿತಿ ಸದಸ್ಯರ ಅಥವಾ ಮುಖ್ಯ ಕಾರ್ಯನಿರ್ವಾಹಕರ ಬಂಧುಗಳಾಗಿದ್ದು ನೇಮಕಗೊಂಡಿರುವ ನೌಕರರ ಪಟ್ಟಿಯ ಪರಿಶೀಲನೆ.

**ಟಿಪ್ಪಣಿ:** ಅಂತಹ ಪ್ರಕರಣಗಳು ಇರುವುದಿಲ್ಲ.

23. ವಸೂಲಿಯಾಗದವನೆಂದು ಪರಿಗಣಿಸಲಾದ ವಸೂಲಾಗದ ಋಣಗಳ ಬಗೆಗೆ ತೀರ್ಮಾನ.

**ಟಿಪ್ಪಣಿ:** ಅಂತಹ ಪ್ರಕರಣಗಳು ಇರುವುದಿಲ್ಲ.

24. ನಿರ್ದಿಷ್ಟ ಮೀಸಲು ನಿಧಿ ಮತ್ತು ಇತರ ನಿಧಿಗಳನ್ನು ಸೃಜಿಸುವುದು.

**ಟಿಪ್ಪಣಿ:** ಯಾವುದೂ ಇರುವುದಿಲ್ಲ.

25. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ವಇಚ್ಛಾ ಸಂಯೋಜನೆ, ವಿಭಜನೆ, ವರ್ಗಾವಣೆ.

**ಟಿಪ್ಪಣಿ:** ಅಂತಹ ಪ್ರಕರಣಗಳು ಇರುವುದಿಲ್ಲ.

26. ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪರಿಶೀಲನೆ.

**ಟಿಪ್ಪಣಿ:** ಮೀಸಲು ಮತ್ತು ಇತರೆ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ.

27. ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲ ಹಾಗೂ ಠೇವಣಿ ಸಂಗ್ರಹದ ಬಗೆಗೆ ಮಿತಿ ನಿರ್ಧರಿಸುವುದು.

**ಟಿಪ್ಪಣಿ:** ಸಂಘದ ಬೈಲಾ ಸಂಖ್ಯೆ: 9ರ ಅನ್ವಯ ಸಾಮಾನ್ಯ ನಿಕಾಯವು ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮೊತ್ತವನ್ನು ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತವನ್ನು ನಿಗದಿಪಡಿಸಬೇಕಿರುತ್ತದೆ. ಅಂತೆಯೇ, 2021–22ನೇ ಸಾಲಿಗೆ ಈ ಠೇವಣಿ ಮೊತ್ತವನ್ನು ರೂ.200 ಕೋಟಿಗಳಿಗೆ ಮತ್ತು ಸಾಲದ ಮೊತ್ತವನ್ನು ರೂ.150 ಕೋಟಿಗಳಿಗೆ ನಿಗದಿಪಡಿಸಬಹುದಾಗಿದ್ದು, ತೀರ್ಮಾನಕ್ಕೆ ಮಂಡಿಸಿದೆ.

28. ವಿಚಾರಣಾ ವರದಿ ಯಾವುದಾದರೂ ಇದ್ದರೆ, ಅದರ ಪರಿಶೀಲನೆ.

**ಟಿಪ್ಪಣಿ:** ವಿಚಾರಣಾ ವರದಿ ಯಾವುದೂ ಇರುವುದಿಲ್ಲ.

29. ವಿಚಾರಣಾ ಮತ್ತು ತಪಾಸಣಾ ವರದಿಗಳು ಯಾವುದಾದರೂ ಇದ್ದರೆ ಅವುಗಳ, ಮತ್ತು ಆ ವರದಿಗಳಲ್ಲಿ ಎತ್ತಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ಪರಿಹರಿಸುವ ಸಂಬಂಧದಲ್ಲಿ ಕೈಗೊಂಡ ಕ್ರಮದ ಬಗೆಗೆ ಮಂಡಲಿಯ ಅನುಸರಣಾ ವರದಿಯ ಪರಿಶೀಲನೆ.

**ಟಿಪ್ಪಣಿ:** ಅಂತಹ ಪ್ರಕರಣಗಳು ಇರುವುದಿಲ್ಲ.

30. ಸಂಘದ ಆಡಳಿತ ಮಂಡಳಿಯಿಂದ ಶಿಫಾರಸ್ಸಾದ ಸದಸ್ಯರಿಂದ ಬಂದಿರುವ ಪತ್ರಗಳು.

ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯಲ್ಲಿ ಉತ್ತರಿಸಲಾಗುವುದು.

31. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಚಾರಗಳು.

32. ವಂದನಾರ್ಪಣೆ

# ವಿಶೇಷ ಸೂಚನೆ

1. ರಾಜ್ಯದಲ್ಲಿ ಕೋವಿಡ್–19 ಸಾಂಕ್ರಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಇ60 ಸಿಎಲ್‌ಎಂ 2021 (ಇ) ಬೆಂಗಳೂರು ದಿನಾಂಕ: 04–08–2021 ರ ಪ್ರಕಾರ ಸಂಘದ 2020–21 ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಸಭೆಯ ಮೂಲಕ ಮಾತ್ರ ನಡೆಸಲಾಗುತ್ತಿದೆ.

2. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಕಾರಣ ಈ ಹಿಂದೆ ನಡೆಸುತ್ತಿರುವ ಮಾದರಿಯಲ್ಲಿ ಸಂಘದ 2020–21ನೇ ಸಾಲಿನ 81ನೇ ವಾರ್ಷಿಕ ಮಹಾಸಭೆಯನ್ನು ನಡೆಸಲು ತೊಂದರೆಯಾಗುತ್ತಿರುವುದನ್ನು ಹಾಗೂ ಅದರಲ್ಲೂ ಮುಖ್ಯವಾಗಿ ಸಂಘದ ಸರ್ವಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:08/11/2021 ಆಡಳಿತ ಮಂಡಳಿ ಸಭೆಯಲ್ಲಿ ವಾರ್ಷಿಕ ಮಹಾಸಭೆಯನ್ನು ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಮೂಲಕ ದಿನಾಂಕ: 23/12/2021 ರ ಗುರುವಾರ ಬೆಳಿಗ್ಗೆ 11–00 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ.

3. ಈ ಹಿನ್ನಲೆಯಲ್ಲಿ ದಿನಾಂಕ:23/12/2021 ಗುರುವಾರ ಬೆಳಿಗ್ಗೆ 9–30 ಗಂಟೆಗೆ ತಾವು ವೀಡಿಯೋ ಕಾನ್ಫರೆನ್ಸ್/ ವರ್ಚುವಲ್ ಸಭೆಗೆ ಈ ಕೆಳಗೆ ತಿಳಿಸಿದ ಲಿಂಕ್ ಅಥವಾ ಬಾರ್‌ಕೋಡ್‌ನ್ನು ಇಂಟರ್‌ನೆಟ್ ಹೊಂದಿರುವ ಆಂಡ್ರೈಡ್ ಮೊಬೈಲ್/ಕಂಪ್ಯೂಟರ್/ ಲ್ಯಾಪ್‌ಟಾಪ್/ಟ್ಯಾಬ್ ಮೂಲಕ ಲಾಗಿನ್ ಆಗಿ ಹಾಜರಾಗುವುದು. ಈ ರೀತಿ ಭಾಗವಹಿಸುವಿಕೆಯನ್ನು ಸರ್ವಸದಸ್ಯರ ಸಭೆಯ **'ಹಾಜರಾತಿ'** ಎಂದು ಪರಿಗಣಿಸಲಾಗುವುದು. ಆದರೆ, **ಲಾಗಿನ್ ಆದ ಸದಸ್ಯರು ಕನಿಷ್ಠ ಐದು ನಿಮಿಷವಾದರೂ ಈ ಸಭೆಯಲ್ಲಿ ಭಾಗವಹಿಸಿದ್ದಲ್ಲಿ ಮಾತ್ರ ಹಾಜರಾತಿಗೆ ಪರಿಗಣಿಸಲ್ಪಡುತ್ತದೆ. ಒಂದು ವೇಳೆ ಐದು ನಿಮಿಷಕ್ಕಿಂತ ಮುಂಚಿತವಾಗಿ ಲಾಗ್‌ಔಟ್ ಆದಲ್ಲಿ ಹಾಜರಾತಿ ಸಿಗುವುದಿಲ್ಲ. ಸದಸ್ಯರು ಈ ಬಗೆಗೆ ಜಾಗ್ರತೆ ವಹಿಸುವುದು.**

4. ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯಲ್ಲಿ **ಚರ್ಚಿಸುವ ವಿಷಯುಗಳನ್ನು** ಸದಸ್ಯರು **ದಿನಾಂಕ:17/12/2021**ರೊಳಗೆ ತಲುಪುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಲಿಖಿತವಾಗಿ ಕಳುಹಿಸಿ ಕೊಡುವುದು. ಲಿಖಿತ ಪ್ರಶ್ನೆಗಳಿಗೆ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಸಭೆಯಲ್ಲಿ ಉತ್ತರಿಸಲಾಗುವುದು. ನಂತರ ಬರುವ ಲಿಖಿತ ವಿಷಯಗಳನ್ನು ಪರಿಗಣಿಸಲಾಗುವುದಿಲ್ಲ.

5. ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮಹಾಸಭೆಯಲ್ಲಿ ಭಾಗವಹಿಸುವವರು ಪ್ರಶ್ನೆ ಕೇಳಲು ಅವಕಾಶವಿದೆ. ಆದರೆ ಈ ಬಗೆಗೆ ಸಮಯದ ಅವಕಾಶ ಕಡಿಮೆ ಇರುವುದರಿಂದ ಮೊದಲು ಯಾರು ಲಿಂಕ್‌ಗೆ ಲಾಗಿನ್ ಆಗಿ ಕಡ್ಡಾಯವಾಗಿ ಷೇರು ಸಂಖ್ಯೆ (ಸಂಘದ ಗುರುತಿನ ಚೀಟಿಯಲ್ಲಿರುವಂತೆ) ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸುತ್ತಾರೋ ಆಗ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮಹಾಸಭೆಯಲ್ಲಿ ಭಾಗವಹಿಸಲು ಹಾಗೂ ಪ್ರಶ್ನೆ ಕೇಳಲು ಅವಕಾಶ ಸಿಗುತ್ತದೆ.

6. ವೀಡಿಯೋ ಕಾನ್ಫರೆನ್ಸ್ / ವರ್ಚುವಲ್ ಮೂಲಕ ನಡೆಯುವ ಈ ಸರ್ವಸದಸ್ಯರ ಸಭೆಗೆ ಲಿಂಕ್/ಬಾರ್‌ಕೋಡ್‌ನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಪ್ರಕಟಿಸಿರುವುದಲ್ಲದೆ, ಸಂಘದ ವೆಬ್‌ಸೈಟ್‌ನಲ್ಲಿ www.mamcos.info ಹಾಗೂ ಶಾಖೆಗಳ ಸೂಚನ ಫಲಕದಲ್ಲಿ ಮತ್ತು ಈಗಾಗಲೇ ಸಂಘದ ಶಾಖೆಗಳಲ್ಲಿ ಕೆ.ವೈ.ಸಿ.ಗೆ ನೀಡಿದ ಸದಸ್ಯರ ಮೊಬೈಲ್ ನಂಬರ್‌ಗೆ ಎಸ್.ಎಂ.ಎಸ್. ಮೂಲಕ ತಿಳಿಸಲಾಗುವುದು.

7. ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ವಾರ್ಷಿಕ ಮಹಾಸಭೆಯ ಲಿಂಕ್/ಬಾರ್‌ಕೋಡ್ ದಿನಾಂಕ:23/12/2021ರ ಬೆಳಿಗ್ಗೆ 9–30 ರಿಂದ ಸಭೆ ಮುಕ್ತಾಯವಾಗುವವರೆಗೆ ಮಾತ್ರ ಕೆಲಸ ನಿರ್ವಹಿಸುವ ಕಾರಣ ಮುಂಚಿತವಾಗಿ ಅಥವಾ ಸಭೆ ಮುಕ್ತಾಯವಾದ ನಂತರ ಲಾಗಿನ್ ಆದರೆ ಅದನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ಈ ಸಮಯದಲ್ಲಿಯೇ ಲಿಂಕ್/ಬಾರ್‌ಕೋಡ್‌ಗೆ ತಪ್ಪದೇ ಲಾಗಿನ್ ಆಗಿ ಮಹಾಸಭೆಯನ್ನು ಯಶಸ್ವಿಗೊಳಿಸುವುದು.

8. 2020–21ನೇ ಸಾಲಿನ **ಲೆಕ್ಕಪರಿಶೋಧನಾ ವರದಿ ಪುಸ್ತಕ**ವನ್ನು ಸಂಘದ ಕೇಂದ್ರಕಛೇರಿ, ಶಾಖೆ ಮತ್ತು ಏಜೆನ್ಸಿಗಳಲ್ಲಿ ಇಡಲಾಗಿದ್ದು, ಸದಸ್ಯರು ಪಡೆದುಕೊಳ್ಳಬಹುದು.

9. ಸಂಘದ ವೆಬ್‌ಸೈಟ್ www.mamcos.info ನಲ್ಲಿಯೂ ಸಹ **ವಾರ್ಷಿಕ ವರದಿ ಪುಸ್ತಕ** ಮತ್ತು **ಲೆಕ್ಕಪರಿಶೋಧನಾ ವರದಿಯ ವಿವರಗಳನ್ನು ಪ್ರಕಟಿಸಲಾಗಿದೆ.**

10. ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ವಾರ್ಷಿಕ ಮಹಾಸಭೆಯ ಬಗೆಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ತಮ್ಮ ಹತ್ತಿರದ ಸಂಘದ ಯಾವುದೇ ಶಾಖೆಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

11. ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮೂಲಕ ನಡೆಯುವ ಈ 81ನೇ ವಾರ್ಷಿಕ ಮಹಾಭೆಯ ಬಗೆಗೆ ಕಾಲಕಾಲಕ್ಕೆ ಏನಾದರೂ ಬದಲಾವಣೆಗಳು ಕಂಡು ಬಂದಲ್ಲಿ ಸಂಘದ ವೆಬ್‌ಸೈಟ್ ಹಾಗೂ ಎಸ್.ಎಂ.ಎಸ್ ಮೂಲಕ ತಿಳಿಸಲಾಗುವುದು. ಆದ್ದರಿಂದ ಕಾಲಕಾಲಕ್ಕೆ ಸಂಘದ ವೆಬ್‌ಸೈಟ್ ಹಾಗೂ ಎಸ್.ಎಂ.ಎಸ್‌ಗಳನ್ನು ಗಮನಿಸುವುದು.

12. ಈ ವಾರ್ಷಿಕ ಮಹಾಸಭೆಯಲ್ಲಿ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮೂಲಕ ಭಾಗವಹಿಸಲು ಬಾರ್‌ಕೋಡ್‌ನ್ನು ಇಂಟರ್‌ನೆಟ್ ಹೊಂದಿರುವ ಆ್ಯಂಡ್ರೈಡ್ ಮೊಬೈಲ್‌ನ ಕ್ಯಾಮರಾದ ಮೂಲಕ ಸ್ಕ್ಯಾನ್ ಮಾಡಬಹುದು ಅಥವಾ ಪ್ಲೇಸ್ಟೋರ್‌ನಲ್ಲಿ QR Code Generator-QR Code Creator & QR Maker ಎಂಬ App ನ್ನು ಡೌನ್‌ಲೋಡ್ ಮಾಡಿಕೊಂಡು, ಅದರಲ್ಲಿರುವ ಸ್ಕ್ಯಾನ್ ಮೂಲಕ ಬಾರ್‌ಕೋಡ್‌ನ್ನು ಸ್ಕ್ಯಾನ್ ಮಾಡಿದರೆ ಈ ಕೆಳಗೆ ತಿಳಿಸಿದ ಲಿಂಕ್ ಓಪನ್ ಆಗುತ್ತದೆ. ಆದಾಗ್ಯೂ ಗೊಂದಲ ಉಂಟಾದರೆ ಕೆಳಕಂಡಂತೆ ಸೂಚನೆಗಳನ್ನು ಅನುಸರಿಸಿದರೆ, ಈ ವಾರ್ಷಿಕ ಮಹಾಸಭೆಯಲ್ಲಿ ವೀಡಿಯೋ ಕಾನ್ಫರೆನ್ಸ್/ವರ್ಚುವಲ್ ಮೂಲಕ ಭಾಗವಹಿಸಬಹುದಾಗಿದೆ.

# 81ನೇ ವಾರ್ಷಿಕ ಮಹಾಸಭೆಗೆ 'ವೀಡಿಯೋ ಕಾನ್ಫರೆನ್ಸ್'/ವರ್ಚುವಲ್ ಮೂಲಕ ಭಾಗವಹಿಸಲು ಈ ಕೆಳಕಂಡಂತೆ ಸೂಚನೆಗಳನ್ನು ಅನುಸರಿಸುವುದು:-

✦ ಇಂಟರ್‌ನೆಟ್ ಹೊಂದಿರುವ ಆ್ಯಂಡ್ರೈಡ್ ಮೊಬೈಲ್‌ನಲ್ಲಿ ಬಾರ್‌ಕೋಡ್ ಸ್ಕ್ಯಾನರ್ ಮೂಲಕ ಈ ಕೆಳಗೆ ತಿಳಿಸಿದ ಬಾರ್‌ಕೋಡ್‌ನ್ನು ಸ್ಕ್ಯಾನ್ ಮಾಡಿದರೆ ಎರಡನೇ ಹಂತದ ಲಿಂಕ್ ಬರುತ್ತದೆ

**ಮೊದಲನೇ ಹಂತ**

ಬಾರ್‌ಕೋಡ್ ಮೂಲಕ ಸ್ಕ್ಯಾನ್ ಮಾಡುವಾಗ ಈ ರೀತಿ ಬರುತ್ತದೆ.




**ಎರಡನೇ ಹಂತ**




Scan ಮಾಡಿದ ನಂತರ link ಓಪನ್‌ಆಗುತ್ತದೆ. ಅದರ ಮೇಲೆ ಕ್ಲಿಕ್ ಮಾಡಿದರೆ ಮೂರನೇ ಹಂತದ ಪೇಜ್ ಓಪನ್‌ಆಗುತ್ತದೆ.

**ಮೂರನೇ ಹಂತ**

ಸದಸ್ಯರ ಗುರುತಿನ ಚೀಟಿಯಲ್ಲಿರುವಂತೆ ಸರಿಯಾದ ಷೇರು ಸಂಖ್ಯೆ ನಮೂದಿಸಿದರೆ ಆಗ ಅವರ ಹೆಸರು ಬರುತ್ತದೆ ನಂತರ ಯಾವುದಾದರು ಮೊಬೈಲ್ ನಂಬರ್‌ಎಂಟ್ರಿ ಮಾಡಿ SUBMIT ಕ್ಲಿಕ್ ಮಾಡಬೇಕು.




**ನಾಲ್ಕನೇ ಹಂತ**




ಈ Page click ಮಾಡಿ ಸಭೆಯನ್ನು ವೀಕ್ಷಿಸುವುದು.

## ಐದನೇ ಹಂತ

## ವೀಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ಮೊದಲಿಗೆ **ZOOM Cloud Meeting App Download** ಮಾಡಿಕೊಳ್ಳುವುದು

ಇಲ್ಲಿ ತಾವು ಈ **SYMBOL** (ಹಸ್ತದ ಗುರುತು) ಹಾಕಿ ಪ್ರಶ್ನೆ ಕೇಳಬಹುದು ಅಥವಾ ಪ್ರಶ್ನೆಯನ್ನು ಟೈಪ್ ಮಾಡಿ **Submit** ಕ್ಲಿಕ್ ಮಾಡಿದರೆ, ಅದು ಸಭೆಯ ತಾಂತ್ರಿಕ ತಜ್ಞರ ಗಮನಕ್ಕೆ ಬಂದು ಅವರು ಸಭೆಯಲ್ಲಿರುವವರಿಗೆ ತಿಳಿಸುತ್ತಾರೆ.







**ZOOM Cloud Meeting App** ನ್ನು **Dowload** ಮಾಡಿಕೊಂಡು ನಂತರ ಮೇಲೆ ತಿಳಿಸಿದ ಒಂದ ರಿಂದ ಐದನೇ ಹಂತದವರೆಗಿನ **steps follow** ಮಾಡಿ, ಇಲ್ಲಿ ಸೂಚಿಸಿದ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ ವೀಡಿಯೋ ಕಾನ್ಫರೆನ್ಸ್ ಮೂಲಕ ಈ ಸಭೆಗೆ **join** ಆಗಬಹುದು

## 'ವೀಡಿಯೋ ಕಾನ್ಫರೆನ್ಸ್'/ವರ್ಚುವಲ್ ವಾರ್ಷಿಕ ಮಹಾಸಭೆ ಲಿಂಕ್ ಮತ್ತು ಬಾರ್‌ಕೋಡ್:

**https://viewnow.in/MAMCOS/AGM/**



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದಲ್ಲಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 2021ರ ವರೆವಿಗೆ ವಿಸ್ತರಿಸಲು ಮತ್ತು video conference / virtual meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:-** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಎಕ್ಸ್ ಎಮ್‌ಸಿ/31/2021-22, ದಿನಾಂಕ:23.07.2021.

*****

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ 2021-22 ನೇ ಸಾಲಿನ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ಕಳೆದ ಸಾಲಿನಂತೆ ಡಿಸೆಂಬರ್ 2021ರವರೆಗೆ ವಿಸ್ತರಿಸಿ ಮತ್ತು Video Conference / Virtual Meeting ಮೂಲಕ ನಡೆಸಲು ಅನುಮತಿ ನೀಡುವಂತೆ ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳು ಮತ್ತು ಸದಸ್ಯರು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ನಿಬಂಧಕರ ಪ್ರಸ್ತಾವನೆಯಲ್ಲಿ ಕೋವಿಡ್-19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಘಗಳು ಭೌತಿಕ ಹಾಜರಾತಿಯೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು, ಒಂದು ವೇಳೆ ಆ ರೀತಿ ಸಾಧ್ಯವಾಗದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಸ್ಥೆಗಳು Video Conference/ Virtual Meeting ವಿಧಾನವನ್ನು ಅನುಸರಿಸಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಅನುಮತಿ ನೀಡಬಹುದೆಂದು ನಿಬಂಧಕರು ತಿಳಿಸಿರುತ್ತಾರೆ.

ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆಯ ಕಾರಣದಿಂದ ಹಾಗೂ 3ನೇ ಅಲೆ ವ್ಯಾಪಿಸುವ ಸಾಧ್ಯತೆ ಇರುವ ಬಗ್ಗೆ ತಜ್ಞರು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ, 2020-21ನೇ ಸಾಲಿನಲ್ಲಿ ಅನುಮತಿ ನೀಡಿರುವಂತೆ, ಪ್ರಸಕ್ತ ಸಾಲಿನಲ್ಲಿಯೂ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುವ ಅವಧಿಯನ್ನು 25 ಸೆಪ್ಟೆಂಬರ್ ರಿಂದ 25 ಡಿಸೆಂಬರ್ 2021ವರವಿಗೆ ವಿಸ್ತರಿಸಲು ಹಾಗೂ ಈ ಸಭೆಗಳನ್ನು Video Conference/ Virtual Meeting ಮೂಲಕವೂ ನಡೆಸಲು ಅನುಮತಿ ನೀಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 60 ಸಿಎಲ್‌ಎಮ್ 2021 (ಇ) ಬೆಂಗಳೂರು, ದಿನಾಂಕ: 04.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ

....2

ಕ್ರಮವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರಲ್ಲಿ ಸಹಕಾರ ಸಂಘಗಳ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 27(ಹೆಚ್-3), 30(1) ಹಾಗೂ 60(1)ಗಳಲ್ಲಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸತಕ್ಕದ್ದು ಎಂಬ ಅವಕಾಶವನ್ನು ಸಡಿಲಿಸಿ, ಡಿಸೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸಲು ಹಾಗೂ ಕೋವಿಡ್-19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಸ್ಥೆಗಳು ಭೌತಿಕ ಹಾಜರಾತಿಯೊಂದಿಗೆ ಮತ್ತು ಒಂದು ವೇಳೆ ಆ ರೀತಿ ಅವಕಾಶವಿಲ್ಲದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು Video Conference/ Virtual Meeting ವಿಧಾನವನ್ನು ಅನುಸರಿಸಿ 2021-22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನುಈ ಕೆಳಕಂಡ ನಿಬಂಧನೆಗೊಳಪಟ್ಟು ನಡೆಸಲು ಅನುಮತಿ ನೀಡಿ ಆದೇಶಿಸಿದೆ.

- ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕವೂ ನಡೆಸಬಹುದು.
- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಸದಸ್ಯರಿಗೆ ಡಿವಿಡೆಂಡ್‌ಗಳನ್ನು ಇಸಿಎಸ್ ಮೂಲಕ ಅವರುಗಳ ಖಾತೆಗೆ ಪಾವತಿಸಲು ಕ್ರಮವಿಡುವುದು.
- ಇಂಥಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್-19ರ ನಿಯಮಾವಳಿಗಳಿಗೆ ಒಳಪಟ್ಟು ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಅಧಿನಿಯಮಗಳನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡವಳಿಗಳನ್ನು ನಡೆಸಲು ಕ್ರಮವಹಿಸತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸಲು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಕೋವಿಡ್ ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/8

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

# 2020-21ನೇ ಸಾಲಿನ ಸಂಘದ ಕಾರ್ಯಪ್ರಗತಿಯ ಪ್ರಮುಖ ಅಂಶಗಳು

1. ವರದಿ ಸಾಲಿನಲ್ಲಿ 242333 ಮೂಟೆಗಳ ಅಡಿಕೆ ಆವಕವಾಗಿರುತ್ತದೆ.

2. ವರದಿ ಸಾಲಿನಲ್ಲಿ ರೂ.332.17 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ.

3. ವರದಿ ಸಾಲಿನಲ್ಲಿ ರೂ.11284.83 ಲಕ್ಷ ಅಡಿಕೆ ಆಧಾರ ಸಾಲ ನೀಡಲಾಗಿದೆ.

4. ವರದಿ ಸಾಲಿನಲ್ಲಿ ಸಂಘದ ಒಟ್ಟು ವ್ಯವಹಾರವು (ಟರ್ನ್ ಓವರ್) ರೂ.85291.40 ಲಕ್ಷಗಳಾಗಿದೆ.

5. ವರದಿ ಸಾಲಿನಲ್ಲಿ ಸದಸ್ಯರ ಅಡಿಕೆ ಮಾರಾಟದ ಮೊಬಲಗು ರೂ.55692.65 ಲಕ್ಷಗಳಾಗಿದೆ.

6. ವರದಿ ಸಾಲಿನಲ್ಲಿ ರೂ.17296.84 ಲಕ್ಷ ಠೇವಣಿ ಸಂಗ್ರಹಣೆಯಾಗಿದೆ.

7. ವರದಿ ಸಾಲಿನಲ್ಲಿ ಸಂಘದ ಆರೋಗ್ಯ ವಿಮೆ ಯೋಜನೆಯಡಿ ನೋಂದಾಯಿಸಿದ ಒಟ್ಟು 3938 ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಲ್ಲಿ 59 ಜನರು ಇದರ ಸೌಲಭ್ಯವನ್ನು ಪಡೆದಿರುತ್ತಾರೆ.

8. ಸಂಘದ ವಹಿವಾಟನ್ನು ವಿಸ್ತರಿಸುವ ಉದ್ದೇಶದಿಂದ ಶಿವಮೊಗ್ಗ, ಸಾಗರ, ಬೀರೂರು, ತರೀಕೆರೆ, ಕೊಪ್ಪ ಮತ್ತು ಹೊಸನಗರ ಶಾಖೆಗಳಲ್ಲಿ ಒಟ್ಟು 97426 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸುತ್ತಿರುವ ಕಟ್ಟಡಗಳ ಕಾಮಗಾರಿಯಲ್ಲಿ ಶಿವಮೊಗ್ಗ ಹೊರತುಪಡಿಸಿ ಉಳಿದ ಶಾಖೆಗಳ ಕಾಮಗಾರಿಯು ಪೂರ್ಣಗೊಂಡು ಬಳಕೆಯಲ್ಲಿದ್ದು, ಶಿವಮೊಗ್ಗ ಶಾಖೆಯ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಶೃಂಗೇರಿ ಶಾಖೆಯಲ್ಲಿ ನೂತನ ಕಛೇರಿ ಕಟ್ಟಡ ಮತ್ತು ಅತಿಥಿಗೃಹ ನಿರ್ಮಿಸುತ್ತಿದ್ದು, ಮುಕ್ತಾಯ ಹಂತದಲ್ಲಿದೆ.

9. ಸಂಘದಿಂದ ಅಡಿಕೆ ಖರೀದಿಯನ್ನು ಮಾಡುತ್ತಿದ್ದು, ವರದಿ ಸಾಲಿನಲ್ಲಿ ಸಂಘದ ಶಾಖೆಗಳಲ್ಲಿ ರೂ.12745.32 ಲಕ್ಷ ಮೌಲ್ಯದ ಅಡಿಕೆಯನ್ನು ಟೆಂಡರ್ ಮೂಲಕ ಖರೀದಿ ಮಾಡಿದ್ದು, ಇದು ಸಂಘದಲ್ಲಿ ವ್ಯಾಪಾರವಾದ ಒಟ್ಟಾರೆ ಮೊತ್ತದಲ್ಲಿ ಶೇ.23.78ರಷ್ಟು ಖರೀದಿ ವ್ಯವಹಾರ ನಡೆಸಿದಂತಾಗಿದೆ.

10. ಸಂಘಕ್ಕೆ ತಮ್ಮ ಕೆ.ವೈ.ಸಿ. ದಾಖಲೆಗಳನ್ನು ನೀಡಿದ ಸದಸ್ಯರಿಗೆ ಅವರ ವ್ಯವಹಾರದ ವಿವರಗಳನ್ನು ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತಿದೆ.

**ಇನ್ನೂ ಹೆಚ್ಚಿನ ಸಾಧನೆಗೆ ನಿಮ್ಮ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಿರುವ .......**

**ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗ**



# 2020-21ನೇ ಸಾಲಿನ ವಾರ್ಷಿಕ ವರದಿ

**ಮಾನ್ಯ ಸಹಕಾರಿ ಬಂಧುಗಳೇ,**

ಸಂಘದ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರಾದ ನಾವು ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಸರ್ವ ಸದಸ್ಯರ ಈ ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಸಭೆಗೆ ಸ್ವಾಗತವನ್ನು ಬಯಸಿ, ಸಂಘದ 2020-21ನೇ ಸಾಲಿನ ಲೆಕ್ಕಪತ್ರಗಳನ್ನು ತಮ್ಮ ಅವಗಾಹನೆಗೆ ತರಲು ಸಂತೋಷಿಸುತ್ತೇವೆ.

ದಿನಾಂಕ:01/04/2020 ರಿಂದ 31/03/2021ರವರೆಗೆ ಸಂಘವು ವ್ಯವಹರಿಸಿದ ವಿವರಗಳು ಈ ಕೆಳಗಿನಂತಿವೆ:

**ಷೇರು ಬಂಡವಾಳ ಮತ್ತು ಸದಸ್ಯರು:**

ದಿನಾಂಕ: 31/03/2021 ರ ಅಂತ್ಯಕ್ಕೆ

| ತರಗತಿ | ವರ್ಷದ ಪ್ರಾರಂಭದಲ್ಲಿ | | ವರದಿ ಸಾಲಿನಲ್ಲಿ ಸೇರ್ಪಡೆ | | ಸಾಲಿನಲ್ಲಿ ವಾಪಸಾತಿ | | ವರ್ಷಾಂತ್ಯಕ್ಕೆ | |
|---|---|---|---|---|---|---|---|---|
| | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು |
| 'ಎ' | 26165 | 7,61,94,390 | 1316 | 30,41,300 | 354 | 14,22,300 | 27127 | 7,78,13,390 |
| 'ಸಿ' | 26 | 2,600 | - | - | - | - | 26 | 2,600 |

ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ 65 ಕೆ.ಜಿ.ಗಿಂತ ಹೆಚ್ಚಿನ ಅಡಿಕೆ ಹಾಕಿದವರು 15326 ಸದಸ್ಯರು (ಶೇ.56.50) ಮತ್ತು 65 ಕೆ.ಜಿ.ಗಿಂತ ಕಡಿಮೆ ಅಡಿಕೆ ಹಾಕಿದವರು 280 ಸದಸ್ಯರು (ಶೇ.1.03) ಸಂಘದ ಸೇವೆಯನ್ನು ಬಳಸಿಕೊಂಡಿರುತ್ತಾರೆ. ಸಂಘಕ್ಕೆ ಅಡಿಕೆಯನ್ನೇ ಹಾಕದವರು 11521 ಸದಸ್ಯರು (ಶೇ.42.47) ಇರುತ್ತಾರೆ.



# ಸದಸ್ಯರಿಂದ ಮಾರಾಟಕ್ಕಾಗಿ ಸಂಘಕ್ಕೆ ಬಂದ ಅಡಿಕೆ

## 2020–21 ನೇ ಸಾಲಿನಲ್ಲಿ ಸದಸ್ಯರಿಂದ ಮಾರಾಟಕ್ಕಾಗಿ ಸಂಘಕ್ಕೆ ಬಂದ ಅಡಿಕೆ

| ಕ್ರ. ಸಂ. | ಶಾಖೆಗಳ ಹೆಸರು | 2020–21ರಲ್ಲಿ ಬಂದದ್ದು | | 2020–21ರಲ್ಲಿ ಮಾರಾಟವಾದದ್ದು | |
|---|---|---|---|---|---|
| | | ಮೂಟೆ | ತೂಕ (ಕೆ.ಜಿ.ಗಳಲ್ಲಿ) | ಮೂಟೆ | ತೂಕ (ಕೆ.ಜಿ.ಗಳಲ್ಲಿ) |
| 1 | ಶಿವಮೊಗ್ಗ | 31741 | 2180481.50 | 30098 | 2060788.80 |
| 2 | ಭದ್ರಾವತಿ | 15795 | 1107980.00 | 12436 | 867788.50 |
| 3 | ತೀರ್ಥಹಳ್ಳಿ | 46635 | 3120508.60 | 41957 | 2798453.20 |
| 4 | ಸಾಗರ | 51307 | 2662658.50 | 51182 | 2718631.00 |
| 5 | ಹೊಸನಗರ | 19611 | 1314786.00 | 20152 | 1354336.50 |
| 6 | ಚನ್ನಗಿರಿ | 15048 | 1013130.50 | 13932 | 937238.50 |
| 7 | ಕೊಪ್ಪ | 23081 | 1427595.50 | 21576 | 1323772.60 |
| 8 | ಶೃಂಗೇರಿ | 13892 | 778750.30 | 12927 | 717363.00 |
| 9 | ತರೀಕೆರೆ | 11338 | 802611.50 | 10322 | 733651.00 |
| 10 | ಬೀರೂರು | 3756 | 262011.00 | 2642 | 182638.80 |
| 11 | ಶಿಕಾರಿಪುರ | 10129 | 594997.30 | 9742 | 560854.60 |
| | **ಒಟ್ಟು** | **242333** | **15265510.70** | **226966** | **14255516.50** |

## ಏಜೆನ್ಸಿಗಳಿಂದ ಸಂಗ್ರಹವಾದದ್ದು (ಮೂಟೆಗಳು)

| ಕ್ರ.ಸಂ. | ಏಜೆನ್ಸಿ ಹೆಸರು | ಮೂಟೆ | ಕ್ರ.ಸಂ. | ಏಜೆನ್ಸಿ ಹೆಸರು | ಮೂಟೆ |
|---|---|---|---|---|---|
| 1 | ಅಗರದಹಳ್ಳಿ | 637 | 11 | ಹುಂಚ | 2430 |
| 2 | ಬಸವಾನಿ | 2644 | 12 | ಕಲ್ಲೋಣಿ | 528 |
| 3 | ಮೇಗರವಳ್ಳಿ | 4522 | 13 | ಸಂಪೇಕಟ್ಟೆ | 505 |
| 4 | ಕಮ್ಮರಡಿ | 3158 | 14 | ಕೋಡೂರು | 231 |
| 5 | ಕೋಣಂದೂರು | 485 | 15 | ಜಯಪುರ | 10177 |
| 6 | ಸಾಲ್ಗಡಿಗಣಪತಿಕಟ್ಟೆ | 5571 | 16 | ಹರಿಹರಪುರ | 421 |
| 7 | ಪುರಪ್ಪೇಮನೆ | 2227 | 17 | ಸೀತೂರು | 23 |
| 8 | ಮರಗಳಲೆ ಗುಡ್ಡೆಕೊಪ್ಪ | 512 | 18 | ಬಿದರಗೋಡು | 1283 |
| 9 | ನಿಟ್ಟೂರು | 700 | 19 | ಕಳಸ | 2134 |
| 10 | ನಗರ | 2108 | 20 | ತುಮರಿ | 112 |
| | | | | **ಒಟ್ಟು** | **40408** |

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಶಿವಮೊಗ್ಗ

## ಅಡಿಕೆ ಆವಕ ಮತ್ತು ಜಾವಕ (ಅಡಿಕೆ ವಿಧಕ್ಕೆ ಅನುಗುಣವಾಗಿ) 01/04/2020 ರಿಂದ 31/03/2021ರವರೆಗೆ

# ಅಡಿಕೆ ಆವಕ

| ಕ್ರ. ಸಂ. | ಶಾಖೆಯ ಹೆಸರು | ಬೆಟ್ಟೆ | | ಚಾಲಿ | | ಇಡಿ | | ಗೊರಬಲು | | ಹಸ | | ರಾಶಿ ಇಡಿ | | ಇತರೆ | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|
| | | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ |
| 1 | ಬೀರೂರು | 42 | 3038.0 | 40 | 1959.5 | 14 | 871.5 | 11 | 385.0 | 54 | 3780.0 | 3388 | 241020.5 | 207 | 10956.5 | 3756 | 262011.0 |
| 2 | ಕೊಪ್ಪ | 2799 | 168290.1 | 0 | 0.0 | 0 | 0.0 | 4934 | 280476.5 | 1629 | 82427.7 | 13237 | 872625.4 | 482 | 23775.8 | 23081 | 1427595.5 |
| 3 | ಶೃಂಗೇರಿ | 2792 | 161722.4 | 0 | 0.0 | 4643 | 281435.0 | 4171 | 219971.3 | 1810 | 91440.1 | 113 | 7155.9 | 363 | 17025.6 | 13892 | 778750.3 |
| 4 | ತರೀಕೆರೆ | 9 | 634.5 | 370 | 25136.5 | 1 | 65.0 | 59 | 3348.5 | 18 | 1332.5 | 10396 | 740078.0 | 485 | 32016.5 | 11338 | 802611.5 |
| 5 | ಚನ್ನಗಿರಿ | 9 | 539.5 | 0 | 0.0 | 0 | 0.0 | 37 | 1673.5 | 0 | 0.0 | 14405 | 972595.5 | 597 | 38322.0 | 15048 | 1013130.5 |
| 6 | ಭದ್ರಾವತಿ | 361 | 28880.0 | 1 | 66.0 | 120 | 8949.0 | 28 | 1556.0 | 60 | 4800.0 | 15171 | 1060200.0 | 54 | 3529.0 | 15795 | 1107980 |
| 7 | ಹೊಸನಗರ | 0 | 0.0 | 240 | 14237.0 | 30 | 1534.5 | 1230 | 64483.5 | 0 | 0.0 | 17907 | 1227509.5 | 204 | 7021.5 | 19611 | 1314786.0 |
| 8 | ಸಾಗರ | 14 | 409.0 | 12650 | 855440.0 | 0 | 0.0 | 1197 | 33696.0 | 0 | 0.0 | 14864 | 1003890.5 | 22582 | 769223.0 | 51307 | 2662658.5 |
| 9 | ಶಿಕಾರಿಪುರ | 0 | 0.0 | 47 | 1883.2 | 3 | 114.0 | 146 | 5721.4 | 1 | 9.8 | 9437 | 563942.7 | 495 | 23326.2 | 10129 | 594997.3 |
| 10 | ಶಿವಮೊಗ್ಗ | 2231 | 155108.0 | 1 | 13.0 | 10 | 627.0 | 3478 | 220177.2 | 1209 | 79896.4 | 24293 | 1692380.7 | 519 | 32279.2 | 31741 | 2180481.5 |
| 11 | ತೀರ್ಥಹಳ್ಳಿ | 4499 | 295632.9 | 0 | 0.0 | 26 | 1640.3 | 9233 | 578017.6 | 2860 | 176383.5 | 29831 | 2058960.1 | 186 | 9874.2 | 46635 | 3120508.6 |
| | ಒಟ್ಟು | **12756** | **814254.4** | **13349** | **898735.2** | **4847** | **295236.3** | **24524** | **1409506.5** | **7641** | **440070** | **153042** | **10440358.8** | **26174** | **967349.5** | **242333** | **15265510.7** |

# ಅಡಿಕೆ ಜಾವಕ

| ಕ್ರ. ಸಂ. | ಶಾಖೆಯ ಹೆಸರು | ಬೆಟ್ಟೆ | | ಚಾಲಿ | | ಇಡಿ | | ಗೊರಬಲು | | ಹಸ | | ರಾಶಿ ಇಡಿ | | ಇತರೆ | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|
| | | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ |
| 1 | ಬೀರೂರು | 0 | 0.0 | 66 | 3875.5 | 0 | 0.0 | 9 | 306.5 | 0 | 0.0 | 2528 | 176684.3 | 39 | 1772.5 | 2642 | 182638.8 |
| 2 | ಕೊಪ್ಪ | 3035 | 184759.9 | 0 | 0.0 | 0 | 0 | 4764 | 268422.2 | 1705 | 88238.6 | 11665 | 763324.6 | 407 | 19027.3 | 21576 | 1323772.6 |
| 3 | ಶೃಂಗೇರಿ | 2754 | 158668.5 | 0 | 0.0 | 4109 | 246058.1 | 3895 | 203376.7 | 1753 | 89251.6 | 127 | 8070.0 | 289 | 11938.1 | 12927 | 717363.0 |
| 4 | ತರೀಕೆರೆ | 0 | 0.0 | 532 | 36867.5 | 2 | 130.0 | 49 | 2821.0 | 0 | 0.0 | 9365 | 669260.0 | 374 | 24572.5 | 10322 | 733651.0 |
| 5 | ಚನ್ನಗಿರಿ | 10 | 566.5 | 0 | 0.0 | 54 | 3712.5 | 30 | 1365.5 | 0 | 0.0 | 13377 | 902532.0 | 461 | 29062.0 | 13932 | 937238.5 |
| 6 | ಭದ್ರಾವತಿ | 0 | 0.0 | 2 | 112.0 | 60 | 4480.0 | 22 | 1255.0 | 0 | 0.0 | 12300 | 858615.0 | 52 | 3326.5 | 12436 | 867788.5 |
| 7 | ಹೊಸನಗರ | 1 | 60.0 | 222 | 13284.0 | 31 | 1513.5 | 1098 | 57305.0 | 1 | 8.0 | 18585 | 1275010.5 | 214 | 7155.5 | 20152 | 1354336.5 |
| 8 | ಸಾಗರ | 18 | 577.0 | 11926 | 805283.5 | 0 | 0.0 | 1188 | 33656.0 | 2 | 150.0 | 16948 | 1157482.0 | 21100 | 721482.5 | 51182 | 2718631.0 |
| 9 | ಶಿಕಾರಿಪುರ | 0 | 0.0 | 45 | 1867.5 | 5 | 210.0 | 130 | 4555.5 | 1 | 9.8 | 9058 | 530822.9 | 503 | 23388.9 | 9742 | 560854.6 |
| 10 | ಶಿವಮೊಗ್ಗ | 2288 | 158248.6 | 0 | 0.0 | 96 | 6509.3 | 3236 | 203084.3 | 1256 | 82583.7 | 22792 | 1584275.0 | 430 | 26087.9 | 30098 | 2060788.8 |
| 11 | ತೀರ್ಥಹಳ್ಳಿ | 4642 | 306472.1 | 0 | 0.0 | 18 | 1049.3 | 8572 | 534322.4 | 2800 | 171969.4 | 25755 | 1775546.2 | 170 | 9093.8 | 41957 | 2798453.2 |
| | **ಒಟ್ಟು** | **12748** | **809352.6** | **12793** | **861290** | **4375** | **263662.7** | **22993** | **1310470.1** | **7518** | **432211.1** | **142500** | **9701622.5** | **24039** | **876907.5** | **226966** | **14255516.5** |

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಶಿವಮೊಗ್ಗ

## ಸಿಪ್ಪೆ ಗೋಟು ಅಡಿಕೆ ಆವಕ ಜಾವಕ ಕ್ರೋಢೀಕೃತ ತಃಖ್ತೆ 01/04/2020 ರಿಂದ 31/03/2021ರ ಅಂತ್ಯಕ್ಕೆ

| ಶಾಖೆಯ | ಆರಂಭಿಕ ಶಿಲ್ಕು | | ಆವಕ | | ಜಾವಕ | | ವಾಪಸ್ಸು | | ವರ್ಗಾವಣೆ | | ಅಂತಿಮ ಶಿಲ್ಕು | |
|---|---|---|---|---|---|---|---|---|---|---|---|---|
| | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ | ಮೂಟೆ | ತೂಕ |
| ಬೀರೂರು | 574 | 22057.0 | 85 | 3400.00 | 0 | 0.00 | 659 | 25457.00 | 0 | 0.00 | 0 | 0.00 |
| ಕೊಪ್ಪ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ಶೃಂಗೇರಿ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ತರೀಕೆರೆ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ಚನ್ನಗಿರಿ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ಭದ್ರಾವತಿ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ಹೊಸನಗರ | 24 | 701 | 32 | 1029.50 | 53 | 1595.00 | 0 | 0.00 | 0 | 0.00 | 3 | 135.50 |
| ಸಾಗರ | 2139 | 72942.5 | 15618 | 512926.00 | 14306 | 470999.00 | 198 | 7860.00 | 0 | 0.00 | 3253 | 107009.50 |
| ಶಿಕಾರಿಪುರ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ಶಿವಮೊಗ್ಗ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| ತೀರ್ಥಹಳ್ಳಿ | 0 | 0 | 0 | 0.00 | 0 | 0.00 | 0 | 0.00 | 0 | 0.00 | 0 | 0.00 |
| **ಒಟ್ಟು** | **2737** | **95700.5** | **15735** | **517355.50** | **14359** | **472594.00** | **857** | **33317** | **0** | **0** | **3256.00** | **107145.00** |

# 2020–21 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳು ಮತ್ತು ಖಾಸಗಿ ವರ್ತಕರು ಸಂಘದಲ್ಲಿ ಅಡಿಕೆ ಖರೀದಿಸಿರುವ ಮೌಲ್ಯ

| ಕ್ರ.ಸಂ. | ಸಂಸ್ಥೆಯ ಹೆಸರು | ಟ್ರೇಡರ್ಸ್ ಮೊತ್ತ | ದಲ್ಲಾಳಿ | ಶೇಕಡಾವಾರು |
|---|---|---|---|---|
| 1 | ಮಾಮ್‌ಕೋಸ್ (ನಿ.), ಶಿವಮೊಗ್ಗ | 1,27,45,31,708 | – | 23.78 |
| 2 | ಕ್ಯಾಂಪ್ಕೋ ಲಿ., ಮಂಗಳೂರು | 1,52,98,66,448 | 2,19,71,692 | 28.54 |
| 3 | ಹಾಸನ ವಲಯ ಅಡಿಕೆ ಬೆಳೆಗಾರರ ಸಹಕಾರ ಸಂಘ ನಿ., ಶಿವಮೊಗ್ಗ | 27,92,82,726 | 40,29,958 | 5.22 |
| 4 | ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ ನಿ., ಶಿವಮೊಗ್ಗ | 33,12,959 | 49,696 | 0.07 |
| 5 | ಖಾಸಗಿ ವರ್ತಕರು | 2,27,21,07,247 | 4,24,89,123 | 42.39 |
| | **ಒಟ್ಟು** | **5,35,91,01,088** | **6,85,40,469** | **100.00** |

## ಸಂಘದ ಪ್ರಗತಿ ತಃಖ್ತೆ

(ರೂಪಾಯಿಗಳಲ್ಲಿ)

| ಜವಾಬ್ದಾರಿ | 2018–19 | 2019–20 | 2020–21 |
|---|---|---|---|
| 1. ಷೇರು ಬಂಡವಾಳ | 7,41,43,950 | 7,61,96,990 | 7,78,15,990 |
| 2. ಆಪದ್ಧನ | 11,28,94,668 | 12,18,51,989 | 12,14,82,234 |
| 3. ಇತರೇ ನಿಧಿಗಳು | 38,70,59,160 | 40,46,71,096 | 44,88,43,761 |
| 4. ಠೇವಣಿಗಳು ಮತ್ತು ಭದ್ರತಾ ಠೇವಣಿಗಳು | 117,61,97,436 | 1,44,92,36,583 | 1,72,96,83,639 |
| 5. ಇತರೆ ಜವಾಬ್ದಾರಿಗಳು | 19,60,56,324 | 16,96,62,417 | 15,33,99,238 |
| 6. ಸ್ವಂತ ಬಂಡವಾಳ | 57,40,97,778 | 60,27,20,074 | 64,81,41,985 |
| **ಆಸ್ತಿ:** | | | |
| 1. ನಗದು ಮತ್ತು ಬ್ಯಾಂಕ್ ಶಿಲ್ಕು | 7,66,53,761 | 35,90,08,992 | 63,47,91,925 |
| 2. ಹೊರಗಡೆ ಠೇವಣಿಗಳು ಮತ್ತು ಪಾಲು ಬಂಡವಾಳ | 3,98,85,496 | 5,36,84,335 | 3,97,53,752 |
| 3. ನೆಲೆಗೊಳಿಸಿದ ಸ್ಥಿರ ಆಸ್ತಿಗಳು | 12,29,15,036 | 25,70,95,228 | 29,48,80,531 |
| 4. ಕೊಟ್ಟ ಸಾಲಗಳ ಬಾಕಿ | 96,15,40,932 | 68,39,27,102 | 66,46,27,405 |
| 5. ವರ್ತಕರ ಬಾಕಿ | 66,63,11,508 | 11,56,266,113 | 1,32,59,43,569 |
| 6. ದುಡಿಯುವ ಬಂಡವಾಳ | 290,06,32,608 | 2,91,52,96,853 | 3,17,15,06,143 |
| 7. ಆಖೈರು ಮಾಲು ಶಿಲ್ಕು | 93,14,95,224 | 37,15,52,829 | 55,52,41,526 |
| **ದಲ್ಲಾಳಿ ವ್ಯವಹಾರ** | **3,64,45,89,334** | **4,15,27,14,108** | **4,08,45,69,380** |

**ದಿನಾಂಕ: 31/03/2021ಕ್ಕೆ ಸುಸ್ತಿ ಸಾಲದ ವಿವರ :**

| ಕ್ರ.ಸಂ. | ಸುಸ್ತಿ ಅವಧಿ | ಕಟಾವು ಸಾಲ | | ಕೊಳೆ ಸಾಲ | | ಒಟ್ಟು | |
|---|---|---|---|---|---|---|---|
| | | ಸಂಖ್ಯೆ | ಮೊಬಲಗು (ರೂ. ಲಕ್ಷಗಳಲ್ಲಿ) | ಸಂಖ್ಯೆ | ಮೊಬಲಗು (ರೂ. ಲಕ್ಷಗಳಲ್ಲಿ) | ಸಂಖ್ಯೆ | ಮೊಬಲಗು (ರೂ. ಲಕ್ಷಗಳಲ್ಲಿ) |
| 1 | ಒಂದು ವರ್ಷ ಮೇಲ್ಪಟ್ಟು | 275 | 177.32 | 33 | 2.59 | 308 | 179.91 |
| 2 | ಎರಡು ವರ್ಷ ಮೇಲ್ಪಟ್ಟು | 152 | 85.36 | 13 | 0.77 | 165 | 86.14 |
| 3 | ಮೂರು ವರ್ಷ ಮೇಲ್ಪಟ್ಟು | 415 | 227.79 | 38 | 1.81 | 453 | 229.60 |
| | **ಒಟ್ಟು** | **842** | **490.47** | **84** | **5.17** | **926** | **495.65** |

ಸಾಲ ಪಡೆದು ಸುಸ್ತಿಯಾದ ಸದಸ್ಯರ ಪ್ರಕರಣಗಳಲ್ಲಿ, ಮೂರು ವರ್ಷ ಮೇಲ್ಪಟ್ಟ ಪ್ರಕರಣಗಳು ಇದ್ದು, ಇವುಗಳ ವಸೂಲಾತಿಗೆ ಸಂಬಂಧಿಸಿದ ಸದಸ್ಯರ ಮನವೊಲಿಸಲಾಗುತ್ತಿದೆ. ಅನಿವಾರ್ಯವಾದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.



# ಅಭಿನಂದನೆಗಳು

ಸಂಘದ ಸರ್ವತೋಮುಖ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಿ ಮಾರ್ಗದರ್ಶನ ನೀಡಿದ ಮುಖ್ಯ ಮಂತ್ರಿಗಳಾದ **ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ,** ಮಾಜಿ ಮುಖ್ಯ ಮಂತ್ರಿಗಳಾದ **ಸನ್ಮಾನ್ಯ ಶ್ರೀ ಬಿ.ಎಸ್.ಯಡ್ಯೂರಪ್ಪನವರಿಗೆ,** ಗೃಹ ಸಚಿವರು ಹಾಗೂ ಅಡಿಕೆ ಕಾರ್ಯಪಡೆಯ ಅಧ್ಯಕ್ಷರಾದ **ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರರವರಿಗೆ,** ಸಹಕಾರ ಸಚಿವರಾದ **ಸನ್ಮಾನ್ಯ ಶ್ರೀ ಎಸ್.ಟಿ.ಸೋಮಶೇಖರ್‌ರವರಿಗೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ **ಸನ್ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪನವರಿಗೆ,** ಸಂಘದ ವ್ಯಾಪ್ತಿಯ ಎಲ್ಲಾ ಲೋಕಸಭಾ ಸದಸ್ಯರು, ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಹಾಗೂ ಶಿವಮೊಗ್ಗ ಜಿಲ್ಲಾಧಿಕಾರಿಗಳು ಮತ್ತು ಸಂಘದ ಅಧ್ಯಕ್ಷರಾದ **ಸನ್ಮಾನ್ಯ ಶ್ರೀ ಕೆ.ಬಿ.ಶಿವಕುಮಾರ್,** ಐ.ಎ.ಎಸ್.ಇವರಿಗೆ ಹಾಗೂ ಸಂಘದ ಮಾಜಿ ಉಪಾಧ್ಯಕ್ಷರಾದ **ಸನ್ಮಾನ್ಯ ಶ್ರೀ ಸುಬ್ರಹ್ಮಣ್ಯ ವೈ.ಎಸ್. ಇವರಿಗೆ,** ಹಾಲಿ ಉಪಾಧ್ಯಕ್ಷರಾದ **ಸನ್ಮಾನ್ಯ ಶ್ರೀ ಹೆಚ್.ಎಸ್.ಮಹೇಶ್** ಇವರಿಗೆ ಆಡಳಿತ ಮಂಡಳಿಯವರು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತಾರೆ.

ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಸಹಕರಿಸಿದ ಕೇಂದ್ರ ಸಚಿವರು ಮತ್ತು ಸಂಸದರುಗಳಾದ **ಶ್ರೀಯುತರುಗಳಾದ – ನಿರ್ಮಲಾ ಸೀತಾರಾಮನ್, ಅಮಿತ್‌ಷಾ, ರಾಜನಾಥ್‌ಸಿಂಗ್, ಪ್ರಹ್ಲಾದಜೋಷಿ, ಡಾ.ಹರ್ಷವರ್ಧನ್, ಪಿಯೂಶ್‌ಗೋಯಲ್, ಶೋಭಾ ಕರಂದ್ಲಾಜೆ, ಭಗವಂತ್ ಖೂಬಾ, ರಾಜೀವ್ ಚಂದ್ರಶೇಖರ್, ಎ.ನಾರಾಯಣಸ್ವಾಮಿ, ಡಿ.ವಿ.ಸದಾನಂದಗೌಡ, ವಿ.ಮುರಳೀಧರನ್, ರಾಧಾಮೋಹನ್‌ಸಿಂಗ್, ಜೆ.ಪಿ.ನಡ್ಡಾ, ಪಿ.ಪಿ.ಚೌಧರಿ, ಅನಂತಕುಮಾರ್ ಹೆಗಡೆ** ಮುಂತಾದವರಿಗೆ ಮತ್ತು ನಮ್ಮ ಸಂಘದ ವ್ಯಾಪ್ತಿಯ ಲೋಕಸಭಾ ಸದಸ್ಯರುಗಳಾದ **ಬಿ.ವೈ.ರಾಘವೇಂದ್ರ** ಹಾಗೂ **ಜಿ.ಎಂ.ಸಿದ್ದೇಶ್** ಇವರಿಗೆ, ವಿಧಾನಸಭಾಧ್ಯಕ್ಷರಾದ **ವಿಶ್ವೇಶ್ವರ ಹೆಗಡೆ ಕಾಗೇರಿ** ಇವರಿಗೆ ಮತ್ತು ಅಡಿಕೆ ಬೆಳೆಯುವ ಪ್ರದೇಶದ ಎಲ್ಲಾ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರಿಗೂ ಹಾಗೂ ಸಂಸದರಿಗೂ ಆಡಳಿತ ಮಂಡಳಿಯವರು ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತಾರೆ.

ಸಂಘದ ಕಾರ್ಯ ಚಟುವಟಿಕೆಗಳಿಗೆ ಸಕಾಲದಲ್ಲಿ ಸೂಕ್ತ ಸಲಹೆ, ಸಹಕಾರ ನೀಡಿದ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಿಗೂ, ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರಿಗೂ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಗಳಿಗೂ, ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ಇವರಿಗೂ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಅಪರ ನಿರ್ದೇಶಕರು ಮತ್ತು ಜಂಟಿ ನಿರ್ದೇಶಕರಿಗೂ, ನಿರ್ದೇಶಕರು ತೋಟಗಾರಿಕೆ ಇಲಾಖೆ ಬೆಂಗಳೂರು, ನಿರ್ದೇಶಕರು ಕೃಷಿ ಇಲಾಖೆ ಬೆಂಗಳೂರು ಮತ್ತು ನಿರ್ದೇಶಕರು ಕೃಷಿ ಮಾರುಕಟ್ಟೆ ಇಲಾಖೆ ಬೆಂಗಳೂರು ಇವರಿಗೂ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರಿಗೂ ಮತ್ತು ಅಧಿಕಾರಿಗಳಿಗೂ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಇದರ ಉಪಕುಲಪತಿಗಳು, ವಿಜ್ಞಾನಿಗಳು ಮತ್ತು ಸಿಬ್ಬಂದಿಗಳಿಗೂ, ಸಂಘದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳ ಎಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಸಹಾಯಕ ನಿಬಂಧಕರು ಮತ್ತು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರಿಗೂ ಸಂಘದ ಆಡಳಿತ ಮಂಡಳಿಯವರು ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಾರೆ.

ಸಂಘದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿದ ಮೆ.ಕೃಷ್ಣಸ್ವಾಮಿ ಅಂಡ್ ಕೋ., ಸನ್ನದು ಲೆಕ್ಕಪರಿಶೋಧಕರು ಇದರ ಸಿಬ್ಬಂದಿಗಳಿಗೆ ಆಡಳಿತ ಮಂಡಳಿಯವರು ತಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಾರೆ. ಕರ್ನಾಟಕ

ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ (ನಿ.) ಶಿವಮೊಗ್ಗ, ಕ್ಯಾಂಪ್ಕೋ (ನಿ.) ಮಂಗಳೂರು, ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ (ನಿ.) (ಕ್ರ್ಯಾಮ್ಕೋ) ಶಿವಮೊಗ್ಗ, ಹಾಸನ ವಲಯ ಅಡಿಕೆ ಬೆಳೆಗಾರರ ಸಹಕಾರ ಸಂಘ (ನಿ.) ಇವುಗಳ ಅಧ್ಯಕ್ಷರಿಗೂ, ಆಡಳಿತ ಮಂಡಳಿ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ ಅವರು ನಮ್ಮ ಸಂಘಕ್ಕೆ ನೀಡುತ್ತಿರುವ ಬೆಂಬಲ ಹಾಗೂ ಪ್ರೋತ್ಸಾಹಗಳಿಗೆ ಆಡಳಿತ ಮಂಡಳಿಯವರು ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಾರೆ.

ಇದೇ ಸಂದರ್ಭದಲ್ಲಿ ಸಂಘದ ವ್ಯವಹಾರದ ವಿಷಯದಲ್ಲಿ ಸಹಕಾರ ನೀಡಿದ ವಾಣಿಜ್ಯ ತೆರಿಗೆ ಇಲಾಖೆ, ವರಮಾನ ತೆರಿಗೆ ಇಲಾಖಾ ಅಧಿಕಾರಿಗಳಿಗೂ ಹಾಗೂ ಕಾನೂನು ಸಲಹೆ ನೀಡುತ್ತಿರುವ ಶ್ರೀ ಕೆ. ಬಸಪ್ಪಗೌಡರು, ಶ್ರೀ ಎಸ್.ಮಂಜಪ್ಪ ಮತ್ತು ಶ್ರೀ ಎ.ಎನ್. ಫಣಿಭೂಷಣ್ ಇವರಿಗೂ, ತಾಂತ್ರಿಕ ಸಲಹೆಗಾರರಾದ ಶ್ರೀ ಎ.ಟಿ. ಅನಂತಕೃಷ್ಣಮೂರ್ತಿ ಇವರಿಗೂ, ಸಂಘದ ಸಾಫ್ಟ್‌ವೇರ್ ಅಭಿವೃದ್ಧಿ ನಿರ್ವಹಿಸುತ್ತಿರುವ ಅಪೂರ್ವ ಇನ್‌ಫೋಲ್ಯಾಬ್‌ನ ಶ್ರೀ ಕೆ.ವಿ. ಬಾಲಚಂದ್ರ ಮತ್ತು ಇವರ ತಂಡದವರಿಗೂ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಗೂ, ಕಾರ್ಪೊರೇಷನ್ ಬ್ಯಾಂಕ್, ಕೆನರಾ ಬ್ಯಾಂಕ್, ಕರ್ಣಾಟಕ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಇಂಡಿಯನ್ ಬ್ಯಾಂಕ್, ವಿಜಯಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಐ.ಸಿ.ಐ.ಸಿ.ಐ. ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಅಡಿಕೆ ಮಂಡಿ ವರ್ತಕರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗ ಹಾಗೂ ಇತರೆ ಬ್ಯಾಂಕ್ ಅಧಿಕಾರಿಗಳೂ ಮತ್ತು ಆಡಳಿತ ವರ್ಗದವರಿಗೂ, ಎನ್.ಸಿ.ಡಿ.ಸಿ.ಯವರಿಗೂ, ನಬಾರ್ಡ್‌ನವರಿಗೂ, ದಿ ನ್ಯೂ ಇಂಡಿಯಾ ಅಷ್ಯೂರೆನ್ಸ್ ಕಂಪೆನಿ, ಶಿವಮೊಗ್ಗ, ಸ್ಟಾರ್‌ಹೆಲ್ತ್ ಇನ್ಸುರೆನ್ಸ್ ಶಿವಮೊಗ್ಗ ಇವರಿಗೂ, ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ, ಶಿಕಾರಿಪುರ, ಕಡೂರು, ತರೀಕೆರೆ, ಕೊಪ್ಪ, ಶೃಂಗೇರಿ ಮತ್ತು ಚನ್ನಗಿರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರಿಗೂ, ನಮ್ಮಲ್ಲಿ ಅಡಿಕೆ ಖರೀದಿಸುವ ಎಲ್ಲಾ ವರ್ತಕರಿಗೂ, ದಲ್ಲಾಲರಿಗೂ, ಸಂಘದ ಕೇಂದ್ರಕಛೇರಿ ಹಾಗೂ ಎಲ್ಲಾ ಶಾಖೆಗಳಿಗೂ ಭದ್ರತಾ ವ್ಯವಸ್ಥೆ ನೀಡುತ್ತಿರುವ ಏಜೆನ್ಸಿಯವರಿಗೂ, ಸಂಘದ ಕಟ್ಟಡ ನಿರ್ಮಾಣ ಗುತ್ತಿಗೆದಾರರಿಗೂ ಹಾಗೂ ಸಂಘಕ್ಕೆ ಸೇವೆ ಸಲ್ಲಿಸುತ್ತಿರುವ ಏಜೆನ್ಸಿಗಳಿಗೂ ಹಾಗೂ ಇತರೆಲ್ಲಾ ವಿಧದಲ್ಲಿ ಸಂಘಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಮತ್ತು **'ಬಹುಮುಖ್ಯವಾಗಿ ಸಂಘಕ್ಕೆ ಅಡಿಕೆ ಕಳುಹಿಸಿ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವ ಎಲ್ಲಾ ಸದಸ್ಯರಿಗೂ'** ಮತ್ತು ಸಂಘದ ಏಳಿಗೆಗೆ ಹಗಲಿರುಳು ಶ್ರಮಿಸುತ್ತಿರುವ ನೌಕರ ವರ್ಗದವರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುವ..........

**ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)**
**ಮತ್ತು ಆಡಳಿತ ಮಂಡಳಿ**



# ಸಂಘದಿಂದ ನೀಡುತ್ತಿರುವ ಸೌಲಭ್ಯಗಳು

**ಸಹಾಯಧನ:**

* ಅಸ್ತ್ರ ಒಲೆ ನಿರ್ಮಾಣಕ್ಕೆ ರೂ.1,000 ಸಹಾಯಧನ ನೀಡಿಕೆ – ವರದಿ ಸಾಲಿನಲ್ಲಿ 58 ಜನರಿಗೆ ಸಹಾಯಧನ ನೀಡಿದೆ.
* ಗಟರ್ ಸ್ಪ್ರೇಯರ್ ಯಂತ್ರದ ಖರೀದಿಗೆ ರೂ.1,000 ಸಹಾಯಧನ ನೀಡಿಕೆ– ವರದಿ ಸಾಲಿನಲ್ಲಿ 88 ಜನರಿಗೆ ಸಹಾಯಧನ ನೀಡಿದೆ
* ಡ್ರೈಯರ್ ನಿರ್ಮಾಣಕ್ಕೆ ರೂ.7,000 ಸಹಾಯಧನ ನೀಡಿಕೆ – ವರದಿ ಸಾಲಿನಲ್ಲಿ 12 ಸದಸ್ಯರಿಗೆ ಸಹಾಯಧನ ನೀಡಿದೆ.

**ವಿಮೆ:**

**ಗುಂಪು ವಿಮೆ:**

* **'ಮಾಮ್‌ಕೋಸ್'** ಸಂಸ್ಥೆಯು ತನ್ನ ಸದಸ್ಯರಿಗಾಗಿ 'ಗುಂಪು ವಿಮಾ ಅಭಿರಕ್ಷೆ ಯೋಜನೆ' ಅನ್ನು ಜಾರಿಗೆ ತಂದಿದ್ದು, ಇದರಲ್ಲಿ ಸದಸ್ಯರು ಸಂಘದ ಶಾಖೆಗಳ ಮೂಲಕ ವಂತಿಕೆ ಮೊಬಲಗನ್ನು ಪಾವತಿಸಿದರೆ ಆ ಸದಸ್ಯರಿಗೆ ಮತ್ತು ಅವರ ಹೆಸರಿಸದ ಅವಲಂಬಿತ ಒಬ್ಬ ಕೂಲಿ ಕಾರ್ಮಿಕರಿಗೆ ಹಾಗೂ ಕುಟುಂಬದ ಸದಸ್ಯರಿಗೆ ವಿಮೆ ಮಾಡಲಾಗುವುದು.

**ನೋಂದಣಿಯ ಅವಧಿ:**

| ಹಂತ | ವಿಮಾ ಕಂತು ಜಮಾ ಮಾಡಿಸುವ ಅವಧಿ | ಯೋಜನೆ ಜಾರಿ ದಿನಾಂಕ |
|---|---|---|
| ಒಂದನೇ ಹಂತ | 01/04/2021 ರಿಂದ 29/05/2021 | 01/06/2021 ರಿಂದ 31/05/2022 |
| ಎರಡನೇ ಹಂತ | 01/10/2021 ರಿಂದ 29/11/2021 | 01/12/2021 ರಿಂದ 30/11/2022 |

**ವಿಮಾ ಕಂತು (ಪ್ರೀಮಿಯಂ) ಹಾಗೂ ಪರಿಹಾರ**

| ಕ್ರ. ಸಂ. | ವಯೋಮಿತಿ | ವಿಮಾ ಕಂತು ಮೊಬಲಗು | ಪರಿಹಾರದ ಮೊತ್ತ |
|---|---|---|---|
| 1. | 70 ವರ್ಷದೊಳಗಿನವರಿಗೆ (ಸದಸ್ಯರು ಹಾಗೂ ಅವರ ಹೆಸರಿಸದ ಒಬ್ಬ ಅವಲಂಬಿತ ಕೂಲಿ ಕಾರ್ಮಿಕ | ರೂ. 1000 | *ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಠ ರೂ.1,50,000/– ದವರೆಗೆ ಮತ್ತು ಅಂಬ್ಯುಲೆನ್ಸ್ ವೆಚ್ಚ ಗರಿಷ್ಟ ರೂ.1000<br>* ಅಪಘಾತವಾಗಿ ಮರಣ ಹೊಂದಿದಲ್ಲಿ ತಲಾ ಒಬ್ಬ ಸದಸ್ಯರಿಗೆ ಮತ್ತು ಅವಲಂಬಿತ ಒಬ್ಬ ಕೂಲಿ ಕಾರ್ಮಿಕರಿಗೆ ಮರಣ ಪರಿಹಾರ ಗರಿಷ್ಠ ರೂ.5,00,000/– ಮತ್ತು ಮೃತರನ್ನು ಆಸ್ಪತ್ರೆಯಿಂದ ಮನೆಗೆ ತೆಗೆದುಕೊಂಡು ಹೋಗಲು ಗರಿಷ್ಠ ರೂ 2500/– |
| 2. | 71–80 ವರ್ಷದೊಳಗಿನವರಿಗೆ (ಸದಸ್ಯರಿಗೆ ಮಾತ್ರ 71–80 ವರ್ಷ ಮತ್ತು ಅವರ ಹೆಸರಿಸದ ಅವಲಂಬಿತ ಕೂಲಿ ಕಾರ್ಮಿಕರಿಗೆ 70 ವರ್ಷದೊಳಗಿನವರಿರಬೇಕು) | ರೂ. 850 | *ಅಪಘಾತವಾದಲ್ಲಿ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಠ ರೂ.1,00,000/– ರವರೆಗೆ ಮತ್ತು ಅಂಬ್ಯುಲೆನ್ಸ್ ವೆಚ್ಚ ಗರಿಷ್ಟ ರೂ. 1,000/– |

| ಕ್ರ. ಸಂ. | ವಯೋಮಿತಿ | ವಿಮಾ ಕಂತು ಮೊಬಲಗು | ಪರಿಹಾರದ ಮೊತ್ತ |
|---|---|---|---|
| | | | * ಅಪಘಾತವಾಗಿ ಮರಣ ಹೊಂದಿದಲ್ಲಿ ತಲಾ ಒಬ್ಬ ಸದಸ್ಯರಿಗೆ ಮತ್ತು ಅವಲಂಬಿತ ಕೂಲಿ ಕಾರ್ಮಿಕರಿಗೆ ಮರಣ ಪರಿಹಾರ ಗರಿಷ್ಠ ರೂ 4,00,000/– ಮತ್ತು ಮೃತರನ್ನು ಆಸ್ಪತ್ರೆಯಿಂದ ಮನೆಗೆ ತೆಗೆದುಕೊಂಡು ಹೋಗಲು ಗರಿಷ್ಠ ರೂ. 2500/– |
| 3. | 81–90ವರ್ಷದೊಳಗಿನವರಿಗೆ (ಸದಸ್ಯರ ಹೆಸರಿಸದ ಒಬ್ಬ 70 ವರ್ಷದೊಳಗಿನ ಅವಲಂಬಿತ ಕೂಲಿ ಕಾರ್ಮಿಕರಿಗೆ ಮಾತ್ರ ಈ ಸೌಲಭ್ಯ ಅನ್ವಯುವಾಗುತ್ತದೆ ಹಾಗೂ ಈ ವಯೋಮಿತಿ ಹೊಂದಿದ ಸದಸ್ಯರಿಗೆ ಯಾವುದೇ ಸೌಲಭ್ಯ ಅನ್ವಯವಾಗುವುದಿಲ್ಲ) | ರೂ. 690 | * ಸದಸ್ಯರ ಹೆಸರಿಸದ ಒಬ್ಬ 70 ವರ್ಷದೊಳಗಿನ ಅವಲಂಬಿತ ಕೂಲಿ ಕಾರ್ಮಿಕರಿಗೆ ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆ ಚಿಕಿತ್ಸಾ ಖರ್ಚು ಗರಿಷ್ಠ ರೂ 50,000/– ದವರೆಗೆ & ಅಂಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ 1000/–<br><br>* ಸದಸ್ಯರ ಹೆಸರಿಸದ ಒಬ್ಬ 70 ವರ್ಷದೊಳಗಿನ ಅವಲಂಬಿತ ಕೂಲಿ ಕಾರ್ಮಿಕರಿಗೆ ಅಪಘಾತವಾಗಿ ಮರಣ ಹೊಂದಿದಲ್ಲಿ ಒಬ್ಬ ಕೂಲಿ ಕಾರ್ಮಿಕರಿಗೆ ಮರಣ ಪರಿಹಾರ ಗರಿಷ್ಠ ರೂ. 3,00,000/– & ಮೃತರನ್ನು ಆಸ್ಪತ್ರೆಯಿಂದ ಮನೆಗೆ ತೆಗೆದುಕೊಂಡು ಹೋಗಲು ಗರಿಷ್ಠ ರೂ. 2500/– |
| 4. | ಸದಸ್ಯರ ಕುಟುಂಬಕ್ಕೆ– (10–70 ವರ್ಷದೊಳಗಿನವರಿಗೆ ಸದಸ್ಯರ ಗಂಡ/ಹೆಂಡತಿ, ಮಗ/ಸೊಸೆ/ ಅವಿವಾಹಿತ ಮಗಳು/ಸಹೋದರ/ ಸಹೋದರಿ) | ರೂ.125 ತಲಾ ಒಬ್ಬರಿಗೆ | * ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಠ ರೂ.50000/–ದವರೆಗೆ & ಅಂಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ 1000/–<br>* ಅಪಘಾತವಾಗಿ ಮರಣ ಹೊಂದಿದಲ್ಲಿ ಮರಣ ಪರಿಹಾರ ಗರಿಷ್ಠ ರೂ. 1,00,000/– & ಮೃತರನ್ನು ಆಸ್ಪತ್ರೆಯಿಂದ ಮನೆಗೆ ತೆಗೆದುಕೊಂಡು ಹೋಗಲು ಗರಿಷ್ಠ ರೂ 2500/– |

– ವರದಿ ಸಾಲಿನಲ್ಲಿ, ಈ ಯೋಜನೆ ಅಡಿಯಲ್ಲಿ 61 ಪ್ರಕರಣಗಳಲ್ಲಿ ರೂ.70,53,037 ಪರಿಹಾರ ನೀಡಲಾಗಿದೆ.

**ಆರೋಗ್ಯ ವಿಮೆ:**

ಸಂಘದಲ್ಲಿ ಅಳವಡಿಸಿರುವ 'ಆರೋಗ್ಯ ವಿಮಾ' ಯೋಜನೆಯು ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರಿಗೆ 2021–22ನೇ ಸಾಲಿಗೂ ಮುಂದುವರೆದಿದ್ದು, ಸಂಘದಲ್ಲಿ ವ್ಯವಹಾರ ನಡೆಸುವುದರ ಮೂಲಕ ಈ ಯೋಜನೆಯ ಪ್ರಯೋಜನ ಪಡೆಯಲು ಕೋರಿದೆ. ಹೆಚ್ಚಿನ ಮಾಹಿತಿಗೆ ಸಂಘದ ಹತ್ತಿರದ ಶಾಖೆಯನ್ನು ಸಂಪರ್ಕಿಸುವುದು.

## ಎಸ್.ಎಂ.ಎಸ್.

ಎಸ್.ಎಂ.ಎಸ್. ಮೂಲಕ ಅಡಿಕೆ ಧಾರಣೆ ತಿಳಿಯಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಶಾಖೆಗೆ ನೀಡಿದಲ್ಲಿ ಆ ಸದಸ್ಯರಿಗೆ ಶಾಖೆಯಿಂದ ಎಸ್.ಎಂ.ಎಸ್. ಮೂಲಕ ಅಡಿಕೆ ಧಾರಣೆಯನ್ನು ಹಾಗೂ ಅಡಿಕೆಯನ್ನು ವ್ಯಾಪಾರಕ್ಕೆ ಬಿಟ್ಟ ಸದಸ್ಯರಿಗೆ ಆ ದಿನದ ಅವರ ಅಡಿಕೆ ಟೆಂಡರಿನ ದರವನ್ನು ತಿಳಿಸಲಾಗುತ್ತದೆ. ಸಂಘದ ವರ್ತಕರಿಗೂ ಈ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಹಾಗೆಯೇ, ಸಂಘಕ್ಕೆ ತಮ್ಮ ಕೆ.ವೈ.ಸಿ. ದಾಖಲೆಗಳನ್ನು ನೀಡಿದ ಸದಸ್ಯರಿಗೆ ಅವರ ವ್ಯವಹಾರದ ವಿವರಗಳನ್ನು ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತಿದೆ.

## ವೆಬ್‌ಸೈಟ್

ಸಂಘದ"ವೆಬ್‌ಸೈಟ್" (www.mamcos.info) ನಲ್ಲಿ ಮಾರುಕಟ್ಟೆ ದರಗಳೊಂದಿಗೆ ಸಂಘದ ಶಾಖೆಗಳಲ್ಲಿನ ಪ್ರತಿ ಟೆಂಡರ್‌ನ ದರಗಳ ಸಹಿತ ಎಲ್ಲಾ ಅಗತ್ಯ ಮಾಹಿತಿಗಳು ಲಭ್ಯವಿದೆ.

## ವಾಹನ:

ಎ.ಪಿ.ಎಂ.ಸಿ.ಯವರಿಂದ ಪಡೆದ ಲಾರಿಯಲ್ಲಿ ಸಂಘದ ಸದಸ್ಯರ ಅಡಿಕೆ ಮೂಟೆಯನ್ನು ಸಾಗಣೆ ಮಾಡಲಾಗುತ್ತಿದೆ.

## ವೈದ್ಯಕೀಯ ಸೌಲಭ್ಯಗಳು

ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಕಣ್ಣಿನ ಚಿಕಿತ್ಸೆಯ ನೆರವಿನ ಉದ್ದೇಶದಿಂದ **'ಶಂಕರ ಕಣ್ಣಿನ ಆಸ್ಪತ್ರೆ'** ಹರಕೆರೆ, ಶಿವಮೊಗ್ಗ ಇವರೊಂದಿಗೆ 'ಹೊರರೋಗಿ ಚಿಕಿತ್ಸೆ'ಗೆ ರಿಯಾಯಿತಿ ದರದಲ್ಲಿ ಒಪ್ಪಂದವನ್ನು ಮಾಡಿಕೊಂಡಿದ್ದು, ಈ ವೆಚ್ಚದಲ್ಲಿ ಕೆಲ ಅಂಶವನ್ನು ಸದಸ್ಯರ ಮತ್ತು ಕುಟುಂಬ ವರ್ಗದವರ ಪರವಾಗಿ ಸಂಘವೇ ಪಾವತಿಸುತ್ತಿದೆ. ಶಸ್ತ್ರಚಿಕಿತ್ಸೆಗೆ, ಕನ್ನಡಕಗಳ ಖರೀದಿಗೆ ಹಾಗೂ ಎಲ್ಲಾ ತಪಾಸಣೆ ಮತ್ತು ಇತರ ಪ್ರೊಸೀಜರಲ್ ವೆಚ್ಚಗಳ ಮೇಲೆ ವಿಶೇಷ ರಿಯಾಯಿತಿ ಸೌಲಭ್ಯ ಇರುತ್ತದೆ.

ವರದಿ ಸಾಲಿನಲ್ಲಿ ಒಟ್ಟು 833 ಜನರು ಇದರ ಸೌಲಭ್ಯವನ್ನು ಪಡೆದಿದ್ದು, ಈ ಆಸ್ಪತ್ರೆಗೆ ಈ ಬಾಬ್ತು ಸಂಘದಿಂದ ರೂ.83300 ಪಾವತಿಸಿದೆ.

## ಸಂಶೋಧನೆಗೆ ಆರ್ಥಿಕ ಸಹಾಯ ಮತ್ತು ವಿಜ್ಞಾನಿಗಳಿಂದ ಪರಿಹಾರ ಸೌಲಭ್ಯ

ಸದಸ್ಯರ ಅಡಿಕೆ ತೋಟಗಳಿಗೆ ತಗಲುವ ರೋಗಗಳ ಬಗೆಗೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದಿಂದ ವಿಜ್ಞಾನಿಗಳ ಸಲಹೆಯನ್ನು ಪಡೆಯುವುದು.

ವರದಿ ಸಾಲಿನಲ್ಲಿ ಸಂಘಕ್ಕೆ ಪತ್ರ ಬರೆದ 09 ಜನ ಸದಸ್ಯರ ತೋಟಗಳಿಗೆ ವಿಜ್ಞಾನಿಗಳು ಭೇಟಿ ನೀಡಿ ಸಲಹೆ / ಪರಿಹಾರ ಸೂಚಿಸಿರುತ್ತಾರೆ.

**ಪಾರಿತೋಷಕ ಬಹುಮಾನ**

ಸದಸ್ಯರ ಮಕ್ಕಳಲ್ಲಿ ಪ್ರತಿ ವರ್ಷವೂ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ ರೂ.2,500 ಮತ್ತು ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ತಲಾ ರೂ.3,000 ಹಾಗೂ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ / ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆದ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದವರಿಗೆ ತಲಾ ರೂ.3,000ರಂತೆ ಪ್ರತಿ ವರ್ಷ ಪ್ರೋತ್ಸಾಹಧನ ನೀಡಿಕೆ ಹಾಗೂ ಜಿ.ಡಿ.ಸಿ. ತರಬೇತಿ ಪಡೆದ ಪ್ರತಿ ತಂಡದಲ್ಲಿ ಹೆಚ್ಚು ಅಂಕ ಪಡೆದ ನಾಲ್ಕು ಜನರಿಗೆ ತಲಾ ರೂ.2,000 ನಗದು ಬಹುಮಾನ.

2019–20ನೇ ಸಾಲಿನಲ್ಲಿ 51 ಪ್ರತಿಭೆಗಳಿಗೆ ರೂ.1,35,500 ಪಾವತಿಸಿದೆ.

**ಮರಣೋತ್ತರ ಸೌಲಭ್ಯ**

ಸದಸ್ಯರು ಮೃತರಾದಾಗ ಅವರ ಅಂತ್ಯ ಸಂಸ್ಕಾರಕ್ಕೆ ರೂ. 5,000 ಆರ್ಥಿಕ ನೆರವು

– ವರದಿ ಸಾಲಿನಲ್ಲಿ ಒಟ್ಟು 288 ಪ್ರಕರಣಗಳಲ್ಲಿ ರೂ. 14,40,000 ಮೊತ್ತವನ್ನು ಪಾವತಿಸಿದೆ.

ಸಂಘವು "ಮರಣೋತ್ತರ ನಿಧಿ ಯೋಜನೆ–II" ಅನ್ನು ಅನುಷ್ಠಾನಗೊಳಿಸಿದ್ದು, ಸದಸ್ಯರು ವಿವಿಧ ಹಂತಗಳ ವಂತಿಕೆಯನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಬಹುದು. ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಯೋಜನೆಯ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು.

ವರದಿ ಸಾಲಿನಲ್ಲಿ ಮರಣೋತ್ತರ ನಿಧಿ ಯೋಜನೆ –IIರಲ್ಲಿ 15 ಜನ ಸದಸ್ಯರು ನೋಂದಾಯಿಸಿದ್ದು, ಮರಣೋತ್ತರ ನಿಧಿ ಯೋಜನೆ–I ರಲ್ಲಿನ ಒಟ್ಟು 39 ಕ್ಲೈಮ್ ಪ್ರಕರಣಗಳಲ್ಲಿ 19 ಪ್ರಕರಣಗಳಲ್ಲಿ ರೂ. 15,00,000 ಕ್ಲೈಮ್ ಪಾವತಿಯಾಗಿದ್ದು, 20 ಪ್ರಕರಣಗಳಲ್ಲಿ ಬಡ್ಡಿಯೊಂದಿಗೆ ರೂ. 1,65,777 ಮರು ಪಾವತಿ ಮಾಡಲಾಗಿದೆ.



## ಸದಸ್ಯರುಗಳಿಂದ ಪ್ರಸ್ತುತ ಈ ಕೆಳಕಂಡ ದರದಲ್ಲಿ ಠೇವಣಿಗಳನ್ನು ಸ್ವೀಕರಿಸಲಾಗುತ್ತಿದೆ

| | | |
|---|---|---|
| ❋ ಸದಸ್ಯರ ಉಳಿತಾಯ ಖಾತೆ | : | ಶೇ. 4.00 |
| ❋ ನಿಗದಿತ ಅವಧಿ ಠೇವಣಿಗಳು: 12 ತಿಂಗಳುಗಳಿಗೆ (ಚಾಲ್ತಿ ಬಡ್ಡಿದರ) | : | ಶೇ. 6.50 |

**ಸಂಘದಲ್ಲಿಯೇ ಅಡಿಕೆಯನ್ನು ಹಾಕಿ ವ್ಯವಹರಿಸುವ ಸಂಘದ ಹಿರಿಯ ನಾಗರಿಕ ಸದಸ್ಯರಿಗೆ**

| | | |
|---|---|---|
| ❋ ನಿಗದಿತ ಅವಧಿ ಠೇವಣಿಗಳು: 12 ತಿಂಗಳುಗಳಿಗೆ | : | ಶೇ. 6.75 |

**ಸದಸ್ಯರುಗಳಿಗೆ ನೀಡುವ ಸಾಲಗಳ ಮೇಲೆ ಈ ಕೆಳಕಂಡ ಬಡ್ಡಿದರವನ್ನು ವಿಧಿಸಲಾಗುತ್ತಿದೆ.**

| | | |
|---|---|---|
| ❋ ಕಟಾವು ಹಾಗೂ ಕೊಳೆ ಔಷಧಿ ಸಾಲ | : | ಶೇ. 11.50 |
| ❋ ಅಡಿಕೆ ಆಧಾರ ಸಾಲ | : | ಶೇ. 11.50 |
| ❋ ಚಾಲ್ತಿ ಸಾಲಿನ ಕಟಾವು ಮತ್ತು ಕೊಳೆ ಔಷಧಿ ಸಾಲವನ್ನು ಚಾಲ್ತಿ ಸಾಲಿನಲ್ಲಿ (ಸುಸ್ತಿ ಆಗದಂತೆ) ಜಮಾ ಮಾಡಿದಲ್ಲಿ | : | ಶೇ. 11.00 |



# 2019–20ನೇ ಸಾಲಿನ ಪ್ರತಿಭಾ ಪುರಸ್ಕಾರ

ಸಂಘದ ಬೆಳ್ಳಿ ಹಬ್ಬದ ಕೊಡುಗೆಯಾಗಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿದವರಿಗೆ ತಲಾ ರೂ.2,500–00ಗಳನ್ನು ಮತ್ತು ಸುವರ್ಣ ಮಹೋತ್ಸವ ಕೊಡುಗೆಯಾಗಿ ಪದವಿ ಪರೀಕ್ಷೆಗಳಲ್ಲಿ ಹಾಗೂ ವಜ್ರ ಮಹೋತ್ಸವ ಕೊಡುಗೆಯಾಗಿ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ತಲಾ ರೂ.3,000–00ಗಳನ್ನು ಈ ಕೆಳಕಂಡಂತೆ ಸದಸ್ಯರ ಮಕ್ಕಳಿಗೆ ಹಂಚಲಾಗಿದೆ.

## ಭದ್ರಾವತಿ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | S.S.L.C. | ನಿಖಿತ ಬಾಯಿ ಕೆ ಬಿನ್ ಕರಿಯನಾಯ್ಕ, ಪದ್ಮೇನಹಳ್ಳಿ, ಸಟ್ಟೇಹಳ್ಳಿ, ಭದ್ರಾವತಿ | 601 | 96.16 | 2,500 |
| 2 | P.U.C. | ಆಕಾಶ್ ಎಂ. ಬಿನ್ ಮಲ್ಲೇಶಪ್ಪ ಎಂ. ಮಾರುತಿನಗರ, ಭದ್ರಾವತಿ | 542 | 90.33 | 2,500 |
| 3 | B.A. | ಮಲ್ಲೇಶ ಜಿ.ವೈ. ಬಿನ್ ಯೋಗೇಶ ಜಿ.ಎಸ್. ಗುಡುಮಘಟ್ಟ, ಆನವೇರಿ, ಭದ್ರಾವತಿ ತಾ. | 921 | 76.75 | 3,000 |

## ಚನ್ನಗಿರಿ ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ಯೋಗೇಶ್ ಪಿ.ಎಸ್. ಬಿನ್ ಸೋಮಶೇಖರಪ್ಪ ಪಿ.ಎಸ್. ವಿ. ಬನ್ನಿಹಟ್ಟಿ ವಡ್ನಾಳು, ಚನ್ನಗಿರಿ ತಾಲ್ಲೂಕು | 586 | 93.76 | 2,500 |
| 2 | P.U.C. | ಸೃಷ್ಠಿ ಬಿ.ಎಲ್. ಬಿನ್ ಲಿಂಗರಾಜು ಬಿ.ಹೆಚ್. ಗೊಪ್ಪೇನಹಳ್ಳಿ, ಚನ್ನಗಿರಿ ತಾಲ್ಲೂಕು | 520 | 86.67 | 2,500 |

## ಚಿಕ್ಕಮಗಳೂರು ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ತೇಜಸ್ ಕುಮಾರ್ ಕೆ.ಎಲ್. ಬಿನ್ ಲವಕುಮಾರ ಕೆ.ಸಿ., ಕಳಸಾಪುರ ಚಿಕ್ಕಮಗಳೂರು ತಾಲ್ಲೂಕು | 445 | 89.00 | 2,500 |

## ಹೊಸನಗರ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | S.S.L.C. | ಸುಜಿತ್ ಕೆ.ಎಸ್. ಬಿನ್ ಸುರೇಶ ಕೆ.ಎಸ್. ಕಾಡವಳ್ಳಿ, ಭೀಮನಕೆರೆ, ಹೊಸನಗರ ತಾ. | 611 | 97.76 | 2,500 |
| 2 | P.U.C. | ಪ್ರಜ್ಞಾ ಆರ್. ಬಿನ್ ರಾಜಶೇಖರ ಕೆ. ಮಳಲಿಕೊಪ್ಪ, ಚಕ್ರಾನಗರ, ಹೊಸನಗರ ತಾ. | 530 | 88.33 | 2,500 |
| 3 | B.A. | ಶ್ರೀಲತಾ ಎಸ್.ಎನ್. ಬಿನ್ ನಾಗರಾಜ ಎಸ್.ಎನ್., ಸುಳಗೋಡು, ನಗರ, ಹೊಸನಗರ ತಾಲ್ಲೂಕು | 933 | 77.75 | 3,000 |
| 4 | B.Com | ವಿಜೇತ ಹೆಚ್.ಎಂ. ಬಿನ್ ಮಧುಸೂಧನ ಬಿ.ಆರ್. ಹರತಾಳು, ಹೊಸನಗರ ತಾಲ್ಲೂಕು | 1262 | 84.13 | 3,000 |
| 5 | B.Sc. | ಅನನ್ಯ ಎಂ.ಕೆ. ಬಿನ್ ಕಮಲಾಕರ ಎಂ.ವಿ. ಮಾವಿನಹಕ್ಲು, ರ‍್ಯಾವೆ, ಹೊಸನಗರ ತಾ. | 1603 | 89.05 | 3,000 |
| 6 | B.Sc, Agriculture | ಅರ್ಪಿತ ಟಿ.ಎಂ. ಬಿನ್ ಮಹಾಬಲಪ್ಪಗೌಡ ಚಿಕ್ಕಜೇನಿ, ಕೋಟೆತಾರಿಗ, ಹೊಸನಗರ ತಾ. | 8.84 | 88.4 | 3,000 |

## ಕೊಪ್ಪ ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ಇಂಚರ ಕೆ.ಎಂ. G/D ಗಣೇಶಯ್ಯ ಕೆ.ಆರ್. ಕಮ್ಮಾರಹಳ್ಳಿ, ಅಡ್ಡಗದ್ದೆ, ಕೊಪ್ಪ ತಾಲ್ಲೂಕು | 622 | 99.52 | 2,500 |
| 2 | P.U.C. | ಸೀಮಿತ ಎಂ.ಶೆಟ್ಟಿ ಬಿನ್ ಮಂಜುನಾಥ ಶೆಟ್ಟಿ ಬಿ.ಕೆ., ಬಚ್ಚಣಿಕೆ, ಮೇಲುಕೊಪ್ಪ, ಕೊಪ್ಪ ತಾ. | 582 | 97.00 | 2,500 |
| | P.U.C. | ಶಿಬಿ ಕೆ.ಆರ್. ಬಿನ್ ರವೀಂದ್ರನಾಥ ಕೆ.ಎಸ್. ಕೊಪ್ಪ | 582 | 97.00 | 2,500 |
| 3 | B.Com. | ಭೂಮಿಕ ಕೆ.ಪಿ. ಬಿನ್ ಪ್ರಸನ್ನ ಕೆ.ಪಿ. ಕೆಸವೆ, ಕೊಪ್ಪ ತಾಲ್ಲೂಕು | 1414 | 94.27 | 3,000 |

## ಸಾಗರ ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ಶ್ರೀಧರ ಹೆಚ್.ಯು. ಬಿನ್ ಉಮೇಶ ಹೆಚ್.ಎನ್., ಮೇಲಿನ ದೊಂಬೆ, ಖಂಡಿಕ, ಸಾಗರ ತಾಲ್ಲೂಕು | 612 | 97.92 | 2,500 |
| 2 | P.U.C. | ಲಕ್ಷ್ಮೀಶ್ರೀ ಸಿ.ಎಂ. ಬಿನ್ ಮಂಜುನಾಥ ಸಿ.ಆರ್. ಬೆಳ್ಳೆಣ್ಣೆ, ಮರ್ತೂರು, ಸಾಗರ ತಾಲ್ಲೂಕು | 577 | 96.17 | 2,500 |
| 3 | B.Sc. | ಪೂಜಾ ಎಸ್. ಬಿನ್ ಶಚೀಂದ್ರ ಟಿ.ಸಿ. ಜೋಗ ರಸ್ತೆ, ಸಾಗರ | 9.5 | 95.00 | 3,000 |

## ಶಿಕಾರಿಪುರ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | S.S.L.C. | ಶರಣ್ಯ ಎಂ. ಬಿನ್ ಮಂಜುನಾಥ ಎನ್.ಡಿ. ದೊಡ್ಡಕೇರಿ, ಶಿಕಾರಿಪುರ | 594 | 95.04 | 2,500 |
| 2 | P.U.C. | ಸ್ಫೂರ್ತಿ ಹೆಚ್.ಎನ್. ಬಿನ್ ನಂದೀಶ್ವರಪ್ಪ ಹೆಚ್.ಎಂ. ಹಿರೇಜಂಬೂರು ಶಿಕಾರಿಪುರ ತಾ. | 547 | 91.17 | 2,500 |
| | P.U.C. | ಅರವಿಂದ ಎಂ.ಎಲ್. ಬಿನ್ ಲಕ್ಷ್ಮೀಕಾಂತ್ ಎಂ.ಪಿ., ಕಪ್ಪನಹಳ್ಳಿ, ಶಿಕಾರಿಪುರ ತಾಲ್ಲೂಕು | 547 | 91.17 | 2,500 |

## ಶಿವಮೊಗ್ಗ ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ಅಪ್ರಮೇಯ ಎ.ಎಸ್. ಬಿನ್ ಶೇಷಗಿರಿ ಎ.ಸಿ., ಗೋಪಾಳ, ಶಿವಮೊಗ್ಗ | 572 | 95.33 | 2,500 |
| 2 | P.U.C. | ಅನನ್ಯ ಎಂ.ಆರ್. ಬಿನ್ ರತ್ನಾಕರ ಎಂ.ಜೆ. ಶರಾವತಿ ನಗರ, ಶಿವಮೊಗ್ಗ | 574 | 95.67 | 2,500 |
| 3 | B.Sc., Agriculture | ಸಹನ ಪಿ.ಎಸ್. ಬಿನ್ ಶಿವರಾಜಪ್ಪ ಪಿ.ಎಸ್. ಹಾಡೋನಹಳ್ಳಿ, ಶಿವಮೊಗ್ಗ ತಾ. | 8.8 | 88.00 | 3,000 |
| 4 | B.E. | ಚಿಂತನ್ ಎಸ್. ಅಡ್ಡೋಣಿ ಬಿನ್ ಶೇಷಗಿರಿ ಎ.ಸಿ., ಗೋಪಾಳ, ಶಿವಮೊಗ್ಗ | 9.19 | 91.9 | 3,000 |
| 5 | M.Tec | ಅಪೂರ್ವ ಹೆಚ್.ಎಂ. ಬಿನ್ ಅಮೃತ ಕೆ. ಬಿ.ಬೀರನಹಳ್ಳಿ, ಶಿವಮೊಗ್ಗ ತಾಲ್ಲೂಕು | 9 | 90.00 | 3,000 |

## ಸೊರಬ ತಾಲ್ಲೂಕು

| | | | | | |
|---|---|---|---|---|---|
| 1 | S.S.L.C. | ಸುಮನಾ ಭಾವೆ G/D ಅಚ್ಚುತ ಭಟ್ ಭಾವೆ ಮುಖ್ಯರಸ್ತೆ, ಸೊರಬ | 617 | 98.72 | 2,500 |
| 2 | P.U.C. | ಚಿತ್ಕಲಾ ವಿ.ಭಟ್ ಬಿನ್ ಸತ್ಯನಾರಾಯಣ ಬರಿಗೆ, ಬಿ.ದೊಡ್ಡೇರಿ, ಸೊರಬ ತಾಲ್ಲೂಕು | 588 | 98.00 | 2,500 |
| 3 | B.Sc. | ಕವಿ ಶರ್ಮಾ ಹೆಚ್.ಎ. ಬಿನ್ ಅಶೋಕ ವಿ. ಹೊಸಬಾಳೆ, ಸೊರಬ ತಾಲ್ಲೂಕು | 8.63 | 86.25 | 3,000 |

## ಶೃಂಗೇರಿ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | S.S.L.C. | ಕವನ ವೈ.ಪಿ. ಬಿನ್ ಪ್ರವೀಣಕುಮಾರ್ ವೈ.ವಿ., ಎದುರುಮನೆ, ಹೊನ್ನವಳ್ಳಿ, ಶೃಂಗೇರಿ ತಾಲ್ಲೂಕು | 579 | 92.64 | 2,500 |
| 2 | P.U.C. | ಸುರಕ್ಷಿತ್ ಡಿ.ಟಿ. ಬಿನ್ ತಿಮ್ಮಪ್ಪ ಧರೇಕೊಪ್ಪ, ಶೃಂಗೇರಿ ತಾಲ್ಲೂಕು | 563 | 93.83 | 2,500 |
| 3 | B.Com | ನಾಗಶ್ರೀ ಹೆಚ್.ಕೆ. ಬಿನ್ ಕೃಷ್ಣಮೂರ್ತಿ ಎಂ. ಹಂಚಲಿ, ಕಾವಡಿ, ಶೃಂಗೇರಿ ತಾಲ್ಲೂಕು | 1257 | 83.8 | 3,000 |
| 4 | M.A. | ರಂಜಿತ ಕೆ.ವಿ. ಬಿನ್ ವಿಜೇಂದ್ರನಾಯ್ಕ ಕೆ. ಕೆಸರಕೊಡಿಗೆ, ಧರೇಕೊಪ್ಪ, ಶೃಂಗೇರಿ ತಾ. | 451 | 56.38 | 3,000 |
| 5 | B.E. | ಪ್ರಿಯಾ ಜೆ.ಎ. ಬಿನ್ ಅಶ್ವಥನಾರಾಯಣ ಜೆ.ಸಿ., ಜಕ್ಕರಕೂಡಿಗೆ, ನೆಮ್ಮಾರು, ಶೃಂಗೇರಿ ತಾಲ್ಲೂಕು | 8.47 | 84.7 | 3,000 |

## ತೀರ್ಥಹಳ್ಳಿ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | S.S.L.C. | ಅನಘ ಭಾರದ್ವಾಜ ಬಿನ್ ವಿನಾಯಕ ಬಿ. ಬಳಗದ್ದೆ, ಅರಳಸುರಳಿ, ತೀರ್ಥಹಳ್ಳಿ ತಾ. | 621 | 99.36 | 2,500 |
| 2 | P.U.C. | ಯೋಗೀಶ್ ಬಿನ್ ರಾಮಕೃಷ್ಣ ಹೆಗಡೆ ತೀರ್ಥಹಳ್ಳಿ | 574 | 95.67 | 2,500 |
| 3 | B.Com | ನಿರಂಜನ ಎಂ.ಸಿ. ಬಿನ್ ಚಿದಂಬರ ಬಿ.ಎಸ್. ಮಾಳೂರು, ತೀರ್ಥಹಳ್ಳಿ | 1496 | 83.11 | 3,000 |
| 4 | M.Sc | ಶಾಲಿನಿ ಎಂ.ಜೆ. ಬಿನ್ ಜಯಶಿವಮೂರ್ತಿ ಎಂ.ಎಸ್., ಮೃಗವಧೆ, ಶೇಡ್ಗಾರು, ತೀರ್ಥಹಳ್ಳಿ ತಾಲ್ಲೂಕು | 8.46 | 84.61 | 3,000 |
| 5 | M.Com | ನಾಗಶ್ರೀ ಪಿ.ಕೆ. ಬಿನ್ ಕೃಷ್ಣಪ್ಪ ಪಿ.ಸಿ. ಶಿರೂರು, ಪಡುವಳ್ಳಿ, ತೀರ್ಥಹಳ್ಳಿ ತಾಲ್ಲೂಕು | 7.55 | 75.45 | 3,000 |
| 6 | B.E. | ವೈಷ್ಣವಿ ಆರ್. ವೈದ್ಯ ಬಿನ್ ರಾಮಚಂದ್ರ ವಿ.ಜಿ., ಕುರುಣಿಮಕ್ಕಿ, ಕುಡುಮಲ್ಲಿಗೆ, ತೀರ್ಥಹಳ್ಳಿ ತಾಲ್ಲೂಕು | 9.1 | 91.00 | 3,000 |

## ಮೂಡಿಗೆರೆ ತಾಲ್ಲೂಕು

| ಕ್ರ. ಸಂ. | ವಿದ್ಯಾಭ್ಯಾಸದ ವಿವರ | ಹೆಸರು ಮತ್ತು ವಿಳಾಸ ಚಿರಂಜೀವಿಗಳಾದ..... | ಗಳಿಸಿದ ಅಂಕ | ಶೇಕಡಾ | ನೀಡಿದ ಮೊಬಲಗು (ರೂಪಾಯಿಗಳಲ್ಲಿ) |
|---|---|---|---|---|---|
| 1 | P.U.C. | ನಿಸರ್ಗ ಕೆ ಬಿನ್ ಜಯಗಣಪತಿ ಟಿ.ವಿ, ತಲಕೋಡು, ಬಾಳೆಹೊಳೆ, ಮೂಡಿಗೆರೆ(ತಾ) | 573 | 95.5 | 2,500 |

## ತರೀಕೆರೆ ತಾಲ್ಲೂಕು

| | | | | | |
|---|---|---|---|---|---|
| 1 | P.U.C. | ಗಗನ್ ಹೆಚ್.ಎಸ್. ಬಿನ್ ಮೀನಾಕ್ಷಮ್ಮ ಹೆಚ್.ಕೆ., ಹುಣಸಘಟ್ಟ, ತರಿಕೆರೆ ತಾಲ್ಲೂಕು | 562 | 93.67 | 2,500 |

## ಎನ್.ಆರ್. ಪುರ ತಾಲ್ಲೂಕು

| | | | | | |
|---|---|---|---|---|---|
| 1 | B.C.A. | ಜಾನ್ಹವಿ ಬಿ.ಎಸ್. ಬಿನ್ ಸುರೇಶ ಬಿ.ಎನ್. ಬಣಗಿ, ಶೆಟ್ಟಿಕೊಪ್ಪ, ಎನ್.ಆರ್.ಪುರ ತಾ. | 992 | 82.67 | 3,000 |

## ಹೊನ್ನಾಳಿ ತಾಲ್ಲೂಕು

| | | | | | |
|---|---|---|---|---|---|
| 1 | M. Forma | ಚೇತನ್ ಪಟೇಲ್ ಡಿ.ಎನ್. ಬಿನ್ ನಾಗೇಶ ಡಿ.ಪಿ., ದೇವಿಕೊಪ್ಪ (ಬೀದಿ) ಸುರಹೊನ್ನೆ, ಹೊನ್ನಾಳಿ ತಾಲ್ಲೂಕು | 899 | 96.16 | 3,000 |

ಹಾಗೆಯೇ, ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿದ ಸದಸ್ಯರ ಮಕ್ಕಳಿಗೆ ಈ ಕೆಳಕಂಡಂತೆ ತಲಾ ರೂ.3,000ಗಳನ್ನು ಪಾವತಿಸಲಾಗಿದೆ.

## ಚಿಕ್ಕಮಗಳೂರು ಜಿಲ್ಲೆ

| ಕ್ರ. ಸಂ. | ಹೆಸರು ಮತ್ತು ವಿಳಾಸ | ಕ್ರೀಡಾ ವಿಭಾಗ | ರಾಷ್ಟ್ರ / ರಾಜ್ಯ ಮಟ್ಟ |
|---|---|---|---|
| 1 | ಶ್ರೀ ವಿಶೃತ್ ಹೆಚ್.ಆರ್. ಬಿನ್ ರತ್ನಾಕರ ಹೆಚ್.ವಿ., ಹಾಲ್ಗಾರು, ಹಾಲಂದೂರು, ಶೃಂಗೇರಿ ತಾಲ್ಲೂಕು | ಜೂನಿಯರ್ ಅಥ್ಲೆಟಿಕ್ | ರಾಜ್ಯಮಟ್ಟದಲ್ಲಿ ದ್ವಿತೀಯ |

# ಸಂಘದ ಸಂಸ್ಥಾಪಕ ಅಧ್ಯಕ್ಷರಾದ ದಿ॥ ಎಂ. ಶೇಷಾದ್ರಿ ಸ್ಮಾರಕ ಬಹುಮಾನ

2019–20ನೇ ಸಾಲಿನಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ಸಹಕಾರ ತರಬೇತಿಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳಿಗೆ ತಲಾ ರೂ. 2,000.00 ಗಳನ್ನು ಈ ಕೆಳಕಂಡಂತೆ ಬಹುಮಾನವಾಗಿ ಪಾವತಿಸಲಾಗಿದೆ.

| **ಶಿವಮೊಗ್ಗ ಜಿಲ್ಲೆ** | | **ಗಳಿಸಿದ ಅಂಕಗಳು (700 ಅಂಕಗಳಿಗೆ)** |
|---|---|---|
| 1) | ಶ್ರೀ ಮಾರುತಿ ಎಂ. ಬಿನ್ ಮಂಜುನಾಥ ಜಿ.<br>ಶ್ರೀರಾಮನಗರ, ಗೋಪಾಳ, ಶಿವಮೊಗ್ಗ | 537 |
| 2) | ಶ್ರೀ ವಿರೂಪಾಕ್ಷಪ್ಪ ಎಂ. ಬಿನ್ ಮಂಜಪ್ಪ<br>ಕುವೆಂಪುನಗರ, ಹೊಸಮನೆ, ಭದ್ರಾವತಿ | 533 |
| 3) | ಶ್ರೀ ಆದರ್ಶ ಯು.ಜೆ. ಬಿನ್ ಜಯಲಿಂಗಪ್ಪ ಸಿ.<br>ಉಳವಿ, ಉಳವಿ ಅಂಚೆ, ಸೊರಬ ತಾಲ್ಲೂಕು | 533 |

**ಚಿಕ್ಕಮಗಳೂರು ಜಿಲ್ಲೆ**

| | | |
|---|---|---|
| 1) | ಶ್ರೀ ಸುಹಾಸ್ ವಿ.ಆರ್. ಬಿನ್ ರಾಮಪ್ಪ ವಿ.ವಿ.<br>ವಗ್ಗಡೆ ಗ್ರಾಮ, ಗುಬ್ಬಿಗಾ ಅಂಚೆ, ಎನ್.ಆರ್.ಪುರ ತಾಲ್ಲೂಕು | 535 |
| 2) | ಶ್ರೀ ಪ್ರಮೋದ್ ಕೆ.ಆರ್. ಬಿನ್ ರಾಜಶೇಖರ ಹೆಚ್.ಎನ್.<br>ಹಿಣಚಿ, ಕಾನೂರು ಅಂಚೆ, ಎನ್.ಆರ್.ಪುರ ತಾಲ್ಲೂಕು | 482 |



# ಸದಸ್ಯರ ಗಮನಕ್ಕೆ

1) ಹೊಸದಾಗಿ ಸದಸ್ಯತ್ವ ಪಡೆಯಲು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ನಾಲ್ಕು ಭಾವಚಿತ್ರಗಳನ್ನು, ಅಡಿಕೆ ಬಾಗಾಯ್ತು ಪಹಣಿಯ ನಿಜ ಪ್ರತಿಯನ್ನು ಹಾಗೂ ಆಧಾರ್‌ಕಾರ್ಡ್ ಮತ್ತು ಇತರ ಸ್ವಯಂ ದೃಢೀಕೃತ ಅಗತ್ಯದ ಮಾಹಿತಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ನಿಮ್ಮ ಸಮೀಪದ ಸಂಘದ ಶಾಖೆಗೆ ಸಲ್ಲಿಸುವುದು.

2) ಸಹಕಾರ ಕಾಯ್ದೆ (ನಿಯಮ 13ಎ) ಪ್ರಕಾರ **ಗುರುತಿನ ಕಾರ್ಡು** ಕಡ್ಡಾಯವೆಂಬುದನ್ನು ಸದಸ್ಯರು ಗಮನಿಸುವುದು. ಗುರುತಿನ ಕಾರ್ಡ್‌ಗಾಗಿ ಸದಸ್ಯರು ನಿಗದಿತ ನಮೂನೆಯಲ್ಲಿ ವಿವರಗಳನ್ನು ಸಂಬಂಧಪಟ್ಟ ಶಾಖೆಗಳ ಮೂಲಕ ಸಲ್ಲಿಸಿ, ಸಂಘದಿಂದ ನೀಡುತ್ತಿರುವ **ಷೇರು ಸರ್ಟಿಫಿಕೇಟ್** ಮತ್ತು **ಗುರುತಿನ ಕಾರ್ಡ್‌ಅನ್ನು** ಪಡೆಯುವುದು.

3) ಷೇರು ಹಣಕ್ಕೆ ಕಡ್ಡಾಯವಾಗಿ ವಾರಸುದಾರರನ್ನು (ನಾಮಿನಿಯನ್ನು) ಸೂಚಿಸತಕ್ಕದ್ದು. ನಾಮಿನೇಷನ್ ಅರ್ಜಿಗಳನ್ನು ಶಾಖೆಗಳಲ್ಲಿ ಪಡೆಯಬಹುದಾಗಿದೆ.

4) ಸಂಘದಿಂದ ಪಾವತಿ ಮಾಡಬೇಕಾದ ಎಲ್ಲಾ ರೀತಿಯ ಮೊಬಲಗನ್ನು ಪಾವತಿಸಲು ಅನುಕೂಲವಾಗುವಂತೆ ಸದಸ್ಯರು ಕೇಂದ್ರಕಛೇರಿ ಅಥವಾ ವ್ಯವಹಾರ ಮಾಡುವ ಶಾಖೆಗಳಲ್ಲಿ ಅಡಿಕೆ ಸಲುವಳಿ ಹಣಕ್ಕೆ ಹಾಗೂ ಎಲ್ಲಾ ರೀತಿಯ ಸಂಘದ ಠೇವಣಿಗಳಿಗೆ ನಿಗದಿತ ನಮೂನೆಯಲ್ಲಿ **ಪ್ರತ್ಯೇಕವಾದ ನಾಮಿನೇಷನ್** ಅನ್ನು ಕಡ್ಡಾಯವಾಗಿ ಮಾಡುವುದು.

5) ಹೆಚ್ಚುವರಿ ಷೇರು ಹೊಂದಿದ ಸದಸ್ಯರು ಸಂಘದ ಶಾಖೆಗಳ ಮೂಲಕ ಅಥವಾ ಕೇಂದ್ರ ಕಛೇರಿಯಲ್ಲಿ ಸಂಘದಿಂದ ಈ ಹಿಂದೆ ನೀಡಿದ **ಷೇರು ಸರ್ಟಿಫಿಕೇಟ್‌ನ** ಹಿಂಭಾಗದಲ್ಲಿ ಹೆಚ್ಚುವರಿ ಷೇರು ಮೊತ್ತವನ್ನು ದಾಖಲಿಸಿಕೊಳ್ಳುವುದು.

6) ನಿಮ್ಮ ಅಡಿಕೆಯ ಚೀಲವು ಒಡೆದು ಹಾಳಾಗದಂತೆ ಒಳ್ಳೆಯ ಚೀಲದಲ್ಲಿ ಮತ್ತು ಉತ್ತಮ ಗುಣಮಟ್ಟದ ಅಡಿಕೆಯನ್ನು ಸಂಘಕ್ಕೆ ಕಳುಹಿಸುವುದು.

7) ಸಂಘದ ಶಾಖೆಗಳು ಇಲ್ಲದಿರುವ ಕಡೆಗಳಲ್ಲಿ ಸದಸ್ಯರು ಸಂಘದ ಏಜೆನ್ಸಿಗಳ ಮೂಲಕ ಅಡಿಕೆಯನ್ನು ಕಳುಹಿಸಿಕೊಡುವುದು.

8) **ಎಸ್.ಎಂ.ಎಸ್**. ಮೂಲಕ ಅಡಿಕೆ ಧಾರಣೆ ತಿಳಿಯಲು ಮತ್ತು ಅವರ ವ್ಯವಹಾರದ ವಿವರಗಳನ್ನು, ಅಡಿಕೆ ಟೆಂಡರ್‌ನ ದರಗಳನ್ನು ತಿಳಿಯಲು ಮತ್ತು ಸಂಘದೊಂದಿಗಿನ ಇನ್ನಿತರ ವ್ಯವಹಾರಗಳಿಗೆ ಅನುಕೂಲವಾಗುವಂತೆ ಸದಸ್ಯರು ತಮ್ಮ ಕೆ.ವೈ.ಸಿ. ದಾಖಲೆಗಳನ್ನು ಮತ್ತು ಮೊಬೈಲ್ ನಂಬರ್ ಅನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಖೆಗೆ ನೀಡಿ ನೋಂದಣಿ ಮಾಡಿಸಿಕೊಳ್ಳತಕ್ಕದ್ದು ಹಾಗೂ ಒಂದು ವೇಳೆ ಮೊಬೈಲ್ ನಂಬರ್ ಬದಲಾಯಿಸಿದಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಸರಿಪಡಿಸಿಕೊಳ್ಳತಕ್ಕದು.

9) ಸದಸ್ಯರು ಅಡಿಕೆ, ಮೆಣಸು ಮಾರಾಟದ ಬಗೆಗೆ ನಿರ್ದಿಷ್ಟವಾದ ಮತ್ತು ಸ್ಪಷ್ಟ ಆದೇಶಗಳನ್ನು ಷೇರು ಸಂಖ್ಯೆ ಸಹಿತ ಲಿಖಿತ ಮೂಲಕ ಮಾತ್ರ ಕೊಡುವುದು. ಅಡಿಕೆಯನ್ನು ವ್ಯಾಪಾರಕ್ಕೆ ಬಿಡಲು (ಹಾಕಿಸಲು) ತಿಳಿಸುವಾಗ ಷೇರು ಸಂಖ್ಯೆಯನ್ನು ಕಡ್ಡಾಯವಾಗಿ ತಿಳಿಸಿರಿ. ಬಿಕರಿ ಮಾಡಿಸಲು ಮಾತ್ರ ಖುದ್ದು ಸಂಘಕ್ಕೆ ಬಂದು ಒಪ್ಪಂದ ಪುಸ್ತಕದಲ್ಲಿ ಸಹಿ ಮಾಡುವುದು.

10) ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಉಲ್ಲಿಖಿತವಾದ ಮೇರೆಗೆ ಸಂಘದಲ್ಲಿ 12 ರಿಂದ 18 ತಿಂಗಳ ಅವಧಿಯಲ್ಲಿ ದಾಸ್ತಾನಿರುವ ಅಡಿಕೆ ಮೂಟೆಗಳಿಗೆ ಮೂಟೆ ಒಂದಕ್ಕೆ ಮಾಹೆಯಾನ ರೂ.5–00 ರಂತೆ ಹಾಗೂ 18 ತಿಂಗಳ ನಂತರದ ಮೂಟೆಗಳಿಗೆ ಮೂಟೆ ಒಂದಕ್ಕೆ ಮಾಹೆಯಾನ ರೂ.10–00 ರಂತೆ ಶುಲ್ಕವನ್ನು ನಿಗದಿಪಡಿಸಿದೆ. ಸದಸ್ಯರು ಇದನ್ನು ಗಮನಿಸುವುದು.

11) ಸದಸ್ಯರು ಹುಂಡಿ ಕಾಗದವನ್ನು ಕಳುಹಿಸುವ ಪದ್ಧತಿಯನ್ನು ಬದಲಾಯಿಸಿ, **'ಸಂಘದ ವ್ಯವಹಾರಕ್ಕೆ ಮಾತ್ರ'** ಅನ್ವಯಿಸುವಂತೆ **'ಚೆಕ್ ಪುಸ್ತಕ'**ದ ಮಾದರಿಯಲ್ಲಿ **'ಹಣ ಹಿಂಪಡೆಯುವ ಪುಸ್ತಕ'**ವನ್ನು ಜಾರಿಗೊಳಿಸಿದ್ದು, ಹಣ ಪಡೆಯಬೇಕಾದವರ ಸಹಿಯನ್ನು ದೃಢೀಕರಿಸಿ, ಷೇರು ಸಂಖ್ಯೆ ನಮೂದಿಸಿ ಕಳುಹಿಸಿಕೊಡುವುದು.

ಸಂಘದಿಂದ **RTGS** ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದ್ದು, ಸದಸ್ಯರು ತಾವು ಹೊಂದಿದ ಬ್ಯಾಂಕಿನ ಖಾತೆ ಸಂಖ್ಯೆ, **IFS Code** ಮತ್ತು ಇತರ ಮಾಹಿತಿಗಳನ್ನೊಳಗೊಂಡ ಪಾಸ್ ಪುಸ್ತಕದ ಮಾಹಿತಿ ಭಾಗದ ಜೆರಾಕ್ಸ್ ಪ್ರತಿಯನ್ನು ನಿಮಗೆ ಸಮೀಪದ ನಮ್ಮ ಶಾಖೆಗೆ ನೀಡುವುದು.

12) ಆದಾಯ ತೆರಿಗೆ ಇಲಾಖೆಯ ನಿರ್ದೇಶನದನುಸಾರ ಎಲ್ಲಾ ಪಾವತಿಗಳನ್ನು ಉಳಿತಾಯ ಖಾತೆಯ ಮುಖಾಂತರವೇ ಮಾಡಬೇಕಾಗಿರುವುದರಿಂದ ಸಂಘದ ಎಲ್ಲಾ ಸದಸ್ಯರು ಕಡ್ಡಾಯವಾಗಿ ಸಂಘದಲ್ಲಿ ಉಳಿತಾಯ ಖಾತೆಯನ್ನು ತೆರೆಯುವುದು ಮತ್ತು ಇದಕ್ಕೆ ಸಹಕರಿಸುವುದು.

13) ಸದಸ್ಯರು ಸಾಲದ ಅರ್ಜಿಗಳನ್ನು, ಷೇರು ವರ್ಗಾವಣೆ ಅರ್ಜಿಗಳನ್ನು, ಸಲುವಳಿ ಹಣ, ಸಹಾಯಧನ ಕೋರಿಕೆ ಅರ್ಜಿಗಳನ್ನು ಮತ್ತು ಸಂಘಕ್ಕೆ ಸಂಬಂಧಿಸಿದ ಮತ್ತಿತರ ಯಾವುದೇ ವ್ಯವಹಾರಗಳನ್ನು ನಿಮ್ಮ ಸಮೀಪದ ಸಂಘದ ಶಾಖೆಯ ಮುಖಾಂತರವೇ ಕಳುಹಿಸುವುದು.

14) 2006–07ನೇ ಸಾಲಿನಿಂದ ಸಂಘದಲ್ಲಿ **'ಮಾಮ್‌ಕೋಸ್ ಕ್ರೆಡಿಟ್ ಕಾರ್ಡ್'** ಸೌಲಭ್ಯವಿದ್ದು, ವರ್ಷದ ಎಲ್ಲಾ ತಿಂಗಳಿನಲ್ಲೂ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಸದಸ್ಯರು ಇದರ ಸದುಪಯೋಗ ಮಾಡಿಕೊಳ್ಳುವುದು.

15) ಅನೇಕ ಸದಸ್ಯರು ಉಪವಿಧಿಯ ಪ್ರಕಾರ ಅಡಿಕೆ ಕಳುಹಿಸುತ್ತಿಲ್ಲ. ಸಂಘದ ಉಪವಿಧಿಯ ಭಾಗ–4 ಸಂಖ್ಯೆ 16(1)ರ ಪ್ರಕಾರ – **ಪ್ರತಿಯೊಬ್ಬ ಸದಸ್ಯರು ಪ್ರತಿ ವರ್ಷ ಕನಿಷ್ಠ 65 ಕೆ.ಜಿ.ಗೆ ಕಡಿಮೆ ಇಲ್ಲದಂತೆ ಅಡಿಕೆಯನ್ನು ಅಥವಾ ಸಿಪ್ಪೆಗೋಟು ಅಡಿಕೆ ಆದಲ್ಲಿ 200 ಕೆ.ಜಿ.ಗೆ ಕಡಿಮೆ ಇಲ್ಲದಂತೆ ಸಂಘಕ್ಕೆ ಹಾಕತಕ್ಕದ್ದು. ಆದರೆ, ಆ ಅಡಿಕೆಯನ್ನು ವಿಕ್ರಯಿಸದೆ ವಾಪಸ್ ಪಡೆದಲ್ಲಿ ಅದನ್ನು ಕನಿಷ್ಠ ವ್ಯವಹಾರ ಎಂದು ಪರಿಗಣಿಸಲಾಗುವುದಿಲ್ಲ ಎಂದಿದ್ದು, ಈ ಕನಿಷ್ಟ ವ್ಯವಹಾರವನ್ನು ಮಾಡಲು ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಸಂಘದ ನಿಯಮಗಳನುಸಾರ**

**ಉಳಿದ ಸೌಲಭ್ಯಗಳನ್ನು ನಿಲ್ಲಿಸಲಾಗುವುದು ಹಾಗೂ ಕಾಯಿದೆ ಕಲಂ 17(2–ಎ) ಅನ್ವಯ – 'ಸದಸ್ಯನು ಅಧಿನಿಯಮ, ನಿಯಮಗಳ, ಉಪವಿಧಿಗಳ ಮೇರೆಗೆ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ವಿಫಲನಾದರೆ, ಅವನು ಅಂತಹ ಅವಧಿ ಮುಗಿದಾಗ ಸದಸ್ಯನಾಗಿರುವುದು ನಿಂತು ಹೋಗುತ್ತದೆ' ಮತ್ತು ಸಂಘದ ಉಪವಿಧಿಯ ಭಾಗ–4 ಸಂಖ್ಯೆ 16(2)ರ ಅನ್ವಯ – 'ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗುವ ಸದಸ್ಯ ತನ್ನ ಮತ ನೀಡುವ ಹಕ್ಕನ್ನು ಮೂರು ವರ್ಷಗಳವರೆಗೆ ಕಳೆದುಕೊಳ್ಳುತ್ತಾನೆ' ಹಾಗೂ ಸಂಘದ ಇತರೇ ಸೌಲಭ್ಯಗಳನ್ನು ನೀಡಲಾಗುವುದಿಲ್ಲ ಮತ್ತು ಸದಸ್ಯತ್ವ ನಿಂತುಹೋಗುತ್ತದೆ**. ಇದನ್ನು ಗಮನಿಸುವುದು.

16) ಸದಸ್ಯರು ಪ್ರತಿಯೊಂದು ಪತ್ರ ವ್ಯವಹಾರದಲ್ಲೂ ಉತ್ತರಿಸಲು ಅನುಕೂಲವಾಗುವಂತೆ ಹೆಸರು, ಷೇರು ಸಂಖ್ಯೆ, ಪೂರ್ಣ ವಿಳಾಸ (ಅಂಚೆ ಕಛೇರಿ, ತಾಲ್ಲೂಕು, ಪಿನ್‌ಕೋಡ್, ಸ್ಥಿರ ಮತ್ತು ಮೊಬೈಲ್ ದೂರವಾಣಿ ಸಂಖ್ಯೆ) ಇತ್ಯಾದಿಗಳನ್ನು ತಪ್ಪದೆ ಬರೆಯುವುದು. ವಿಳಾಸ ಬದಲಾವಣೆಯಾದಲ್ಲಿ ಹೊಸ ವಿಳಾಸವನ್ನು ಪೂರ್ಣ ವಿವರಗಳೊಂದಿಗೆ ಸಂಘದ ಕೇಂದ್ರ ಕಛೇರಿಗೆ ತಿಳಿಸುವುದು.

17) ಬೆಳ್ಳಿ ಹಬ್ಬದ, ಸುವರ್ಣ ಮಹೋತ್ಸವದ ಹಾಗೂ ವಜ್ರ ಮಹೋತ್ಸವದ ಪಾರಿತೋಷಕವನ್ನು ಪಡೆದುಕೊಳ್ಳಲು ಇಚ್ಛಿಸುವ ಸಂಘದ ಸದಸ್ಯರು ಅಂತಹ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮಕ್ಕಳ ಎಸ್.ಎಸ್.ಎಲ್.ಸಿ./ಪಿ.ಯು.ಸಿ ಹಾಗೂ ಬಿ.ಎ.,ಬಿ.ಕಾಂ/ಬಿ.ಬಿ.ಎಂ/ಬಿ.ಸಿ.ಎ, ಬಿ.ಎಸ್ಸಿ,ಬಿ.ಎಸ್ಸಿ, (ಕೃಷಿ/ತೋಟಗಾರಿಕೆ)ಬಿ.ವಿ.ಎಸ್‌ಸಿ/ಬಿ.ಎಫ್.ಎಸ್‌ಸಿ/ ಬಿ.ಟೆಕ್‌ಡ್ಶೆರಿ/ಎಂ.ಬಿ.ಬಿ.ಎಸ್/ಬಿ.ಯು.ಎಂ.ಎಸ್/ಬಿ.ಹೆಚ್.ಎಂ.ಎಸ್/ಬಿ.ಎ.ಎಂ.ಎಸ್/ಬಿ.ಎಸ್.ಎಂ.ಎಸ್/ ಬಿ.ಎನ್.ವೈ.ಎಸ್/ಬಿ.ಡಿ.ಎಸ್/ಬಿ.ಪಿ.ಟಿ/ಬಿ.ಫಾರ್ಮ/ ಮತ್ತು ಎಂ.ಎ. /ಎಂ.ಕಾಂ. ಅಥವಾ ಎಂ.ಸಿ.ಎ./ ಎಂ.ಎಸ್ಸಿ /ಎಂ.ಬಿ.ಎ./ಎಂ.ಟೆಕ್/ಎಂ.ಇ/ಎಂ.ಫಾರ್ಮ/ ಇಂಜಿನಿಯರಿಂಗ್ ಅಂತಿಮ ಪರೀಕ್ಷೆಯ ಅಂಕ ಪಟ್ಟಿಯನ್ನು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆದ ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಬಗೆಗೆ ಸಂಬಂಧಿಸಿದ ದಾಖಲಾತಿಗಳನ್ನು ಆಯಾ ವರ್ಷದ ನವೆಂಬರ್ 30 ರೊಳಗಾಗಿ ಸಂಘದ ಕೇಂದ್ರಕಛೇರಿಗೆ ತಲುಪಿಸುವುದು.

18) ಸಹಕಾರ ಕಾಯಿದೆ ಅನ್ವಯ **ಸತತವಾಗಿ ಮೂರು ವರ್ಷ ಡಿವಿಡೆಂಡ್ ಪಡೆಯದ ಸದಸ್ಯರ** ಡಿವಿಡೆಂಡ್ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾಯಿಸ ಬೇಕಾಗಿರುವುದರಿಂದ ಸದಸ್ಯರು 2017–18ನೇ ಸಾಲಿನ ತಮ್ಮ ಡಿವಿಡೆಂಡ್ ಮೊತ್ತವನ್ನು ದಿನಾಂಕ: 28/02/2022ರೊಳಗೆ ಪಡೆದುಕೊಳ್ಳುವುದು.

19) ಸಂಘದ ಸದಸ್ಯರ ಬಹುದಿನಗಳ ಬೇಡಿಕೆ ಮೇರೆಗೆ ಎಲ್ಲಾ ಬೆಳೆಗಳಿಗೆ ಶಕ್ತಿ ಮತ್ತು ಚೈತನ್ಯವನ್ನು ನೀಡುವ ಸಾವಯವ ಗೊಬ್ಬರವನ್ನು **'ಮಾಮ್‌ಕೋಸ್ ಸಸ್ಯ ಚೈತನ್ಯ'** ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ.

20) ಸಂಘದಲ್ಲಿ ಅಳವಡಿಸಿರುವ **'ಆರೋಗ್ಯ ವಿಮಾ'** ಯೋಜನೆಯು ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರಿಗೆ 2021–22ನೇ ಸಾಲಿಗೂ ಮುಂದುವರೆದಿದ್ದು, ಸಂಘದಲ್ಲಿ ವ್ಯವಹಾರ ನಡೆಸುವುದರ ಮೂಲಕ ಈ ಯೋಜನೆಯ ಪ್ರಯೋಜನ ಪಡೆಯಲು ಕೋರಿದೆ. ಹೆಚ್ಚಿನ ಮಾಹಿತಿಗೆ ಸಂಘದ ಹತ್ತಿರದ ಶಾಖೆಯನ್ನು ಸಂಪರ್ಕಿಸುವುದು.

21) ಸಂಘದ ಗುಂಪು ವಿಮಾ ಅಭಿರಕ್ಷಾ ಯೋಜನೆಯಡಿ ಮತ್ತು ಆರೋಗ್ಯ ವಿಮಾ ಯೋಜನೆಯಡಿ ನೋಂದಾವಣೆ ಮಾಡಿಕೊಳ್ಳಲು ತಗಲುವ ವಿಮಾ ಕಂತನ್ನು ಸಂಬಂಧಿಸಿದ ಸದಸ್ಯರ ಉಳಿತಾಯ ಖಾತೆ ಮೂಲಕ ಕಟಾಯಿಸಿಕೊಳ್ಳಲು ಸಂಬಂಧಿಸಿದ ಶಾಖೆಗೆ ಭೇಟಿ ನೀಡಿ ಪತ್ರ ಮುಖೇನ ಒಪ್ಪಿಗೆಯನ್ನು ಸಲ್ಲಿಸತಕ್ಕದು.

22) ಸಂಘದಿಂದ ಅಗ್ರಿ ಲೈಮ್ ಮತ್ತು ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡಲಾಗುತ್ತಿದ್ದು, ಹೆಚ್ಚಿನ ಮಾಹಿತಿಗೆ ಸಂಘದ ಹತ್ತಿರದ ಶಾಖೆಯನ್ನು ಸಂಪರ್ಕಿಸುವುದು.

23) ಶಿವಮೊಗ್ಗ ಕೋಟೆ ರಸ್ತೆಯಲ್ಲಿರುವ ಸಂಘದ ಅಡಿಕೆ ಖರೀದಿ ವಿಭಾಗದಲ್ಲಿ ಈ ಹಿಂದಿನಂತೆಯೇ ನೇರವಾಗಿ ಅಡಿಕೆ ಖರೀದಿ ಮಾಡಲಾಗುತ್ತಿದೆ. ಅಲ್ಲದೆ, ಸಂಘದ ಕಾರ್ಯ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಅಂದರೆ, ಸಾಗರ (ಮಾಮ್‌ಕೋಸ್ ಹಳೆಯ ಕಟ್ಟಡ, ಗಣಪತಿ ದೇವಸ್ಥಾನದ ಹತ್ತಿರ) ಕಳಸ ಮತ್ತು ಬಿ.ಹೆಚ್.ಕೈಮರ (ಎನ್.ಆರ್.ಪುರ ತಾಲ್ಲೂಕು) ಗಳಲ್ಲಿ 'ನೇರ ಅಡಿಕೆ ಖರೀದಿ ಕೇಂದ್ರ'ವನ್ನು ತೆರೆದಿದ್ದು, ಸದಸ್ಯರು ಈ ಸ್ಥಳಗಳಲ್ಲಿ ನೇರವಾಗಿ ಅಡಿಕೆ ಮಾರಾಟ ಮಾಡಬಹುದಾಗಿರುತ್ತದೆ.

24) ಸದಸ್ಯರು ಸಂಘದ ಯಾವುದೇ ಸೌಲಭ್ಯವನ್ನು ಪಡೆಯಲು ಕಡ್ಡಾಯವಾಗಿ ಸಂಘದ ಬೈಲಾದಲ್ಲಿ ತಿಳಿಸಿರುವಂತೆ ಕನಿಷ್ಠ ನಿಗದಿತ ಪ್ರಮಾಣದ ಅಡಿಕೆಯನ್ನು ಸಂಘಕ್ಕೆ ಹಾಕಿ, ಸಂಘದಲ್ಲಿಯೇ ಮಾರಾಟ ಮಾಡತಕ್ಕದ್ದು. ಈ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಲು ಕೋರಿದೆ.



# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

ದಿನಾಂಕ:21/12/2020ರ ಸೋಮವಾರದಂದು ಬೆಳಿಗ್ಗೆ 11–00 ಗಂಟೆಗೆ ನಡೆಸಲಾದ ಸಂಘದ 2019–20ನೇ ಸಾಲಿನ 80ನೇ ಸರ್ವ ಸದಸ್ಯರ ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯ ನಡಾವಳಿ

★★★★★★★★★★★★★★

**ಲಾಗಿನ್ ಆದ ಸದಸ್ಯರು : 4899**

ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರೂ ಆದ ಶ್ರೀಯುತ ಕೆ.ಬಿ.ಶಿವಕುಮಾರ್, ಐ.ಎ.ಎಸ್. ಇವರು ಸರ್ವ ಸದಸ್ಯರ ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀಮತಿ ಹೆಚ್.ಪಿ.ಪುಷ್ಪಲತಾ ಮತ್ತು ಶ್ರೀಮತಿ ಮೀರಾ ಎಸ್.ರಾವ್ ಇವರು ದೇವತಾ ಪ್ರಾರ್ಥನೆಯನ್ನು ಮಾಡಿದರು. ರೈತಗೀತೆಯ ನಂತರ ಸಭೆಯನ್ನು ಪ್ರಾರಂಭಿಸಲಾಯಿತು.

ಸಂಘದ ಮಾನ್ಯ ಉಪಾಧ್ಯಕ್ಷರಾದ ಶ್ರೀ ವೈ.ಎಸ್.ಸುಬ್ರಹ್ಮಣ್ಯ ಇವರು ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ಬಿ.ಶಿವಕುಮಾರ್, ಐ.ಎ.ಎಸ್. ಇವರನ್ನು ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸಿಕೊಡುವಂತೆ ಕೋರುತ್ತಾ, ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು ಮತ್ತು ಕೋವಿಡ್–19 ಕಾರಣ ಸರ್ವಸದಸ್ಯರ ಸಭೆಯನ್ನು ವೀಡಿಯೋ ಕಾನ್‌ಫರೆನ್ಸ್/ ವರ್ಚುವಲ್ ಮೂಲಕ ಮಾಡಬೇಕಾಗಿ ಬಂದಿದ್ದು, ಈ ಸಭೆಗೆ ಲಾಗಿನ್ ಆಗಿ ಭಾಗವಹಿಸಿದ ಎಲ್ಲಾ ಸದಸ್ಯರನ್ನೂ, ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ನಿರ್ದೇಶಕರುಗಳನ್ನು, ವ್ಯವಸ್ಥಾಪಕ ನಿರ್ದೇಶಕರನ್ನು ಮತ್ತು ಸಂಘದ ಸಿಬ್ಬಂದಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

**ವಿಷಯ 3:** ಅಗಲಿದ ಸಂಘದ ಸದಸ್ಯರು ಮತ್ತು ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದು.

ಸಂಘದ ನಿರ್ದೇಶಕರಾದ ಶ್ರೀ ಹೆಚ್.ಎಸ್.ಮಹೇಶ ಇವರು ಅಗಲಿದ ಸಂಘದ ಸದಸ್ಯರು ಮತ್ತು ನಾಡಿನ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಲುವಾಗಿ – ಸಂಘದ ಮಾಜಿ ಉಪಾಧ್ಯಕ್ಷರಾದ ಕೆ.ನರಸಿಂಹ ನಾಯಕ್, ಕುರುವಳ್ಳಿ, ತೀರ್ಥಹಳ್ಳಿ ತಾಲ್ಲೂಕು ಇವರಿಗೆ, ಮಾಜಿ ನಿರ್ದೇಶಕರಾದ ಎಸ್.ಕೆ. ಪುರುಷೋತ್ತಮರಾವ್, ಸೋನಲೆ, ಶಾರದಾಪುರ, ಹೊಸನಗರ ತಾಲ್ಲೂಕು ಮತ್ತು ಹೆಚ್.ಕೆ.ನರಸಿಂಹಶಾಸ್ತ್ರಿ, ಕರಿಮನೆ, ಕೊಪ್ಪ ತಾಲ್ಲೂಕು ಇವರಿಗೆ ಹಾಗೂ ಸಂಘಕ್ಕೆ ತಿಳಿದು ಬಂದ ಮಾಹಿತಿಗಳ ಪ್ರಕಾರ ಕಳೆದ ಸರ್ವ ಸದಸ್ಯರ ಮಹಾಸಭೆಯ ನಂತರದಿಂದ ಈ ಸಭೆಯ ದಿನಾಂಕದವರೆಗೆ ನಿಧನರಾದ ಸುಮಾರು 289 ಸದಸ್ಯರಿಗೆ ಮತ್ತು ಸಂಘದ ಮಾಜಿ ವ್ಯವಸ್ಥಾಪಕರಾಗಿದ್ದ ಆರ್.ಲಕ್ಷ್ಮೀನಾರಾಯಣ, ಸಾಗರ, ಡಿ.ಎಸ್.ಲೋಕೇಶ್, ಶಿವಮೊಗ್ಗ. ಎಲ್.ಟಿ.ವೆಂಕಟೇಶ, ಶಿವಮೊಗ್ಗ ಹಾಗೂ ಹಮಾಲರಾಗಿದ್ದ ಶಿವಣ್ಣ ವೈ.ಹೆಚ್. ಮತ್ತು ನಾಗರಾಜ ಸಿ. ಇವರಿಗೆ ಹಾಗೂ ಕೇಂದ್ರಸಚಿವರಾಗಿದ್ದ ಸುರೇಶ್ ಅಂಗಡಿ, ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರು ಮತ್ತು ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಮುಂತಾದ ಗಣ್ಯರಿಗೆ ಹಾಗೂ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟವರಿಗೆ ಹಾಗೂ ಯುದ್ಧದಲ್ಲಿ ಮೃತಪಟ್ಟ ವೀರಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸುವ ಬಗೆಗೆ ಪ್ರಸ್ತಾಪಿಸಿದ ಮೇರೆಗೆ ಮೃತರಾದವರ ಗೌರವಾರ್ಥ ಸಭೆಯಲ್ಲಿ ಮೌನವನ್ನು ಆಚರಿಸಿ, ಸಂತಾಪ ಸೂಚಿಸಲಾಯಿತು ಹಾಗೂ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ಈ ಸರ್ವ ಸದಸ್ಯರ ಸಭೆಗೆ ಲಾಗಿನ್ ಮೂಲಕ ಅವಶ್ಯಕ ಕೋರಂ ಇರುವುದನ್ನು ಸಭೆಯಲ್ಲಿ ಘೋಷಿಸಲಾಯಿತು.

**ವಿಷಯ 4:** ಸಭಾ ಸೂಚನಾ ಪತ್ರವನ್ನು (ಮೀಟಿಂಗ್ ನೋಟಿಸ್) ಓದಿ ದಾಖಲು ಮಾಡುವುದು.

ಸಂಘದ ವ್ಯವಸ್ಥಾಪಕ ನಿರ್ದೇಶಕರು ಸಭಾ ಸೂಚನಾ ಪತ್ರವನ್ನು (ಮೀಟಿಂಗ್ ನೋಟಿಸ್) ಓದಿದ ನಂತರ ಇದನ್ನು ದಾಖಲು ಮಾಡಲಾಯಿತು.

ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಕೆ.ಸಿ.ದಿನೇಶ್ ಇವರು ಈ ಸರ್ವಸದಸ್ಯರ ಸಭೆಯನ್ನು ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಮೂಲಕ ನಡೆಸುತ್ತಿರುವುದರಿಂದ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಸುತ್ತಿರುವ ಈ ಸಂಸ್ಥೆಯ ಸುಮಾರು 25000 ಜನ ಷೇರುದಾರರಿಗೆ ಪ್ರಾಮಾಣಿಕವಾಗಿ ಇದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲದ ಬಗೆಗೆ ಹಾಗೂ ಜೂಮ್ ಮೀಟಿಂಗ್‌ನಲ್ಲಿ ಭಾಗವಹಿಸಲು ಬಹುತೇಕ ಸದಸ್ಯರಿಗೆ ಸಾಕಷ್ಟು ತಿಳಿವಳಿಕೆ ಇಲ್ಲದ ಬಗೆಗೆ ಆಕ್ಷೇಪ ವ್ಯಕ್ತಪಡಿಸಿ ಈ ಕುರಿತು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೀರಾ ಎಂದು ಕೇಳಿದರು. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳಿಗೂ 2020ರ ಸೆಪ್ಟೆಂಬರ್ 25ರೊಳಗೆ ಸರ್ವಸದಸ್ಯರ ಸಭೆಯನ್ನು ನಡೆಸುವ ಶಾಸನಬದ್ಧ ಜವಾಬ್ದಾರಿ ಇದ್ದ ಕಾರಣ ಹಾಗೂ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಸರ್ವಸದಸ್ಯರ ಸಭೆಯನ್ನು 2020ರ ಡಿಸೆಂಬರ್ 25ರ ವರೆಗೆ ಮುಂದೂಡಿ ವಿನಾಯಿತಿ ನೀಡಿದ್ದು, ಆದರೆ, ಈ ಸಂದರ್ಭದಲ್ಲಿಯೂ ಸಹ ಸರ್ವ ಸದಸ್ಯರ ಸಭೆಯನ್ನು ನಡೆಸಿ ಜನ ಸೇರಲು ಅವಕಾಶ ಕೊಟ್ಟರೆ ಮತ್ತೆ ಕೊರೋನಾ ಹರಡುವ ಸಾಧ್ಯತೆ ಹೆಚ್ಚಾಗಿರುವ ಕಾರಣ ಸದಸ್ಯರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ನಡೆಸುವ ಬಗೆಗೆ ನಿರ್ದೇಶನ ಕೋರಿ ಮಾನ್ಯ ಸಹಕಾರ ಸಂಘಗಳ ನಿಬಂಧಕರಿಗೆ ದಿನಾಂಕ:10/11/2020ರಂದು ಪತ್ರವನ್ನು ಬರೆದಿರುವುದಲ್ಲದೆ, ತಾವೇ ಖುದ್ದಾಗಿ ನಿಬಂಧಕರೊಂದಿಗೆ ಮಾತನಾಡಿದ್ದು, ಅವರ ನಿರ್ದೇಶನ ಮತ್ತು ಸರ್ಕಾರದ ಆದೇಶದನ್ವಯ ಈ ಸಭೆಯನ್ನು ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಮೂಲಕ ನಡೆಸಲಾಗುತ್ತಿದೆ ಎಂದರು.

ಅಲ್ಲದೆ, ಸದಸ್ಯರಿಗೆ ತೊಂದರೆಯಾಗದಂತೆ ಈ ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಗೆ ಸದಸ್ಯರು ಯಾವ ರೀತಿ ಲಾಗಿನ್ ಆಗಬೇಕು ಎಂಬ ಬಗೆಗೆ ಸಂಪೂರ್ಣ ಮಾಹಿತಿಯನ್ನು ವರದಿ ಪುಸ್ತಕದಲ್ಲಿ ನೀಡಿರುವುದಲ್ಲದೆ, ಸಂಘದ ಶಾಖೆ ಮತ್ತು ಏಜೆನ್ಸಿಗಳ ಮೂಲಕ ಹಾಗೂ ಸಂಘದ ವೆಬ್‌ಸೈಟ್, ಫೇಸ್‌ಬುಕ್, ಎಸ್.ಎಂ.ಎಸ್. ಮತ್ತು ಯೂ–ಟ್ಯೂಬ್ ಮೂಲಕವೂ ಮಾಹಿತಿಯನ್ನು ನೀಡಿರುವುದಾಗಿ ಹಾಗೂ ಈ ಸಭೆಯ ಮಧ್ಯದಲ್ಲಿಯೂ ಸಹ ಪ್ರಕಟಣೆ ನೀಡುತ್ತಿದ್ದು, ಈಗಾಗಲೇ ಸಾವಿರಾರು ಜನ ಸದಸ್ಯರು ಲಾಗಿನ್ ಆಗಿ ಈ ಸಭೆಯನ್ನು ವೀಕ್ಷಿಸುತ್ತಿರುವುದನ್ನು ಸದಸ್ಯರ ಗಮನಕ್ಕೆ ತರುತ್ತಾ, ಸದಸ್ಯರೆಲ್ಲರೂ ಇದಕ್ಕೆ ಸಹಕರಿಸುವಂತೆ ವಿನಂತಿಸಿದರು.

**ವಿಷಯ 5:** ದಿನಾಂಕ:20/09/2019ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಯನ್ನು ಪರಿಶೀಲಿಸಿ, ಓದಿ ದಾಖಲು ಮಾಡುವುದು ಹಾಗೂ ಆ ನಡಾವಳಿಯ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸುವುದು.

ದಿನಾಂಕ:20/09/2019ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಯನ್ನು ಹಾಗೂ ಅದರ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**ವಿಷಯ 6:** ಅಧ್ಯಕ್ಷರಿಂದ ಸಂಘದ ಮುಂದಿನ ವರ್ಷದ ಧ್ಯೇಯ–ಧೋರಣೆಗಳ ಬಗೆಗೆ ವಿವರಣಾತ್ಮಕ ನುಡಿ.

ಸಂಘದ ಮಾನ್ಯ ಅಧ್ಯಕ್ಷರು ಈ ಸರ್ವಸದಸ್ಯರ ಸಭೆಯಲ್ಲಿ ಆನ್‌ಲೈನ್ ಮೂಲಕ ಲಾಗಿನ್ ಆಗಿ ಭಾಗವಹಿಸಿದ ಎಲ್ಲಾ ಸದಸ್ಯರನ್ನೂ ಮತ್ತೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ರಾಜ್ಯದಲ್ಲಿ ಕೋವಿಡ್ – 19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಕಾರಣ ಪ್ರತಿ ವರ್ಷ ನಡೆಸುತ್ತಿರುವ ಮಾದರಿಯಲ್ಲಿ ಈ

ಸರ್ವಸದಸ್ಯರ ಸಭೆಯನ್ನು ನಡೆಸಲು ತೊಂದರೆಯಾಗುತ್ತಿರುವುದರಿಂದ ಹಾಗೂ, ಅದರಲ್ಲೂ ಮುಖ್ಯವಾಗಿ ಸಂಘದ ಸರ್ವಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟು ಕೊಂಡು ಕರ್ನಾಟಕ ಸರ್ಕಾರದ ದಿನಾಂಕ:21/10/2020ರ ಆದೇಶದ ಪ್ರಕಾರ ಸಂಘದ 2019–20ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ವೀಡಿಯೋ ಕಾನ್ಫರೆನ್ಸ್ / ವರ್ಚುವಲ್ ಸಭೆಯ ಮೂಲಕ ನಡೆಸುತ್ತಿದ್ದು, ಸದಸ್ಯರುಗಳು ಸಹಕರಿಸುವಂತೆ ಕೋರಿದರು.

ಈಗಾಗಲೇ ಸದಸ್ಯರಿಗೆ ಕಳುಹಿಸಿರುವ ಸಂಘದ 2019–20ನೇ ಸಾಲಿನ ಆರ್ಥಿಕ ತಃಖ್ತೆಗಳು ಮತ್ತು ವಾರ್ಷಿಕ ವರದಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಪೂರ್ಣ ವಿವರಗಳನ್ನು ನೀಡಿದ್ದು, ಸಂಸ್ಥೆಯು 2019–20ರ ಆರ್ಥಿಕ ಸಾಲಿನಲ್ಲಿ ಲಾಭವನ್ನು ಗಳಿಸಿ, ಆಡಿಟ್ ವರ್ಗೀಕರಣದಲ್ಲಿ 'ಎ' ಶ್ರೇಣಿಯಲ್ಲಿಯೇ ಮುಂದುವರೆದಿರುವುದಕ್ಕೆ ಸದಸ್ಯರೆಲ್ಲರೂ ನೀಡಿರುವ ಬೆಂಬಲ ಹಾಗೂ ಸಹಕಾರವೇ ಕಾರಣವಾಗಿರುವುದಕ್ಕೆ ವಂದನೆಯನ್ನು ಸಲ್ಲಿಸಿದರು.

ಮೊಟ್ಟ ಮೊದಲನೆಯದಾಗಿ, ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕೆಂಪಡಿಕೆಯ ಮಾರುಕಟ್ಟೆ ಸ್ಥಗಿತಗೊಂಡಿದ್ದರೂ ಮಾಮ್‌ಕೋಸ್ ತನ್ನ ವ್ಯಾಪಾರವನ್ನು ನಿಲ್ಲಿಸದೆ ಮಾರುಕಟ್ಟೆ ದರ ಕುಸಿತಕ್ಕೆ ಅವಕಾಶ ನೀಡದೆ ಸದಸ್ಯರ ಅಡಿಕೆಯನ್ನು ಖರೀದಿ ಮಾಡಿರುವುದಲ್ಲದೆ, ಈ ಲಾಕ್‌ಡೌನ್ ಸಂದರ್ಭದಲ್ಲಿಯೂ ಸೀಮಿತ ಸಿಬ್ಬಂದಿಗಳನ್ನು ಬಳಸಿಕೊಂಡು ಎಲ್ಲಿಯೂ ಸದಸ್ಯರ ವ್ಯವಹಾರಕ್ಕೆ ಧಕ್ಕೆಯಾಗದಂತೆ ಸಂಘವು ಕಾರ್ಯನಿರ್ವಹಿಸಿರುವುದನ್ನು ಸದಸ್ಯರ ಗಮನಕ್ಕೆ ತಂದರು.

ಕಳೆದ ವಾರ್ಷಿಕ ಮಹಾಸಭೆಯಲ್ಲಿ ಚರ್ಚೆಯಾದಂತೆ – (1) ಸಂಘದ ಸದಸ್ಯರು ಮತ್ತು ಅವರ ಕುಟುಂಬ ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ **'ಗುಂಪು ವಿಮೆ'** ಯೋಜನೆಯಡಿಯಲ್ಲಿ 2019–20ನೇ ಸಾಲಿನಲ್ಲಿ 23563 ನೋಂದಣಿ ಆಗಿರುತ್ತದೆ. (2) ಸಂಘದ ವ್ಯಾಪ್ತಿಯೊಳಗೆ ಅವಶ್ಯವಿರುವ ಕಡೆಗಳಲ್ಲಿ ಅಡಿಕೆ ಖರೀದಿ ಕೇಂದ್ರವನ್ನು ತೆರೆಯುವ ಬಗೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. (3) ಸಂಘದ ಸದಸ್ಯರ ಬಹುದಿನಗಳ ಬೇಡಿಕೆ ಮೇರೆಗೆ ರೈತರ ಎಲ್ಲಾ ಬೆಳೆಗಳಿಗೆ ಶಕ್ತಿ ಮತ್ತು ಚೈತನ್ಯವನ್ನು ನೀಡುವ ಸಾವಯವ ಗೊಬ್ಬರವನ್ನು **'ಮಾಮ್‌ಕೋಸ್ ಸಸ್ಯ ಚೈತನ್ಯ'** ಹೆಸರಿನಲ್ಲಿ ನ್ಯಾಯ ಸಮ್ಮತ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. (4) ಸಂಘದಿಂದ ಅಗ್ರಿ ಲೈಮ್ ಮತ್ತು ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡಲಾಗುತ್ತಿದೆಯೆಂದು ಸದಸ್ಯರಿಗೆ ತಿಳಿಸಿದರು.

ಹಾಗೆಯೇ, ಸಂಘದ ಅಡಿಕೆ ಖರೀದಿ ವಿಭಾಗದಿಂದ `VISION – 2020' ಅಡಿಯಲ್ಲಿ ಹಮ್ಮಿಕೊಂಡಿರುವ ಯೋಜನೆಗೆ ಸಂಬಂಧಿಸಿದಂತೆ – (1) ಇ–ಟೆಂಡರ್ ಮೂಲಕ ದಿನಾಂಕ:31/03/2020ರ ವರೆಗೆ ಮಾಮ್‌ಕೋಸ್‌ನ 41,729.011 ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರ ಖರೀದಿ ಮೂಲಕ 420.122 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಲಾಗಿದೆ. (2) ದಿನಾಂಕ: 31/03/2020ರವರೆಗೆ 58,986.118 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡಲಾಗಿದೆ. (3) ಸಂಘದ ವ್ಯಾಪ್ತಿಯಲ್ಲಿ ಅಡಿಕೆಯ ನೇರ ಖರೀದಿ ವಲಯವನ್ನು ಪ್ರಾರಂಭಿಸುವ ಬಗೆಗೆ ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. (4) ಬೇರೆ ಸಹಕಾರ ಸಂಘಗಳಲ್ಲಿಯೂ ಅಡಿಕೆಯನ್ನು ಖರೀದಿ ಮಾಡುತ್ತಿರುವುದನ್ನು ಸದಸ್ಯರಿಗೆ ತಿಳಿಸಿದರು.

**ಮುಂದುವರೆದು, ಸಂಘವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುವುದನ್ನು ಸದಸ್ಯರ ಗಮನಕ್ಕೆ ತಂದರು.**

1) ಸಂಘದ ಸದಸ್ಯರು ಮತ್ತು ಅವರ ಕುಟುಂಬ ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ 'ಗುಂಪು ವಿಮೆ' ಯೋಜನೆಯ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಸದಸ್ಯರನ್ನು ತರಲು ಉದ್ದೇಶಿಸಿದೆ.

2) ಸದಸ್ಯರ ಬಹುದಿನಗಳ ಬೇಡಿಕೆಯಾದ **'ಆರೋಗ್ಯ ವಿಮಾ ಯೋಜನೆ'**ಯನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, 18 ರಿಂದ 80 ವರ್ಷದೊಳಗಿನ ಸದಸ್ಯರು ಮತ್ತು ಅವರ ಪತಿ/ಪತ್ನಿಯು ಈ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ. ವಿಮಾ ಕಂತು ಮೊತ್ತ ತಲಾ ರೂ.4,100.00 ಇದ್ದು, ಪರಿಹಾರದ ಮೊತ್ತ ತಲಾ ರೂ.4.00 ಲಕ್ಷದವರೆಗೆ ಇರುತ್ತದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಅದರ ಸದುಪಯೋಗವನ್ನು ಪಡೆಯುವುದು.

3) ಸಂಘದಿಂದ ಮಾರಾಟ ಮಾಡುತ್ತಿರುವ **'ಮಾಮ್‌ಕೋಸ್ ಸಸ್ಯ ಚೈತನ್ಯ'** ಸಾವಯವ ಗೊಬ್ಬರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡುವುದು.

ಹಾಗೆಯೇ, ಈ ಸಂದರ್ಭದಲ್ಲಿ ವಿಶೇಷವಾಗಿ ಕೆಳಕಂಡ ಅಂಶಗಳನ್ನು ಸಭೆಯ ಗಮನಕ್ಕೆ ತಂದರು.

(1) ಭಾರತ ಸಂವಿಧಾನದ 97ನೇ ತಿದ್ದುಪಡಿಯ ಅನ್ವಯ ಸರ್ಕಾರವು ಕರ್ನಾಟಕ ಸಹಕಾರ ಕಾಯಿದೆ ಮತ್ತು ನಿಯಮಗಳಿಗೆ ತಿದ್ದುಪಡಿ ಮಾಡಿದ ಮೇರೆಗೆ "ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗುವ ಸದಸ್ಯರು ತಮ್ಮ ಮತ ನೀಡುವ ಹಕ್ಕನ್ನು ಮೂರು ವರ್ಷಗಳವರೆಗೆ ಕಳೆದುಕೊಳ್ಳುತ್ತಾರೆ".

(2) ಸಂಘದ ಬೈಲಾ ರೀತ್ಯಾ – ಪ್ರತಿಯೊಬ್ಬ ಸದಸ್ಯರು ಪ್ರತಿ ವರ್ಷ ಕನಿಷ್ಠ 65 ಕೆ.ಜಿ.ಗೆ ಕಡಿಮೆ ಇಲ್ಲದಂತೆ ಅಡಿಕೆಯನ್ನು ಅಥವಾ ಸಿಪ್ಪೆಗೋಟು ಅಡಿಕೆ ಆದಲ್ಲಿ 200 ಕೆ.ಜಿ.ಗೆ ಕಡಿಮೆ ಇಲ್ಲದಂತೆ ಸಂಘಕ್ಕೆ ಹಾಕತಕ್ಕದ್ದು. ಆದರೆ, ಆ ಅಡಿಕೆಯನ್ನು ವಿಕ್ರಯಿಸದೆ ವಾಪಸ್ ಪಡೆದಲ್ಲಿ ಅದನ್ನು ಕನಿಷ್ಠ ವ್ಯವಹಾರ ಎಂದು ಪರಿಗಣಿಸಲಾಗುವುದಿಲ್ಲ ಎಂದಿದ್ದು, ಈ ಕನಿಷ್ಠ ವ್ಯವಹಾರವನ್ನು ಮಾಡಲು ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಸಂಘದ ನಿಯಮಗಳನುಸಾರ ಉಳಿದ ಸೌಲಭ್ಯಗಳನ್ನು ನಿಲ್ಲಿಸಲಾಗುವುದು ಹಾಗೂ ಕಾಯಿದೆ ಕಲಂ 17(2–ಎ) ಅನ್ವಯ – ಸದಸ್ಯನು ಅಧಿನಿಯಮ, ನಿಯಮಗಳ, ಉಪವಿಧಿಗಳ ಮೇರೆಗೆ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ವಿಫಲನಾದರೆ, ಅವನು ಅಂತಹ ಅವಧಿ ಮುಗಿದಾಗ ಸದಸ್ಯನಾಗಿರುವುದು ನಿಂತು ಹೋಗುತ್ತದೆ'

ಆದುದರಿಂದ ಸದಸ್ಯರು ಇದಕ್ಕೆ ಅವಕಾಶ ನೀಡದೆ ಸಹಕಾರ ಸಂಘಗಳ ಕಾಯಿದೆ ಮತ್ತು ಸಂಘದ ಬೈಲಾ ನಿಬಂಧನೆ ಅನ್ವಯ ಸಂಘದಲ್ಲಿ ವ್ಯವಹರಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಲು ವಿನಂತಿಸಿದರು.

ಮುಂದುವರೆದು, ಸಂಘದ ಆರ್ಥಿಕ ಹಿತದೃಷ್ಟಿಯಿಂದ ಕೆಳಕಂಡ ಅಂಶವನ್ನು ಸದಸ್ಯರ ಗಮನಕ್ಕೆ ತಂದರು.

✧ ಸಂಘಕ್ಕೆ ಅಡಿಕೆ ಮೂಟೆ ವ್ಯಾಪಾರಕ್ಕೆ ಬಿಡುವ ಸದಸ್ಯರು ಒಮ್ಮೆ ವ್ಯಾಪಾರಕ್ಕೆ ಹಾಕಿಸಿದ ಮೂಟೆಗಳನ್ನೇ ಹಲವಾರು ಬಾರಿ ವ್ಯಾಪಾರಕ್ಕೆ ಬಿಡುತ್ತಿದ್ದು, ಇದರಿಂದ ಸಂಘಕ್ಕೆ ಆರ್ಥಿಕ ಹೊರೆಯಾಗುತ್ತಿರುವ ಕಾರಣ ಈ ರೀತಿ ವ್ಯಾಪಾರಕ್ಕೆ ಬಿಡಲು ಕನಿಷ್ಠ ಅವಧಿಯನ್ನು ನಿಗದಿಪಡಿಸುವುದು ಹಾಗೂ ಅದಕ್ಕೂ ಹೆಚ್ಚಿನ ಬಾರಿ ವ್ಯಾಪಾರಕ್ಕೆ ಬಿಟ್ಟಲ್ಲಿ ಶುಲ್ಕವನ್ನು ನಿಗದಿಪಡಿಸುವುದು ಸೂಕ್ತವಾಗಿರುವ ಕಾರಣ ಈ ಬಗೆಗೆ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ, ಅಗತ್ಯ ನಿಯಮಗಳನ್ನು ರೂಪಿಸಿ, ಜಾರಿಗೆ ತರಲಾಗುವುದು.

✧ ಸದಸ್ಯರು ಸುಮಾರು 3–4 ವರ್ಷಗಳಾದರೂ ಸಂಘದಲ್ಲಿ ಹಾಕಿದ ಅಡಿಕೆಯನ್ನು ಮಾರಾಟ ಮಾಡದೇ ದಾಸ್ತಾನು ಇರಿಸುತ್ತಿದ್ದು, ಇದರಿಂದ ಅಡಿಕೆಯ ಗುಣಮಟ್ಟ ಹಾಳಾಗುವುದಲ್ಲದೆ, ಸಂಘಕ್ಕೆ ಗೋದಾಮು ಬಾಡಿಗೆ, ವಿಮೆ ಹಾಗೂ ಭದ್ರತೆ ಬಗೆಗೆ ಅಧಿಕ ವೆಚ್ಚವಾಗುತ್ತಿದ್ದು, ಇದನ್ನು ಸರಿದೂಗಿಸಲು ಇಂತಹ ಮೂಟೆಗಳ ಮೇಲೆ ಕನಿಷ್ಠ ಶುಲ್ಕವನ್ನು ನಿಗದಿಪಡಿಸುವುದು ಸೂಕ್ತವಾಗಿರುವ ಕಾರಣ ಈ ಬಗೆಗೆ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ, ಅಗತ್ಯ ನಿಯಮಗಳನ್ನು ರೂಪಿಸಿ, ಜಾರಿಗೆ ತರಲಾಗುವುದು. ಈ ಬಗೆಗೆ ಸದಸ್ಯರು ಸಹಕರಿಸಲು ವಿನಂತಿಸಿದೆ.

ಮುಂದುವರೆದು, ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ರೀತಿಯಿಂದಲೂ ಸಹಕರಿಸುತ್ತಿರುವ ಸಂಘದ ಆಡಳಿತ ಮಂಡಳಿಯ ಉಪಾಧ್ಯಕ್ಷರಿಗೆ, ನಿರ್ದೇಶಕರುಗಳಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ

ಹಾಗೂ ಸಂಘದ ಅಭಿವೃದ್ಧಿಗಾಗಿ ಸಲಹೆ, ಸಹಕಾರಗಳನ್ನು ನೀಡುತ್ತಿರುವ ಸಮಸ್ತರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಬಹುಮುಖ್ಯವಾಗಿ ಸಂಘಕ್ಕೆ ಅಡಿಕೆ ಕಳುಹಿಸಿ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುವ ಮೂಲಕ ಸಂಘದ ಬೆನ್ನೆಲುಬಾಗಿರುವ ಸದಸ್ಯರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತಾ, ಇದೇ ಅಭಿಮಾನದಿಂದ ಸಂಘದಲ್ಲಿ ವ್ಯವಹರಿಸಿ ಸಂಘವನ್ನು ಬೆಂಬಲಿಸಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರುಗಳಾದ ಶ್ರೀ ಸುದರ್ಶನ್ ಕುಮಾರ್, ಶ್ರೀ ಕಿರಣ್ ಜಿ.ಎಸ್., ಶ್ರೀ ಶಶಿ, ಶ್ರೀ ಸತ್ಯನಾರಾಯಣ ಕೆ.ಎಸ್. ಮತ್ತು ಶ್ರೀ ಹನುಮಂತರಾವ್ ಹೆಚ್.ಎನ್. ಮುಂತಾದವರು ಸಂಘಕ್ಕೆ ಅಡಿಕೆ ಮೂಟೆ ವ್ಯಾಪಾರಕ್ಕೆ ಬಿಡುವ ಸದಸ್ಯರು ಒಮ್ಮೆ ವ್ಯಾಪಾರಕ್ಕೆ ಹಾಕಿಸಿದ ಮೂಟೆಗಳನ್ನೇ ಹಲವಾರು ಬಾರಿ ವ್ಯಾಪಾರಕ್ಕೆ ಬಿಡುವ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಕನಿಷ್ಠ ಅವಧಿಯನ್ನು ಹಾಗೂ ಶುಲ್ಕವನ್ನು ನಿಗದಿಪಡಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದಾಗ ಸಂಘದ ಉಪಾಧ್ಯಕ್ಷರು ಈ ಬಗೆಗೆ ವಿವರಣೆ ನೀಡುತ್ತಾ, ಅಂತಹ ಸದಸ್ಯರಿಗೆ ಅಡಿಕೆ ಮಾರಾಟ ಮಾಡಲು ಎಷ್ಟು ಬಾರಿ ಬೇಕಾದರೂ ಅವಕಾಶ ನೀಡುತ್ತಿದ್ದು, ಆದರೆ, ಮೂರು ಬಾರಿವರೆಗೆ ಮಾತ್ರ ಉಚಿತವಾಗಿದ್ದು, ನಂತರ ಮಾರಾಟಕ್ಕೆ ಹಾಕುವವರಿಗೆ ಶುಲ್ಕ ನಿಗದಿಪಡಿಸುವ ಬಗೆಗೆ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ ಸದಸ್ಯರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಭೋಜಪ್ಪ ಗೌಡ ಇವರು ಸಂಘದಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ 'ಆರೋಗ್ಯ ವಿಮಾ ಯೋಜನೆ'ಯನ್ನು ಸದಸ್ಯರ ಕುಟುಂಬದ ಎಲ್ಲಾ ಸದಸ್ಯರಿಗೂ ವಿಸ್ತರಿಸುವಂತೆ ವಿನಂತಿಸಿದಾಗ ಉಪಾಧ್ಯಕ್ಷರು ಮಾತನಾಡಿ ಈ ಯೋಜನೆಯು ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ವಯಸ್ಸಿನ ನಿಖರತೆ ಬೇಕಾಗುವುದರಿಂದ ಹಾಗೂ ಈ ಯೋಜನೆ ಜಾರಿಯಾದ ನಂತರ ಇದರ ಸಾಧಕ ಬಾಧಕಗಳನ್ನು ಗಮನಿಸಿ, ಸದಸ್ಯರ ಕುಟುಂಬದವರಿಗೂ ವಿಸ್ತರಿಸುವ ಬಗೆಗೆ ಪರಿಶೀಲಿಸಲಾಗುವುದೆಂದರು. ಶ್ರೀ ರಂಗನಾಥ ಪಿ.ಎನ್. ಇವರು ಈ 'ಆರೋಗ್ಯ ವಿಮಾ ಯೋಜನೆ' ತುಂಬಾ ಒಳ್ಳೆಯ ಯೋಜನೆಯಾಗಿದ್ದು, ಯಾವುದೇ ಕಾರಣಕ್ಕೂ ಇದನ್ನು ಕೈಬಿಡಬಾರದೆಂದು ಹೇಳಿದಾಗ, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇದಕ್ಕೆ ನೋಂದಣಿ ಮಾಡಿಸಿಕೊಂಡಲ್ಲಿ ಪ್ರೀಮಿಯಂ ಮೊತ್ತ ಕಡಿಮೆ ಆಗುವ ಸಾಧ್ಯತೆಯೂ ಇರುವುದರಿಂದ ಸಂಘದ ಸದಸ್ಯರು ಇದನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಮಾನ್ಯ ಅಧ್ಯಕ್ಷರ ನುಡಿಯನ್ನು ಅಂಗೀಕರಿಸಲಾಯಿತು.

**ವಿಷಯ 7:** 2019–20ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸುವುದು.

2019–20ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸುವ ಮುನ್ನ, ಶ್ರೀ ವಿಷ್ಣುಮೂರ್ತಿ ಇವರು ಸಂಘದಲ್ಲಿ ಚಾಲಿ ಮತ್ತು ಸಿಪ್ಪೆಗೋಟು ಅಡಿಕೆಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡುವಂತೆ ಕೋರಿದರು ಹಾಗೂ ಇವುಗಳನ್ನು ಶಾಖೆಗೆ ವ್ಯಾಪಾರಕ್ಕೆ ತೆಗೆದುಕೊಂಡು ಹೋದ ದಿನವೇ ಮಾರಾಟ ಮಾಡುವಂತೆ ಒತ್ತಾಯ ಮಾಡುತ್ತಾರೆ ಎಂದಾಗ ಉಪಾಧ್ಯಕ್ಷರು ಈಗಾಗಲೇ ಸಾಗರ, ಹೊಸನಗರ ಮತ್ತು ಬೀರೂರು ಶಾಖೆಗಳಲ್ಲಿ ಚಾಲಿ ಮತ್ತು ಸಿಪ್ಪೆಗೋಟು ಅಡಿಕೆಯನ್ನು ಖರೀದಿಸುತ್ತಿದ್ದು, ಚಾಲಿ ಅಡಿಕೆ ಹೆಚ್ಚು ದಿನ ಇಟ್ಟರೆ ಡಂಕು ಬರುವ ಸಾಧ್ಯತೆ ಇರುವುದರಿಂದ ಬೇಗ ಮಾರಾಟ ಮಾಡಲು ಹೇಳುತ್ತಾರೆಯೇ ವಿನಃ ಸಿಪ್ಪೆಗೋಟನ್ನು ಆ ದಿನವೇ ಮಾರಾಟ ಮಾಡುವ ಅವಶ್ಯಕತೆ ಇಲ್ಲ ಎಂದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ 2019–20ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಲಾಯಿತು.

**ವಿಷಯ 8:** 2019–20ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಆಡಳಿತ ಮಂಡಳಿಯ ಸಮುಝಾಯಿಷಿಯೊಂದಿಗೆ ಪರಿಶೀಲಿಸಿ, ಅಂಗೀಕರಿಸುವುದು.

2019-20ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರವನ್ನು ಪರಿಶೀಲಿಸಿ, ಅನುಮೋದಿಸಲಾಯಿತು. 2019-20ನೇ ಸಾಲಿನ ಆಡಿಟ್ ವರದಿಯನ್ನು ಅನುಮೋದಿಸುವ ಮುನ್ನ, ಶ್ರೀ ರಂಗನಾಥ ಪಿ.ಎನ್. ಇವರು ಸದಸ್ಯರು ಸಭೆಯಲ್ಲಿ ಚರ್ಚಿಸುವ ವಿಷಯವನ್ನು ಲಿಖಿತವಾಗಿ ಕಳುಹಿಸಲು ಡಿಸೆಂಬರ್ 14 ಕೊನೆಯ ದಿನಾಂಕವಾಗಿದ್ದು, ಸಕಾಲದಲ್ಲಿ ಲೆಕ್ಕಪರಿಶೋಧನಾ ವರದಿ ಪುಸ್ತಕ ದೊರೆಯದ ಕಾರಣ ಚರ್ಚಿಸುವ ವಿಷಯವನ್ನು ಈ ದಿನಾಂಕದೊಳಗೆ ಕಳುಹಿಸಲು ಸಾಧ್ಯವಾಗದಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಈ ಹಿಂದೆ ಕಳುಹಿಸುತ್ತಿದ್ದಂತೆ ಲೆಕ್ಕಪರಿಶೋಧನಾ ವರದಿ ಪುಸ್ತಕವನ್ನು ಎಲ್ಲಾ ಸದಸ್ಯರಿಗೂ ಕಳುಹಿಸುವಂತೆ ವಿನಂತಿಸಿದರು. ಈ ಬಗೆಗೆ ಉಪಾಧ್ಯಕ್ಷರು ಮಾತನಾಡುತ್ತಾ, ಈ ಹಿಂದಿನ ವಾರ್ಷಿಕ ಮಹಾಸಭೆಯ ತೀರ್ಮಾನದಂತೆ ಲೆಕ್ಕಪರಿಶೋಧನಾ ವರದಿ ಪುಸ್ತಕವನ್ನು ಶಾಖೆ ಮತ್ತು ಏಜೆನ್ಸಿಗಳಲ್ಲಿ ಇಡುವ ವ್ಯವಸ್ಥೆ ಮಾಡಿರುವುದನ್ನು ಹಾಗೂ ಇದನ್ನು ಸಕಾಲದಲ್ಲಿ ಸಂಘದ ವೆಬ್‌ಸೈಟ್‌ನಲ್ಲಿ ಹಾಕಿರುವುದನ್ನು ಸದಸ್ಯರ ಗಮನಕ್ಕೆ ತಂದರು.

ಶ್ರೀ ಕೆ.ಸಿ.ದಿನೇಶ್ ಇವರು ಸಂಘವು ಆಕ್ಸಿಸ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್ ಮತ್ತು ಕರ್ಣಾಟಕ ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲದ ಕುರಿತು ವಿವರಗಳನ್ನು ಕೇಳಿದಾಗ ಉಪಾಧ್ಯಕ್ಷರು ಸುಗ್ಗಿ ಕಾಲದಲ್ಲಿ ಸಂಘಕ್ಕೆ ಹಣದ ಅವಶ್ಯಕತೆ ಇರುವುದರಿಂದ ಈ ಬ್ಯಾಂಕುಗಳಿಂದ ಸಾಲವನ್ನು ಪಡೆದಿದ್ದು, ಹಣದ ಅವಶ್ಯಕತೆ ಇದ್ದಾಗ ಮಾತ್ರ ಅದನ್ನು ಬಳಸಿಕೊಂಡು ಪುನಃ ಜಮಾ ಮಾಡಲಾಗಿದೆಯೆಂದು ತಿಳಿಸಿದರು. ಸದರಿ ಸದಸ್ಯರು ಮುಂದುವರೆದು, ಮಾಮ್‌ಕೋಸ್ ಸಂಸ್ಥೆಗೆ ಪೂರ್ಣ ಮಾರುಕಟ್ಟೆಯನ್ನು ನಿಯಂತ್ರಣ ದಲ್ಲಿಡುವ ಸಾಮರ್ಥ್ಯ ಇರುವುದರಿಂದ ಸಂಘದಿಂದ ಅಡಿಕೆ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಉತ್ತರ ಭಾರತದ ಅಡಿಕೆ ಮಾರುಕಟ್ಟೆಯ ಬಗೆಗೆ ಅಧ್ಯಯನ ಮಾಡಿ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಪಡೆದು ತನ್ಮೂಲಕ ರೈತರ ಅಡಿಕೆಗೆ ಉತ್ತಮ ದರ ಸಿಗುವಂತೆ ಮಾಡಲು ವಿನಂತಿಸಿದರು. ಶ್ರೀ ಯು.ಎಸ್.ಶಿವಪ್ಪ ಇವರು ಮಾಮ್‌ಕೋಸ್ ಸಂಸ್ಥೆಯಿಂದ ಇನ್ನೂ ಹೆಚ್ಚಿನ ಅಡಿಕೆ ಖರೀದಿ ಮಾಡುವಂತೆ ಹಾಗೂ ರೈತರಿಗೆ ಉತ್ತಮ ಧಾರಣೆ ನೀಡುವಂತೆ ಕೋರಿದರು. ಉಪಾಧ್ಯಕ್ಷರು ಈಗಾಗಲೇ ಉತ್ತರ ಭಾರತದ ಕೆಲವು ವ್ಯಾಪಾರಸ್ಥರೊಂದಿಗೆ ಸಂಪರ್ಕದಲ್ಲಿರುವುದಾಗಿ ಹಾಗೂ ರೈತರ ಮೇಲೆ ಹೆಚ್ಚಿನ ಕಾಳಜಿಯನ್ನು ವಹಿಸಿ ಉತ್ತಮ ಧಾರಣೆಗೆ ಅಡಿಕೆಯನ್ನು ಖರೀದಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಕೆ.ಸಿ.ದಿನೇಶ್ ಇವರು ಶಿವಮೊಗ್ಗ ಎ.ಪಿ.ಎಂ.ಸಿ.ಯಿಂದ ನೀಡಿದ ಐಷರ್ ಲಾರಿ ವಾಹನವನ್ನು ಎಷ್ಟು ಜನ ರೈತರು ಬಳಸಿಕೊಂಡಿದ್ದಾರೆ ಮತ್ತು ಈ ವಾಹನದಲ್ಲಿ ರೈತರ ಅಡಿಕೆ ಮೂಟೆಗಳ ಸಾಗಣೆಗೆ ಸಂಘದಿಂದ ಮಾಡಿರುವ ವ್ಯವಸ್ಥೆ ಕುರಿತು ಪ್ರಶ್ನಿಸಿ ಮುಂದಿನ ಸಾಲಿನಿಂದ ವರದಿ ಪುಸ್ತಕದಲ್ಲಿ ಅಡಿಕೆ ಮೂಟೆ ಸಾಗಣೆಗೆ ಲಾರಿಯ ವ್ಯವಸ್ಥೆ ಇರುವ ಬಗೆಗೆ ಮಾಹಿತಿಯನ್ನು ನೀಡುವಂತೆ ಕೋರಿದರು. ಶ್ರೀ ಯು.ಎಸ್.ಶಿವಪ್ಪ ಇವರು ಈ ಲಾರಿ ಮೂಲಕ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವಂತೆ ವಿನಂತಿಸಿದರು. ಉಪಾಧ್ಯಕ್ಷರು ಮಾತನಾಡುತ್ತಾ, ಈ ಲಾರಿಯು ಸುಮಾರು 120-125 ಅಡಿಕೆ ಮೂಟೆಗಳ ಸಾಮರ್ಥ್ಯವನ್ನು ಹೊಂದಿದ್ದು, ಯಾವುದಾದರೂ ಒಂದೇ ಭಾಗದಿಂದ ಈ ಪ್ರಮಾಣದಲ್ಲಿ ರೈತರು ಅಡಿಕೆ ಮೂಟೆ ಸಾಗಣೆಗೆ ಲಾರಿಯನ್ನು ಕೇಳಿದಲ್ಲಿ ಲಾರಿಯ ವ್ಯವಸ್ಥೆ ಮಾಡುತ್ತೇವೆಂದು ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ 2019-20ನೇ ಸಾಲಿನ ಆಡಿಟ್ ವರದಿಯನ್ನು ಆಡಳಿತ ಮಂಡಳಿಯ ಸಮಜಾಯಿಷಿಯೊಂದಿಗೆ ಅಂಗೀಕರಿಸಲಾಯಿತು.

**ವಿಷಯ 9:** 2019-20ನೇ ಸಾಲಿನಲ್ಲಿ ಸಂಘವು ಸಂಪಾದಿಸಿದ ಲಾಭವನ್ನು ಹಂಚುವುದು.

**ತೀರ್ಮಾನ:** ಆಡಳಿತ ಮಂಡಳಿಯ ಶಿಫಾರಸ್ ಅನ್ನು ಪರಿಶೀಲಿಸಿ, 2019-20ನೇ ಸಾಲಿನಲ್ಲಿ ಸಂಘವು ಗಳಿಸಿದ ರೂ.3,01,64,613.42 ನಿವ್ವಳ ಲಾಭವನ್ನು ಬೈಲಾ ಸಂಖ್ಯೆ: ಭಾಗ 14-(86)-(ಎ) ಪ್ರಕಾರ ಪರಿಶೀಲಿಸಿ, ಚರ್ಚಿಸಿದ ನಂತರ, ಈ ಕೆಳಕಂಡಂತೆ ನಿವ್ವಳ ಲಾಭ ವಿಲೇವಾರಿ ಪ್ರಸ್ತಾಪವನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು.

| ಕ್ರ. ಸಂ. | ವಿವರಗಳು | ತೆರೆದಿರಿಸಿದ ಶೇಕಡಾವಾರು | ಮೊಬಲಗು | ಮೊಬಲಗು |
|---|---|---|---|---|
| 1 | ಒಟ್ಟು ನಿವ್ವಳ ಲಾಭದಲ್ಲಿ ಆಪದ್ಧನ ನಿಧಿಗೆ ಶೇ.25ಕ್ಕೆ ಕಡಿಮೆ ಇಲ್ಲದಂತೆ | 25.00% | 75,41,153 | |
| | ಉಳಿದ ಲಾಭಾಂಶದಲ್ಲಿ | | | 2,26,23,460.42 |
| 2 | ಸಹಕಾರಿ ಶಿಕ್ಷಣ ನಿಧಿಗೆ ಶೇ.2 ರಂತೆ | 2.00% | 4,52,469.42 | |
| | ಉಳಿದ ಲಾಭಾಂಶದಲ್ಲಿ | | | 2,21,70,991 |
| 3 | ಕಟ್ಟಡ ನಿಧಿಗೆ ಶೇ. 20ಕ್ಕೆ ಮೀರದಂತೆ | 20.00% | 44,34,198 | |
| 4 | ಹೋಕು ಬಾಕಿ ಸಾಲದ ನಿಧಿಗೆ ಶೇ.10ಕ್ಕೆ ಮೀರದಂತೆ | 0.50% | 1,10,854 | |
| 5 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿಗಾಗಿ ಹಾಗೂ ಮಾರಾಟದ ಮೇಲಿನ ಬೋನಸ್‌ಗಾಗಿ ಇರುವ ನಿಧಿಗೆ ಶೇ.31ಕ್ಕೆ ಮೀರದಂತೆ | 31.00% | 68,73,007 | |
| 6 | ಲಾಭಾಂಶ ಸರಿದೂಗಿಸುವ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 0.50% | 1,10,854 | |
| 7 | ನೌಕರರ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 2.0% | 4,43,419 | |
| 8 | ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.10ಕ್ಕೆ ಮೀರದಂತೆ | 0.50% | 1,10,854 | |
| 9 | ಅಡಿಕೆ ಸಂಶೋಧನಾ ನಿಧಿಗಾಗಿ ಶೇ.3ಕ್ಕೆ ಮೀರದಂತೆ | 0.50% | 1,10,854 | |
| 10 | ಮಹೋತ್ಸವ ನಿಧಿಗೆ | 0.50% | 1,10,854 | |
| 11 | ಮರಣೋತ್ತರ ನಿಧಿ ಯೋಜನೆಗೆ ಶೇ.15ಕ್ಕೆ ಮೀರದಂತೆ | 10.13% | 22,46,399 | |
| 12 | ಮತ್ತೆ ಉಳಿದ ಲಾಭಾಂಶದಲ್ಲಿ ಪಾವತಿಯಾದ ಷೇರು ಬಂಡವಾಳಕ್ಕೆ ಶೇ.10.00ರಂತೆ | | 76,19,698 | |
| 13 | ಉಳಿದ ಮೊಬಲಗು ಸಹಕಾರ ಕಾಯಿದೆ ಹಾಗೂ ನಿಯಮ 21ರ ಪ್ರಕಾರ ಸಂಘದ ಆಪದ್ಧನ ನಿಧಿಗೆ | – | – | |
| | **ಒಟ್ಟು ರೂ.** | | **3,01,64,613.42** | |

ಈ ಸಂದರ್ಭದಲ್ಲಿ 2019–20ನೇ ಸಾಲಿನಲ್ಲಿ ಬೋನಸ್‌ಗೆ ಅರ್ಹರಾದ ಸಂಘದ ಸಿಬ್ಬಂದಿಗಳಿಗೆ ಬೋನಸ್ ಹಣವನ್ನು ಮತ್ತು ಇತರ ಸಿಬ್ಬಂದಿಗಳಿಗೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಪ್ರಕಾರ ಶೇ.20ಕ್ಕೆ ಮೀರದಂತೆ ಅನುಗ್ರಹ ಪೂರ್ವಕ ಕೊಡುಗೆಯನ್ನು ಕೊಡಲು ತೀರ್ಮಾನಿಸಲಾಯಿತು.

**ವಿಷಯ 10:** 2019–20ನೇ ಸಾಲಿನಲ್ಲಿ ಅಂದಾಜು ಆಯ–ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಪರಿಶೀಲಿಸಿ, ಅಂಗೀಕರಿಸುವುದು.

**ವಿಷಯ 11:** 2020–21 ಮತ್ತು 2021–22ನೇ ಸಾಲುಗಳ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.

**ತೀರ್ಮಾನ:** ಮೇಲ್ಕಂಡ ವಿಷಯ 10 ಮತ್ತು 11ಕ್ಕೆ ಸಂಬಂಧಿಸಿದಂತೆ 2019–20ನೇ ಸಾಲಿಗೆ ಅಂದಾಜು ಆಯ-ವ್ಯಯ ಮಂಜೂರಾತಿಗಿಂತ ಹೆಚ್ಚು ಖರ್ಚು ಮಾಡಿರುವುದನ್ನು ಹಾಗೂ 2020–21 ಮತ್ತು 2021–22ನೇ ಸಾಲುಗಳ ಅಂದಾಜು ಆಯ-ವ್ಯಯವನ್ನು ಕೆಳಕಂಡಂತೆ ಪರಿಶೀಲಿಸಿ, ಅಂಗೀಕರಿಸಲಾಯಿತು.

## ಬಜೆಟ್ (ಆಯ-ವ್ಯಯ)

**ಜಮಾ** **(ರೂಪಾಯಿಗಳಲ್ಲಿ)**

| ಕ್ರ. ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಬಂದ ಆದಾಯ | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|
| 1 | ವ್ಯಾಪಾರ ಲಾಭ | 8,30,00,000 | 10,90,02,838 | 12,50,00,000 | 12,75,00,000 |
| 2 | ಬಡ್ಡಿ | 21,25,00,000 | 15,04,44,760 | 18,75,00,000 | 19,00,00,000 |
| 3 | ಬಾಡಿಗೆ | 35,00,000 | 16,55,814 | 30,00,000 | 20,00,000 |
| 4 | ಇತರೆ | 10,00,000 | 1,25,029 | 5,00,000 | 2,00,000 |
| | **ಒಟ್ಟು ರೂ.** | **30,00,00,000** | **26,12,28,441** | **31,60,00,000** | **31,97,00,000** |

**ಖರ್ಚು**

| ಕ್ರ. ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಖರ್ಚು ಮಾಡಿರುವುದು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|---|
| 1 | ಬಡ್ಡಿ | 13,25,00,000 | 10,57,75,950 | – | 13,50,00,000 | 12,50,00,000 |
| 2 | ಸಿಬ್ಬಂದಿ ವೆಚ್ಚ ಭವಿಷ್ಯ ನಿಧಿ ಮತ್ತು ಗ್ರೂಪ್ ಗ್ರಾಚ್ಯುಯಿಟಿ | 5,75,00,000 | 5,73,85,421 | – | 6,00,00,000 | 6,50,00,000 |
| 3 | ಕಾವಲು ಮತ್ತು ಭದ್ರತೆ | 1,25,00,000 | 1,22,50,619 | – | 1,00,00,000 | 1,10,00,000 |
| 4 | ಪ್ರಯಾಣ ಭತ್ಯೆ | 3,00,000 | 92,520 | – | 3,00,000 | 2,00,000 |
| 5 | ಭವಿಷ್ಯ ನಿಧಿ ಆಡಳಿತ ವೆಚ್ಚ | 2,00,000 | 1,95,661 | – | 2,50,000 | 2,50,000 |
| 6 | ಸಿಬ್ಬಂದಿ ತರಬೇತಿಗಾಗಿ | 5,00,000 | 24,000 | – | 5,00,000 | 3,00,000 |
| 7 | ಸಂಘದ ಸಿಬ್ಬಂದಿಗಳ ಅಧ್ಯಯನ ಪ್ರವಾಸಕ್ಕಾಗಿ | 7,00,000 | – | – | 7,00,000 | 7,00,000 |
| 8 | ಸಂಘದ ನಿರ್ದೇಶಕರ ಅಧ್ಯಯನ ಪ್ರವಾಸಕ್ಕಾಗಿ | 12,00,000 | – | – | 12,00,000 | 12,00,000 |
| 9 | ನಿರ್ದೇಶಕರ ಪ್ರಯಾಣ ಭತ್ಯೆ | 12,00,000 | 7,94,731 | – | 12,00,000 | 12,00,000 |
| 10 | ಮುದ್ರಣ ಸಾಮಗ್ರಿ & ಡೈರಿ | 21,00,000 | 17,84,991 | – | 21,00,000 | 30,00,000 |
| 11 | ಅಂಚೆ ಮತ್ತು ದೂರವಾಣಿ | 15,00,000 | 11,29,148 | – | 17,00,000 | 15,00,000 |

| ಕ್ರ ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಖರ್ಚು ಮಾಡಿರುವುದು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|---|
| 12 | ಜಾಹಿರಾತು ಮತ್ತು ಪ್ರಚಾರ ಹಾಗೂ ಸದಸ್ಯರ ಅಡಿಕೆ ಮಾರಾಟದ ಮೇಲಿನ ಬೋನಸ್ | 80,00,000 | 75,11,807 | – | 50,00,000 | 70,00,000 |
| 13 | ಬಾಡಿಗೆ | 90,00,000 | 72,81,496 | – | 50,00,000 | 50,00,000 |
| 14 | ಲಾರಿ ಮತ್ತು ಗಾಡಿ ಬಾಡಿಗೆ | 5,00,000 | 18,22,057 | 13,22,057 | 5,00,000 | 22,00,000 |
| 15 | ಕಟ್ಟಡ ದುರಸ್ತಿ | 80,00,000 | 34,85,518 | – | 50,00,000 | 25,00,000 |
| 16 | ವಿದ್ಯುಚ್ಛಕ್ತಿ | 9,00,000 | 10,40,405 | 1,40,405 | 10,00,000 | 12,00,000 |
| 17 | ವಿಮಾ ಖರ್ಚು | 8,00,000 | 16,10,688 | 8,10,688 | 20,00,000 | 30,00,000 |
| 18 | ಅತಿಥಿ ಗೃಹದ ನಿರ್ವಹಣೆ | 50,000 | 39,000 | – | 50,000 | 50,000 |
| 19 | ಸ್ಥಿರಾಸ್ತಿ ನಿರ್ವಹಣೆ | 1,00,000 | 2,410 | – | 1,00,000 | 1,00,000 |
| 20 | ಚರಾಸ್ತಿಗಳ ನಿರ್ವಹಣೆ | 6,00,000 | 4,52,604 | – | 6,00,000 | 6,00,000 |
| 21 | ಕಂಪ್ಯೂಟರ್ ನಿರ್ವಹಣೆ | 20,00,000 | 11,24,568 | – | 20,00,000 | 15,00,000 |
| 22 | ಉದ್ಯಾನವನ | 40,000 | 640 | – | 40,000 | 50,000 |
| 23 | ಪ್ಲಾಂಟೇಶನ್ ಖರ್ಚು | 30,000 | – | – | 30,000 | 30,000 |
| 24 | ತೆರಿಗೆಗಳು (ಮನೆ ಕಂದಾಯ) | 12,00,000 | 10,91,836 | – | 13,00,000 | 13,00,000 |
| 25 | ಲೈಸೆನ್ಸ್ ಫೀ | 1,00,000 | 75,761 | – | 1,00,000 | 1,00,000 |
| 26 | ಪ್ರೊಫೆಷನಲ್ ಫೀ (ವೃತ್ತಿ ಶುಲ್ಕ) | 15,00,000 | 12,60,900 | – | 15,00,000 | 10,00,000 |
| 27 | ಕಾನೂನು ಸಲಹೆ | 8,00,000 | 83,250 | – | 8,00,000 | 5,00,000 |
| 28 | ವಾರ್ಷಿಕ ಮಹಾಸಭೆ | 18,00,000 | 20,41,379 | 2,41,379 | 20,00,000 | 22,00,000 |
| 29 | ಸಭೆಗಳು | 9,00,000 | 10,74,994 | 1,74,994 | 10,00,000 | 10,00,000 |
| 30 | ಲೆಕ್ಕಪರಿಶೋಧನಾ ವೆಚ್ಚ | 10,00,000 | 13,50,000 | 3,50,000 | 10,00,000 | 14,00,000 |
| 31 | ಆಡಳಿತ ವೆಚ್ಚ | 20,00,000 | 13,23,114 | – | 20,00,000 | 15,00,000 |
| 32 | ಪತ್ರಿಕಾ ಚಂದಾ | 2,00,000 | 89,600 | – | 2,00,000 | 1,50,000 |
| 33 | ಬ್ಯಾಂಕ್ ಖರ್ಚು | 4,00,000 | 9,89,084 | 5,89,084 | 4,00,000 | 5,00,000 |
| 34 | ವಾಹನ ಖರೀದಿ | 25,00,000 | – | – | 25,00,000 | 20,00,000 |

| ಕ್ರ ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಖರ್ಚು ಮಾಡಿರುವುದು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|---|
| 35 | ವಾಹನ ನಿರ್ವಹಣೆ + ಇಂಧನ | 15,00,000 | 17,13,114 | 2,13,114 | 16,00,000 | 20,00,000 |
| 36 | ಹಮಾಲಿ | 1,00,00,000 | 1,01,23,404 | 1,23,404 | 1,00,00,000 | 1,10,00,000 |
| 37 | ವ್ಯಾಪಾರದ ಖರ್ಚು | 45,00,000 | 40,59,420 | – | 50,00,000 | 50,00,000 |
| 38 | ಏಜೆನ್ಸಿ ಖರ್ಚು | 12,00,000 | 2,14,01,174 | 2,02,01,174 | 2,00,00,000 | 2,00,00,000 |
| 39 | ಸಾಲ ವಸೂಲಾತಿ ಖರ್ಚು | 6,00,000 | 3,46,400 | – | 6,00,000 | 5,00,000 |
| 40 | ಸದಸ್ಯರ ಗುರುತಿನ ಕಾರ್ಡ್ (ಸ್ಮಾರ್ಟ್ ಕಾರ್ಡ್) | 50,000 | – | – | 25,000 | 50,000 |
| 41 | ಧನಲಕ್ಷ್ಮೀ ಪೂಜೆ | 50,000 | 40,220 | – | 50,000 | 50,000 |
| 42 | ಇತರೆ ಖರ್ಚುಗಳು (ದಾವಾ ಫೀ) | 1,00,000 | 78,734 | – | 1,00,000 | 1,00,000 |
| 43 | ಸಿಬ್ಬಂದಿ ಮೆಡಿಕ್ಲೈಮ್ | – | – | – | 6,00,000 | 6,00,000 |
| 44 | ಸಾರ್ಟಿಂಗ್ ವೆಚ್ಚ | – | 26,08,353 | 26,08,353 | 15,00,000 | 30,00,000 |
| 45 | ಚುನಾವಣಾ ವೆಚ್ಚ | – | 25,46,850 | 25,46,850 | – | – |
| 46 | ಸೋಡಿ | – | 24,94,975 | 24,94,975 | – | 30,00,000 |
| | **ಒಟ್ಟು ರೂ.** | **27,06,20,000** | **25,85,96,796** | **3,18,16,477** | **28,65,45,000** | **28,95,30,000** |

ಹಾಗೆಯೇ, 2019–20ನೇ ಸಾಲಿಗೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ ಅಂದಾಜು ಆಯ–ವ್ಯಯ ಮಂಜೂರಾತಿ ಮಿತಿಯೊಳಗೆ ಖರ್ಚು ಮಾಡಿರುವುದನ್ನು ಹಾಗೂ 2020–21 ಮತ್ತು 2021–22ನೇ ಸಾಲುಗಳಿಗೆ ಸ್ಥಿರಾಸ್ತಿ ಮತ್ತು ಚರಾಸ್ತಿ ಖರೀದಿಗೆ ಬಜೆಟ್ ಮಾಡಿರುವುದನ್ನು ಕೆಳಕಂಡಂತೆ ಪರಿಶೀಲಿಸಿ, ಅನುಮೋದಿಸಲಾಯಿತು.

| ಕ್ರ ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಖರ್ಚು ಮಾಡಿರುವುದು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|---|
| 1 | ಗಣಕ ಯಂತ್ರ ಖರೀದಿಗೆ + ಯು.ಪಿ.ಎಸ್. | 30,00,000 | 1,58,141 | – | 30,00,000 | 30,00,000 |
| 2 | ಪೀಠೋಪಕರಣ ಖರೀದಿಗೆ | 50,00,000 | 1,04,36,941 | 54,36,941 | 50,00,000 | 1,00,00,000 |
| 3 | ಪುಸ್ತಕಗಳ ಖರೀದಿಗೆ (ಗ್ರಂಥಾಲಯ) | 20,000 | – | – | 20,000 | 20,000 |
| 4 | ಜನರೇಟರ್ ಖರೀದಿಗೆ | 20,00,000 | 17,87,017 | – | 25,00,000 | 25,00,000 |
| 5 | ತೂಕದ ಯಂತ್ರದ ಖರೀದಿಗೆ | 2,00,000 | 16,500 | – | 2,00,000 | 2,00,000 |

| ಕ್ರ ಸಂ. | ವಿವರ | 2019–20ನೇ ಸಾಲಿಗೆ ಅಂದಾಜು ಮಾಡಿರುವುದು | 2019–20ನೇ ಸಾಲಿಗೆ ಖರ್ಚು ಮಾಡಿರುವುದು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿಗೆ ಅಂದಾಜು ಮಾಡಿರುವುದು | 2021–22ನೇ ಸಾಲಿಗೆ ಅಂದಾಜು ಮಾಡಿರುವುದು. |
|---|---|---|---|---|---|---|
| 6 | ಜೆರಾಕ್ಸ್ ಮತ್ತು ಯಂತ್ರಗಳ ಖರೀದಿಗೆ | 10,00,000 | 29,03,493 | 19,03,493 | 10,00,000 | 30,00,000 |
| 7 | ಅಡಿಕೆ ಸಂಸ್ಕರಣಾ ಯಂತ್ರ | 30,00,000 | 2,62,305 | – | 30,00,000 | 30,00,000 |
| 8 | ನೋಟು ಎಣಿಕೆ ಯಂತ್ರ | 1,00,000 | 11,440 | – | 1,00,000 | 1,00,000 |
| 9 | ಸಿ.ಸಿ. ಟಿ.ವಿ. | – | 2,27,001 | 2,27,001 | 10,00,000 | 5,00,000 |
| 10 | ಆಡಿಯೋ ಸಿಸ್ಟಮ್ | – | 1,47,046 | 1,47,046 | – | – |
| | **ಒಟ್ಟು** | **1,43,20,000** | **1,59,49,884** | **77,14,481** | **1,58,20,000** | **2,23,20,000** |

**ವಿಷಯ 12:** ಮುಂಬರುವ ಸಾಲಿಗಾಗಿ ಸಮಿತಿಯಿಂದ ತಯಾರಿಸಲಾದ ಸಂಘದ ಕಾರ್ಯಚಟುವಟಿಕೆಗಳ ಬಗೆಗಿನ ಕಾರ್ಯಕ್ರಮವನ್ನು ಅನುಮೋದಿಸುವುದು.

**ತೀರ್ಮಾನ:** ಈಗಾಗಲೇ ಸಂಘದ ಮಾನ್ಯ ಅಧ್ಯಕ್ಷರ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿರುವುದನ್ನು ಗಮನಿಸಿ, ಅನುಮೋದಿಸಲಾಯಿತು.

**ವಿಷಯ 13:** ಕಾರ್ಯಾಚರಣೆಯಲ್ಲಿ ಕೊರತೆ ಏನಾದರೂ ಇದ್ದರೆ, ಅದರ ಪುನರವಲೋಕನ ಮತ್ತು ಅಂತಹ ಕೊರತೆಯನ್ನು ನೀಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

**ತೀರ್ಮಾನ:** ಈ ಬಗೆಗೆ ಪರಿಶೀಲಿಸಿ, ಕ್ರಮವಿಟ್ಟಿರುವುದನ್ನು ಗಮನಿಸಲಾಯಿತು.

**ವಿಷಯ 14:** ಸಂಘದ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರಿಂದ ಮಾಡಿಸುವ ಬಗೆಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:** ದಿನಾಂಕ:13/11/2020ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಎಸ್.ಕೃಷ್ಣಸ್ವಾಮಿ ಅಂಡ್ ಕೋ., ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ ಇವರಿಂದ ಮಾಡಿಸುವ ಕುರಿತು ಸರ್ವ ಸದಸ್ಯರ ಸಭೆಗೆ ಶಿಫಾರಸ್ ಮಾಡಿರುವ ಅಂಶವನ್ನು ಉಪಾಧ್ಯಕ್ಷರು ಸಭೆಯ ಗಮನಕ್ಕೆ ತಂದಾಗ, ಈ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಎಸ್.ಕೃಷ್ಣಸ್ವಾಮಿ ಅಂಡ್ ಕೋ. ಇವರಿಂದ ಮಾಡಿಸಲು ಸಭೆಯು ಒಪ್ಪಿಗೆಯನ್ನು ನೀಡಿತು ಮತ್ತು ಇವರಿಗೆ ನಿಯಮಾನುಸಾರ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ತೀರ್ಮಾನಿಸಿತು.

**ವಿಷಯ 15:** ಸದಸ್ಯರುಗಳನ್ನು ಸೇರಿಸಿಕೊಂಡ, ತೆಗೆದು ಹಾಕಿದ ಬಗೆಗಿನ ಟಿಪ್ಪಣಿ.

**ತೀರ್ಮಾನ:** ಈ ಬಗೆಗಿನ ವಿವರಗಳನ್ನು ಕೆಳಕಂಡಂತೆ ಗಮನಿಸಿ, ಅನುಮೋದಿಸಲಾಯಿತು.

| ತರಗತಿ | ವರ್ಷದ ಪ್ರಾರಂಭದಲ್ಲಿ | | ವರದಿ ಸಾಲಿನಲ್ಲಿ ಸೇರ್ಪಡೆ | | ಸಾಲಿನಲ್ಲಿ ವಾಪಸಾತಿ | | ವರ್ಷಾಂತ್ಯಕ್ಕೆ | |
|---|---|---|---|---|---|---|---|---|
| | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು |
| 'ಎ' | 25469 | 7,41,41,450 | 961 | 33,19,240 | 265 | 12,66,300 | 26165 | 7,61,94,390 |
| 'ಸಿ' | 25 | 2,500 | 1 | 100 | – | – | 26 | 2,600 |

**ವಿಷಯ 16:** ಸಹಕಾರ ಸಂಘದ ಸಮಿತಿ ಸದಸ್ಯರ, ಪದಾಧಿಕಾರಿಗಳ ಮತ್ತು ನೌಕರರುಗಳ ವರ್ತನಾ ನೀತಿ ಸಂಹಿತೆಗಳನ್ನು ರಚಿಸುವುದು.

**ತೀರ್ಮಾನ:** ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಇತ್ತೀಚೆಗೆ ತಿದ್ದುಪಡಿಯಾದ ಸಹಕಾರ ಸಂಘಗಳ ಕಾಯ್ದೆಗನುಗುಣವಾಗಿ ಪ್ರಸ್ತುತ ಇರುವ ಸಂಘದ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ಕೆಲವು ಅಂಶಗಳನ್ನು ಪರಿಷ್ಕರಿಸಿ ಜಾರಿಗೆ ತಂದಿದ್ದು, ಅನುಸಮರ್ಥನೆಗೆ ಸರ್ವಸದಸ್ಯರ ಸಭೆಗೆ ಮಂಡಿಸಿರುವುದನ್ನು ಪರಿಶೀಲಿಸಿ, ಇದನ್ನು ಅನುಮೋದಿಸಲಾಯಿತು.

**ವಿಷಯ 17:** ಸಂಘದ ಸದಸ್ಯರು ಮತ್ತು ನಿರ್ದೇಶಕರಿಂದ ಸಂಘದ ಸೇವೆಗಳ ಬಳಕೆಯ ಬಗೆಗೆ ಪರಿಶೀಲನೆ.

**ತೀರ್ಮಾನ:** ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡಿರುವುದನ್ನು ಹಾಗೂ ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ 65 ಕೆ.ಜಿ.ಗಿಂತ ಹೆಚ್ಚಿನ ಅಡಿಕೆ ಹಾಕಿದವರು 14473 ಸದಸ್ಯರು (ಶೇ.55.31) ಮತ್ತು 65 ಕೆ.ಜಿ.ಗಿಂತ ಕಡಿಮೆ ಅಡಿಕೆ ಹಾಕಿದವರು 317 ಸದಸ್ಯರು (ಶೇ.1.21) ಸಂಘದ ಸೇವೆಯನ್ನು ಬಳಸಿಕೊಂಡಿರುವುದನ್ನು ಹಾಗೂ ಸಂಘಕ್ಕೆ ಅಡಿಕೆಯನ್ನೇ ಹಾಕದವರು 11375 ಸದಸ್ಯರು (ಶೇ.43.48) ಇರುವುದನ್ನು ಗಮನಿಸಲಾಯಿತು.

**ವಿಷಯ 18:** ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳು ಯಾವುದಾದರೂ ಇದ್ದಲ್ಲಿ ಮತ್ತು ಮುಂಗಡಗಳ ಸುಸ್ತಿದಾರರು ಯಾರಾದರೂ ಇದ್ದಲ್ಲಿ, ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 19:** ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರಿಗೆ ಅವರ ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಪಟ್ಟ ಸಭೆಗಳಿಗೆ ಅವರು ಹಾಜರಾದುದಕ್ಕೆ ಸಂಬಂಧಿಸಿ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ಭತ್ಯೆಗಳ ಪರಿಶೀಲನೆ.

**ತೀರ್ಮಾನ:** 2019–20ನೇ ಸಾಲಿನಲ್ಲಿ, ಅಂದರೆ ದಿನಾಂಕ:01/04/2019 ರಿಂದ 31/03/2020ರವರೆಗೆ ಒಟ್ಟು 11 ಆಡಳಿತ ಮಂಡಳಿ ಸಭೆ, 11 ಕಾರ್ಯನಿರ್ವಾಹಕ ಸಮಿತಿ ಸಭೆ, 7 ಲೆಕ್ಕಪರಿಶೋಧನೆ ಮತ್ತು ಹಣಕಾಸು ಸಮಿತಿ ಸಭೆ, 8 ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ ಹಾಗೂ ಅಡಿಕೆ ಖರೀದಿ ವ್ಯವಹಾರ ಸಮಿತಿಯ 6 ಸಭೆಗಳು ನಡೆದಿದ್ದು, ಇದಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ನಿರ್ದೇಶಕರಿಗೆ ನಿಯಮಾನುಸಾರ ಒಟ್ಟು ರೂ.7,94,731–00ರಷ್ಟು ಭತ್ಯೆ ಪಾವತಿಸಿರುವುದನ್ನು ಗಮನಿಸಲಾಯಿತು.

**ವಿಷಯ 20:** ಯಾವುದೇ ಪೂರಕ ಸಂಸ್ಥೆಯೇನಾದರೂ ಇದ್ದರೆ, ಅವುಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪುನರವಲೋಕಿಸುವುದು.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 21:** ಇತರ ಸಹಕಾರ ಸಂಘಗಳಲ್ಲಿ ಆ ಸಂಘದ ಸದಸ್ಯತ್ವವನ್ನು ಅನುಮೋದಿಸುವುದು.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 22:** ಸಮಿತಿ ಸದಸ್ಯರ ಅಥವಾ ಮುಖ್ಯ ಕಾರ್ಯನಿರ್ವಾಹಕರ ಬಂಧುಗಳಾಗಿದ್ದು, ನೇಮಕಗೊಂಡಿರುವ ನೌಕರರ ಪಟ್ಟಿಯ ಪರಿಶೀಲನೆ.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 23:** ವಸೂಲಿಯಾಗದವನೆಂದು ಪರಿಗಣಿಸಲಾದ ವಸೂಲಾಗದ ಋಣಗಳ ಬಗೆಗೆ ತೀರ್ಮಾನ.

**ತೀರ್ಮಾನ:** ಈ ಕುರಿತು ಈಗಾಗಲೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

**ವಿಷಯ 24:** ನಿರ್ದಿಷ್ಟ ಮೀಸಲು ನಿಧಿ ಮತ್ತು ಇತರ ನಿಧಿಗಳನ್ನು ಸೃಜಿಸುವುದು.

**ತೀರ್ಮಾನ:** ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 25:** ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ವಇಚ್ಛಾ ಸಂಯೋಜನೆ, ವಿಭಜನೆ, ವರ್ಗಾವಣೆ.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 26:** ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪರಿಶೀಲನೆ.

**ತೀರ್ಮಾನ:** ಮೀಸಲು ಮತ್ತು ಇತರೆ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

**ವಿಷಯ 27:** ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲ ಹಾಗೂ ಠೇವಣಿ ಸಂಗ್ರಹದ ಬಗೆಗೆ ಮಿತಿ ನಿರ್ಧರಿಸುವುದು.

**ತೀರ್ಮಾನ:** ಸಂಘದ ಬೈಲಾ ಸಂಖ್ಯೆ:9ರ ಅನ್ವಯ ಸಾಮಾನ್ಯ ನಿಕಾಯವು ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮೊತ್ತವನ್ನು ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತ ವನ್ನು ನಿಗದಿಪಡಿಸಬೇಕಿರುವುದನ್ನು ಹಾಗೂ ಈ ಬಗೆಗೆ ಆಡಳಿತ ಮಂಡಳಿಯವರು ನೀಡಿದ ಟಿಪ್ಪಣಿ ಯನ್ನು ಪರಿಶೀಲಿಸಿ, 2020–21ನೇ ಸಾಲಿಗೆ ಈ ಠೇವಣಿ ಮೊತ್ತವನ್ನು ರೂ.175.00 ಕೋಟಿಗಳಿಗೆ ಮತ್ತು ಸಾಲದ ಮೊತ್ತವನ್ನು ರೂ.150.00 ಕೋಟಿಗಳಿಗೆ ನಿಗದಿಪಡಿಸಲು ತೀರ್ಮಾನಿಸಲಾಯಿತು.

**ವಿಷಯ 28:** ವಿಚಾರಣಾ ವರದಿ ಯಾವುದಾದರೂ ಇದ್ದರೆ, ಅದರ ಪರಿಶೀಲನೆ.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 29:** ವಿಚಾರಣಾ ಮತ್ತು ತಪಾಸಣಾ ವರದಿಗಳು ಯಾವುದಾದರೂ ಇದ್ದರೆ ಅವುಗಳ, ಮತ್ತು ಆ ವರದಿಗಳಲ್ಲಿ ಎತ್ತಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ಪರಿಹರಿಸುವ ಸಂಬಂಧದಲ್ಲಿ ಕೈಗೊಂಡ ಕ್ರಮದ ಬಗೆಗೆ ಮಂಡಲಿಯ ಅನುಸರಣಾ ವರದಿಯ ಪರಿಶೀಲನೆ.

**ತೀರ್ಮಾನ:** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 30:** ಸಂಘದ ಆಡಳಿತ ಮಂಡಳಿಯಿಂದ ಶಿಫಾರಸ್ ಆದ ಸದಸ್ಯರಿಂದ ಬಂದಿರುವ ಪತ್ರಗಳು.

**ತೀರ್ಮಾನ:** ಸಂಘದ ಸದಸ್ಯರುಗಳು ಮಹಾಸಭೆಯಲ್ಲಿ ಚರ್ಚಿಸಲು ಬಯಸಿ, ಕಳುಹಿಸಿದ ವಿಷಯಗಳ ಕುರಿತು ಕೆಳಕಂಡಂತೆ ಚರ್ಚಿಸಿ, ತೀರ್ಮಾನಿಸಲಾಯಿತು.

**1) ಶ್ರೀ ಪಿ.ಎನ್.ರಂಗನಾಥ್, ಪಡವಗೋಡು, ಸಾಗರ ತಾಲ್ಲೂಕು:**

(1) ಸಂಘದ ಅಭಿವೃದ್ಧಿ ತಃಖ್ತೆಯನ್ನು ನೋಡಿದಾಗ ಸಂಘಕ್ಕೆ ಬಂದ ಅಡಿಕೆ ಮೂಟೆಗಳು ತೃಪ್ತಿಕರವಾಗಿಲ್ಲದ ಬಗೆಗೆ.

ಕೋವಿಡ್-19 ಪ್ರಾರಂಭದ ಹಂತದಲ್ಲಿದ್ದು, ಮಾರ್ಚ್‌ನಲ್ಲಿ ಲಾಕ್‌ಡೌನ್ ಆರಂಭವಾದ ಕಾರಣ ಅಡಿಕೆ ಆವಕದಲ್ಲಿ ವ್ಯತ್ಯಯವಾಗಿರುವುದಾಗಿ ತಿಳಿಸಲಾಯಿತು.

(2) ಸಂಘದ ಷೇರುದಾರರ ಸಭೆಗೆ 2018-19ರಲ್ಲಿ ನಿರ್ದಿಷ್ಟವಾಗಿ ಎಷ್ಟು ಹಣ ಖರ್ಚಾಗಿರುತ್ತದೆ.

ಸಂಘದ ಸಾಗರ, ಹೊಸನಗರ, ಕೊಪ್ಪ, ತರಿಕೆರೆ ಮತ್ತು ಬೀರೂರು ಶಾಖೆಗಳಲ್ಲಿ ನೂತನ ಕಟ್ಟಡಗಳ ಶುಭಾರಂಭವನ್ನು ಷೇರುದಾರರ ಸಭೆಯ ದಿನದಂದೇ ಮಾಡಿದ್ದು, ಇದರ ವೆಚ್ಚವೂ ಸೇರಿ ಒಟ್ಟು ರೂ. 8,84,620.00 ಆಗಿರುವುದಾಗಿ ತಿಳಿಸಲಾಯಿತು.

(3) ಸದಸ್ಯರಿಂದ 'ನಿರ್ವಹಣಾ ವೆಚ್ಚ' (ಅಡಿಕೆ ದಾಸ್ತಾನು ಅವಧಿ ಮೀರಿದ್ದರೆ) ಸಂಘಕ್ಕೆ ಪಡೆಯುತ್ತಿದ್ದು, ಆ ಆದಾಯವನ್ನು ಯಾವ ಹೆಡ್‌ನಲ್ಲಿ ತೋರಿಸಲಾಗಿದೆ ಮತ್ತು 2019-20ರಲ್ಲಿ ವಿವಿಧ ಶಾಖೆಗಳಿಂದ 'ನಿರ್ವಹಣಾ ವೆಚ್ಚ'ದಿಂದ ಸಂಘಕ್ಕೆ ಎಷ್ಟು ಆದಾಯ ಬಂದಿರುತ್ತದೆ.

ಹ್ಯಾಂಡ್ಲಿಂಗ್ ಛಾರ್ಜಸ್ ಶಿರೋನಾಮೆಯಲ್ಲಿ ತೋರಿಸಲಾಗುತ್ತಿದೆ. 2019-20ನೇ ಸಾಲಿನಲ್ಲಿ ಸದಸ್ಯರು ಅಡಿಕೆ ಮೂಟೆಗಳನ್ನು ವಾಪಾಸು ಪಡೆಯುವಾಗ ವಿಧಿಸುವ ನಿರ್ವಹಣಾ ವೆಚ್ಚ ಮೂಟೆ ಒಂದಕ್ಕೆ ರೂ. 200.00ರಂತೆ ಜಮಾ ಬಂದ ಮೊಬಲಗು ಹಾಗೂ ವರ್ತಕರು ಖರೀದಿಸಿದ ಅಡಿಕೆ ಮೂಟೆಗಳನ್ನು ಎತ್ತುವಳಿ ಮಾಡುವಾಗ ಅವರಿಂದ ಪಡೆಯುವ ಮೊಬಲಗು ಸೇರಿ ಒಟ್ಟು ಈ ಖಾತೆಯಲ್ಲಿ ರೂ. 45,51,220.48 ಜಮಾ ಇರುವುದಾಗಿ ತಿಳಿಸಲಾಯಿತು.

(4) 'ಸಭೆಗಳು' 2019-20ರ ಸಾಲಿಗೆ ಅಂದಾಜು ಮಾಡಿದ್ದಕ್ಕಿಂತ ರೂ. 1,74,994.00 ಹೆಚ್ಚಿಗೆ ಖರ್ಚಾಗಿರುತ್ತದೆ. ಯಾವ ಸಭೆ, ನಿರ್ದಿಷ್ಟ ಸಭೆಯ ವಿವರ ಕೊಡಿ.

2019-20ನೇ ಸಾಲಿನಲ್ಲಿ ಸಾಗರ, ಹೊಸನಗರ, ಕೊಪ್ಪ, ತರಿಕೆರೆ ಮತ್ತು ಬೀರೂರು ಶಾಖೆಗಳಲ್ಲಿ ಷೇರುದಾರರ ಸಭೆಯ ದಿನದಂದು ನೂತನ ಕಟ್ಟಡಗಳ ಶುಭಾರಂಭವನ್ನು ಮಾಡಿದ್ದು, ಈ ಬಗೆಗೆ ಸಂಬಂಧಿಸಿದ ವೆಚ್ಚವೂ ಸೇರಿರುವುದರಿಂದ ಹೆಚ್ಚಿಗೆ ಆಗಿರುವುದಾಗಿ ತಿಳಿಸಲಾಯಿತು.

(5) ಸಂಘಕ್ಕೆ ನಿರ್ದೇಶಕರ ಚುನಾವಣೆ ಸಮಯದಲ್ಲಿ ಸ್ಪರ್ಧಾರ್ಥಿಗಳಿಗೆ ಅನುಕೂಲವಾಗಲು ಆಯಾ ಊರಿನ ಸದಸ್ಯರ ಹೆಸರು, ಅವರ ಮೊಬೈಲ್ ಸಂಖ್ಯೆಗಳನ್ನು ಎಲ್ಲಾ ಸ್ಪರ್ಧಾರ್ಥಿಗಳಿಗೆ ಒದಗಿಸುವ ವ್ಯವಸ್ಥೆ ಮಾಡುವುದು.

ಇದು ಸದಸ್ಯರ ವೈಯಕ್ತಿಕ ದಾಖಲೆಯಾಗಿರುವುದರಿಂದ ನೀಡುವುದು ಕಷ್ಟಸಾಧ್ಯವೆಂದು ತಿಳಿಸಲಾಯಿತು.

(6) ಲೆಕ್ಕಪರಿಶೋಧನಾ ವರದಿ ಪುಸ್ತಕವನ್ನು ಸದಸ್ಯರಿಗೆ ಅಂಚೆ ಮೂಲಕ ಕಳುಹಿಸುವ ವ್ಯವಸ್ಥೆ ಮಾಡುವುದು.

ಈ ಹಿಂದೆ ವಾರ್ಷಿಕ ಮಹಾಸಭೆಯಲ್ಲಿ ಅಂಚೆ ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ ಈ ಪುಸ್ತಕಗಳನ್ನು ಶಾಖೆಗಳಲ್ಲಿ ಇರಿಸುವಂತೆ ಸಲಹೆ ಮಾಡಿದ ಮೇರೆಗೆ ಶಾಖೆ ಮತ್ತು ಏಜೆನ್ಸಿಗಳಲ್ಲಿ ಇರಿಸುತ್ತಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2) ಶ್ರೀ ಶ್ರೀಧರ ಕೆ.ಎಸ್., ಕಲ್ಕೋಡು, ಗುಡ್ಡೇಕೇರಿ ಅಂಚೆ, ತೀರ್ಥಹಳ್ಳಿ ತಾಲ್ಲೂಕು**

(1) ಸಂಘದ ಸದಸ್ಯರಿಗೆ ಅಡಿಕೆ ವ್ಯಾಪಾರಕ್ಕೆ ಹಾಕಲು ಹಾಗೂ ಅಡಿಕೆ ಧಾರಣೆ ಮುಂತಾದ ವಿವರಗಳನ್ನು ತಿಳಿಯಲು ಅನುಕೂಲವಾಗುವಂತೆ ಇತ್ತೀಚಿನ ತಾಂತ್ರಿಕ ಸ್ಥಿತಿಗನುಗುಣವಾಗಿ ಸಂಘದ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸುವುದು.

ಈಗಾಗಲೇ ಎಸ್.ಎಂ.ಎಸ್. ಮೂಲಕ ಸದಸ್ಯರಿಗೆ ಅಡಿಕೆ ಧಾರಣೆಯನ್ನು ಕಳುಹಿಸಲಾಗುತ್ತಿದ್ದು, ಸಂಘದ ವೆಬ್‌ಸೈಟ್‌ನಲ್ಲಿಯೂ ಎಲ್ಲಾ ಮಾಹಿತಿಗಳು ಲಭ್ಯವಿರುವುದಾಗಿ ಹಾಗೂ ಇತ್ತೀಚಿನ ತಾಂತ್ರಿಕ ಸ್ಥಿತಿಗನುಗುಣವಾಗಿ ಸಂಘದ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಂಡಿರುವುದಲ್ಲದೆ, ಈ ಬಗೆಗೆ ಆ್ಯಪ್ ಅನ್ನೂ ಅಭಿವೃದ್ಧಿಪಡಿಸಲಾಗುತ್ತಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**3) ಶ್ರೀ ಟಿ.ಸುದರ್ಶನ ಕುಮಾರ್, ಕೋಡನಕಟ್ಟೆ, ಹೊಸಬಾಳೆ ಅಂಚೆ, ಸೊರಬ ತಾಲ್ಲೂಕು:**

(1) 2020ರ ಏಪ್ರಿಲ್‌ನಿಂದ ಸದಸ್ಯರ ಚೀಲವನ್ನು ತಕ್ಷಣ ವಾಪಾಸ್ ನೀಡುತ್ತಿಲ್ಲ. ವ್ಯಾಪಾರವಾದ ನಂತರವಷ್ಟೇ ನೀಡುತ್ತಿದ್ದು, ತಕ್ಷಣ ಚೀಲವನ್ನು ವಾಪಾಸ್ ನೀಡಿ, ಇದಕ್ಕೆ ಅಗತ್ಯವಾದ ಚೀಲವನ್ನು ಸಂಘವು ಮೊದಲಿನಂತೆ ಒದಗಿಸಬೇಕು.

ಸಂಘಕ್ಕೆ ಆಗುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಕ್ರಮವನ್ನು ಕೈಗೊಂಡಿದ್ದು, ಇದಕ್ಕೆ ಸದಸ್ಯರು ಸಹಕರಿಸುವಂತೆ ವಿನಂತಿಸಲಾಯಿತು.

(2) ಶಿರಸಿಯ ಟಿ.ಎಸ್.ಎಸ್.ನಂತೆ ಸಾಗರ ಮತ್ತು ತೀರ್ಥಹಳ್ಳಿಯಲ್ಲಿ ಆರಂಭಿಕವಾಗಿ ಕೃಷಿ ಉಪಕರಣ ಮತ್ತು ನಿತ್ಯೋಪಕರಣಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲು 'ಸೂಪರ್ ಬಜಾರ್' ಆರಂಭಿಸಬೇಕು.

ಈಗಾಗಲೇ ಸಂಘದಿಂದ 'ಮಾಮ್‌ಕೋಸ್ ಸಸ್ಯಚೇತನ್ಯ' ಬ್ರ್ಯಾಂಡ್‌ನಲ್ಲಿ ಸಾವಯವ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ ಹಾಗೂ ಅಗ್ರಿಲೈಮ್ ಮತ್ತು ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡುತ್ತಿರುವುದನ್ನು ಸಭೆಯ ಗಮನಕ್ಕೆ ತರುತ್ತ, ಸದಸ್ಯರು ತಿಳಿಸಿದ ಅಂಶದ ಕುರಿತು ಪರಿಶೀಲಿಸುವುದಾಗಿ ತಿಳಿಸಲಾಯಿತು.

(3) ಸಂಘಕ್ಕೆ ಅಡಿಕೆ ತರಲು ಸದಸ್ಯರ ಮನೆಗೆ ವಾಹನದ ವ್ಯವಸ್ಥೆ ಮಾಡಬೇಕು (ಕ್ಯಾಂಪ್ಕೋ ಈ ವ್ಯವಸ್ಥೆ ಆರಂಭಿಸಿದ್ದನ್ನು ಗಮನಿಸಬೇಕು)

ಒಬ್ಬೊಬ್ಬರ ಮನೆಗೆ ವಾಹನದ ವ್ಯವಸ್ಥೆ ಮಾಡುವುದು ಕಷ್ಟವಾಗಿದ್ದು, ಒಂದೇ ಭಾಗದ ಸದಸ್ಯರು ಒಂದೇ ಬಾರಿಗೆ 120-125 ಮೂಟೆ ಅಡಿಕೆ ಸಾಗಣೆಗೆ ಲಾರಿಯನ್ನು ಕೇಳಿದಲ್ಲಿ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಲಾಯಿತು.

**4) ಶ್ರೀ ಸತ್ಯನಾರಾಯಣ ಎಂ., ಮಾದಲಮನೆ, ಹುಂಚ ಅಂಚೆ, ಹೊಸನಗರ ತಾಲ್ಲೂಕು:**

(1) ಸಂಘದ ಸದಸ್ಯರಿಗೆ ಪ್ರತಿ ವರ್ಷ ಕನಿಷ್ಠ 65 ಕೆ.ಜಿ. ಅಡಿಕೆಯನ್ನು ಸಂಘಕ್ಕೆ ಹಾಕಲು ಮನದಟ್ಟು ಮಾಡಿಸಬೇಕು. ಒಂದುವೇಳೆ ಅಡಿಕೆ ಹಾಕದಿದ್ದಲ್ಲಿ ಅಂತಹ ಸದಸ್ಯರಿಗೆ ಸಂಘದ ಸವಲತ್ತು ಸಿಗದಂತೆ ಮಾಡಬೇಕು.

ಈ ಬಗೆಗೆ ಪ್ರತಿ ವರ್ಷ ಸಂಘದ ಸದಸ್ಯರಿಗೆ ಪತ್ರ ಮುಖೇನ ತಿಳಿಸುತ್ತಿರುವುದಲ್ಲದೆ, ಸಂಘದ ದಿನಚರಿ ಮತ್ತು ವಾರ್ಷಿಕ ವರದಿ ಪುಸ್ತಕದಲ್ಲಿಯೂ ಮುದ್ರಿಸುತ್ತಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**5) ಶ್ರೀ ಜಯರಾಮ್ ಎಂ.ವಿ. ಹೊಸನಗರ:**

(1) ಶಿರಸಿಯ ಕದಂಬ, ಟಿ.ಎಸ್.ಎಸ್. ಹಾಗೂ ಟಿ.ಎಂ.ಎಸ್. ಮಾದರಿಯಲ್ಲಿ ಮಾಮ್‌ಕೋಸ್ ಕೂಡ ಹಸಿ ಅಡಿಕೆ ಟೆಂಡರ್ ವ್ಯವಹಾರ ನಡೆಸುವುದರಿಂದ ಪ್ರಸ್ತುತ ಅಡಿಕೆ ವ್ಯವಹಾರದಲ್ಲಿ ಹೆಚ್ಚುತ್ತಿರುವ ಕಪ್ಪು ಹಣದ ವಹಿವಾಟನ್ನು ತಪ್ಪಿಸಲು ಅನುಕೂಲವಾಗಬಹುದು.

ಈ ಬಗೆಗೆ ಪರಿಶೀಲಿಸುವುದಾಗಿ ತಿಳಿಸಲಾಯಿತು.

(2) ಬಹುತೇಕ ಮಾಮ್‌ಕೋಸ್ ಕಛೇರಿಗಳು ಎ.ಪಿ.ಎಂ.ಸಿ. ಪ್ರಾಂಗಣದಲ್ಲೇ ಇದ್ದು, ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿ ಅನ್ವಯ ಮುಂದೆ ರೈತನ ಮನೆ ಬಾಗಿಲಿಗೆ ಖರೀದಿಗೆ ಹೋಗಬೇಕಾದ ಬಗೆಗೆ ಹಾಗೂ ಖಾಸಗಿ ಖರೀದಿದಾರರ ಮತ್ತು ದಲ್ಲಾಳಿಗಳೊಂದಿಗೆ ಸ್ಪರ್ಧಾತ್ಮಕವಾಗಿ ಮಾಮ್‌ಕೋಸ್ ಯೋಚಿಸಬೇಕಾದ ಅನಿವಾರ್ಯತೆ ಇದ್ದು, ಈ ಬಗೆಗೆ ಆಡಳಿತ ಮಂಡಳಿ ಮುಂಜಾಗರೂಕತೆ ವಹಿಸಲು ಮನವಿ.

ಇದನ್ನು ಗಮನಿಸಲಾಗುವುದಾಗಿ ತಿಳಿಸಲಾಯಿತು.

(3) ಮಾಮ್‌ಕೋಸ್‌ನ ಒಟ್ಟು ಸುಸ್ತಿ ಸಾಲವು ರೂ.304.00 ಲಕ್ಷ ಇದ್ದು, ಬದಲಾದ ಕಾಯ್ದೆ ತಿದ್ದುಪಡಿಯಲ್ಲಿ ಮಾಮ್‌ಕೋಸ್‌ಗೆ ಅಡಿಕೆಯು ಬಾರದೆ, ಮನೆ ಬಾಗಿಲ ವ್ಯಾಪಾರ ಹೆಚ್ಚಾದಲ್ಲಿ ಸಂಘಕ್ಕೆ ಅಪಾಯ ಸಂಭವಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ.

ಇದನ್ನು ಗಮನಿಸಲಾಗುವುದಾಗಿ ತಿಳಿಸಲಾಯಿತು.

**ವಿಷಯ 31:** ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಚಾರಗಳು.

ಶ್ರೀಮತಿ ರಾಜೇಶ್ವರಿ ಇವರು ಸಂಘದಲ್ಲಿ ಪ್ರಸ್ತುತ ಕಟಾವು ಸಾಲವನ್ನು ರೂ.ಒಂದು ಲಕ್ಷದವರೆಗೆ ನೀಡುತ್ತಿದ್ದು, ಇದನ್ನು ಜಾಸ್ತಿ ಮಾಡುವಂತೆ ಕೋರಿದಾಗ ಸಂಘದ ಬೈಲಾ ಪ್ರಕಾರ ರೂ.ಒಂದು ಲಕ್ಷವರೆಗೆ ಮಾತ್ರ ಕೊಡಲು ಅವಕಾಶ ಇರುವುದರಿಂದ ಈ ಸಾಲವನ್ನು ಹೆಚ್ಚಿಗೆ ಮಾಡುವ ಬಗೆಗೆ ಬೈಲಾ ತಿದ್ದುಪಡಿ ಮಾಡಬೇಕಾಗಿದ್ದು, ಈ ಬಗೆಗೆ ಪರಿಶೀಲಿಸಲಾಗುವುದೆಂದು ತಿಳಿಸಲಾಯಿತು.

ಶ್ರೀ ವಿಷ್ಣುಮೂರ್ತಿ ಇವರು ನಗರ ಹೋಬಳಿಯಲ್ಲಿ ಅಡಿಕೆಗೆ ವಿಶೇಷವಾದ ವೈರಸ್ ಬಂದು ಫಸಲು ನಾಶವಾಗುತ್ತಿರುವುದರಿಂದ ಈ ಬಗೆಗೆ ತಜ್ಞರನ್ನು ಕಳುಹಿಸುವ ವ್ಯವಸ್ಥೆ ಮಾಡುವಂತೆ ಕೋರಿದಾಗ ಈ ಬಗೆಗೆ ಸಂಘಕ್ಕೆ ಲಿಖಿತ ಮೂಲಕ ಪತ್ರವನ್ನು ಬರೆದಲ್ಲಿ ಅಡಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿಗಳಿಂದ ಸದಸ್ಯರ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿಸಲಾಗುವುದೆಂದು ತಿಳಿಸಲಾಯಿತು.

ಶ್ರೀ ರಾಮಮೂರ್ತಿ ಇವರು ಸಂಘದ ವೆಬ್‌ಸೈಟ್‌ನಲ್ಲಿ ಅಡಿಕೆ ದರವನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಶ್ರೀ ಆದರ್ಶ ಇವರು ಸೋಷಿಯಲ್ ಮೀಡಿಯಾದಲ್ಲಿ ರೈತರ ಒಂದು ಗುಂಪು ಮಾಡಿ ರೈತರಿಗೆ ಅನುಕೂಲವಾಗುವ ಮಾಹಿತಿಯನ್ನು ನೀಡುವಂತೆ ಸಲಹೆ ಮಾಡಿದರು. ಈ ಬಗೆಗೆ ಉಪಾಧ್ಯಕ್ಷರು ಮಾತನಾಡಿ ಪ್ರಸ್ತುತ ಮಾಮ್‌ಕೋಸ್ ಫೇಸ್‌ಬುಕ್ ಮತ್ತು ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಅಪ್‌ಡೇಟ್ ಮಾಡುತ್ತಿದ್ದು, ಸದಸ್ಯರು ವೆಬ್‌ಸೈಟ್‌ನಲ್ಲಿ ಬೇಕಾದರೂ ಲಾಗಿನ್ ಆಗಿ ಸಲಹೆಗಳೇನಾದರೂ ಇದ್ದಲ್ಲಿ ನೀಡಬಹುದೆಂದು ತಿಳಿಸಿದರು. ಶ್ರೀ ಆದರ್ಶ ಸಿಗದಾಳ್ ಇವರು ಸದಸ್ಯರು ಸಂಘದ ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಆನ್‌ಲೈನ್ ಮೂಲಕ ಅಡಿಕೆ ಮಾರಾಟ ಮಾಡಲು ಅವಕಾಶ ನೀಡುವಂತೆ ಕೋರಿದಾಗ, ಉಪಾಧ್ಯಕ್ಷರು ಈ ಬಗೆಗೆ ಪರಿಶೀಲಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಎಲ್.ಟಿ.ತಿಮ್ಮಪ್ಪ ಇವರು – (1) ಸಂಘದ ಸರ್ವ ಸದಸ್ಯರ ಸಭೆಯನ್ನು ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಮೂಲಕ ನಡೆಸುತ್ತಿರುವುದಕ್ಕೆ ಆಡಳಿತ ಮಂಡಳಿಗೆ ಅಭಿನಂದನೆಯನ್ನು ಸಲ್ಲಿಸಿದರು. (2) ಮಾಮ್‌ಕೋಸ್ ಸಂಸ್ಥೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಡಿಕೆಯನ್ನು ಖರೀದಿ ಮಾಡುವಂತೆ ಕೋರಿದರು. (3) ಕ್ಯಾಂಪ್ಕೋ ಸಂಸ್ಥೆಯು ಮಲೆನಾಡು ಭಾಗದಲ್ಲಿ ಕಡಿಮೆ ಪ್ರಮಾಣದಲ್ಲಿ ಅಡಿಕೆ ಖರೀದಿ ಮಾಡುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. (4) ಗೌ.ಸರ್ವೋಚ್ಚ ನ್ಯಾಯಾಲಯದಲ್ಲಿ ಅಡಿಕೆಗೆ ಸಂಬಂಧಿಸಿದ ಪ್ರಕರಣ ಇನ್ನೂ ಇತ್ಯರ್ಥವಾಗದ ಕಾರಣ ಮಾಮ್‌ಕೋಸ್, ಕ್ಯಾಂಪ್ಕೋ ಮುಂತಾದ ಸಹಕಾರ ಸಂಸ್ಥೆಯವರು ಈ ಪ್ರಕರಣ ರೈತರ ಪರವಾಗಿ ತೀರ್ಮಾನವಾಗುವಂತೆ ಅಗತ್ಯ ಕ್ರಮಕೈಗೊಳ್ಳಲು ಕೋರಿದರು. ಉಪಾಧ್ಯಕ್ಷರು ಈ ಎಲ್ಲಾ ಅಂಶಗಳ ಬಗೆಗೆ ಪರಿಶೀಲಿಸಲಾಗುವುದೆಂದು ಹೇಳಿದರು.

ಶ್ರೀ ಹೆಚ್.ಬಿ.ಮಾರ್ತಾಂಡ ಇವರು ಕಳೆದ 7–8 ವರ್ಷಗಳಿಂದ ಅಡಿಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣಗಳ ಇತ್ಯರ್ಥಕ್ಕೆ ತ್ವರಿತ ಕ್ರಮ ಕೈಗೊಳ್ಳುವಂತೆ ಹೇಳಿದಾಗ ಉಪಾಧ್ಯಕ್ಷರು ಮಾತನಾಡುತ್ತಾ, ರಾಜ್ಯ ಸರ್ಕಾರ ಈಗಾಗಲೇ ಅಡಿಕೆ ಕಾರ್ಯಪಡೆಯನ್ನು ರಚನೆ ಮಾಡಿ ರೂ.10.00 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಅಡಿಕೆಗೆ ಸಂಬಂಧಿಸಿದಂತೆ ಬೆಂಗಳೂರಿನ ರಾಮಯ್ಯ ಹಾಸ್ಪಿಟಲ್‌ನ ವಿಜ್ಞಾನಿಗಳ ತಂಡ ಸಂಶೋಧನೆ ನಡೆಸುತ್ತಿದ್ದು, ಅವರಿಂದ ವರದಿ ಬಂದ ಕೂಡಲೇ ಕೇಂದ್ರಸರ್ಕಾರಕ್ಕೆ ನೀಡುವುದಾಗಿ ಹಾಗೂ ಈಗಾಗಲೇ ಸಿ.ಪಿ.ಸಿ.ಆರ್.ಐ.ನ ವಿಜ್ಞಾನಿಗಳು ಅಡಿಕೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ ಎಂದು ತಿಳಿಸಿದರು.

ಶ್ರೀ ನಾಗರಾಜಗೌಡ ಇವರು ಸದಸ್ಯರಿಗೆ ನಗದು ಹಣವನ್ನು ಕನಿಷ್ಠ ರೂ.50,000 ವಾದರೂ ನೀಡುವ ವ್ಯವಸ್ಥೆ ಮಾಡುವಂತೆ ಕೋರಿದಾಗ ಉಪಾಧ್ಯಕ್ಷರು ಕೇಂದ್ರ ಸರ್ಕಾರ ನೋಟು ಅಮಾನ್ಯೀಕರಣ ಮಾಡಿದ ನಂತರ ಆದಾಯ ತೆರಿಗೆ ಕಾಯಿದೆಯಲ್ಲಿ ಕೆಲವು ತಿದ್ದುಪಡಿಗಳಾಗಿದ್ದು, ಆ ಪ್ರಕಾರ ರೂ.20,000 ಕ್ಕಿಂತ ಹೆಚ್ಚು ನಗದು ಪಡೆಯುವುದು ಮತ್ತು ಕೊಡುವುದು ಅಪರಾಧವಾಗುತ್ತದೆ. ಆದರೆ, ಅಡಿಕೆ ಮಾರಾಟದ ಹಣವಾದಲ್ಲಿ ರೂ.1,99,000.00 ವರೆಗೆ ಕೊಡಲು ಅವಕಾಶವಿದೆಯೆಂದು ತಿಳಿಸಿ, ಸದಸ್ಯರು ಬದಲಾದ ಕಾನೂನಿಗೆ ಅನುಗುಣವಾಗಿ ವ್ಯವಹರಿಸಿ ಸಹಕರಿಸುವಂತೆ ಕೋರಿದರು.

ಶ್ರೀ ರಾಜೇಶ್ ಹೆಚ್.ಎಸ್. ಇವರು ಗಟರ್ ಸ್ಪ್ರೇಯರ್ ಯಂತ್ರಕ್ಕೆ ನೀಡುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವಂತೆ ಕೋರಿದರು.

ಶ್ರೀ ಸತೀಶ್ ವೈ.ವಿ. ಇವರು ಸಂಘದ ಬೈಲಾ ಪ್ರಕಾರ ಕನಿಷ್ಠ 65 ಕೆ.ಜಿ. ಅಡಿಕೆ ಹಾಕದವರಿಗೆ ಈ ದಿನದವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲದ ಬಗೆಗೆ ಆಕ್ಷೇಪಿಸಿ, ಅಂತಹವರ ಬಗೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಶ್ರೀ ಯತಿರಾಜ್ ಇವರು ಮಾಮ್‌ಕೋಸ್‌ನ ಅಡಿಕೆ ಧಾರಣೆಗೂ ಹೊರಗಡೆ ಕೈ ವ್ಯಾಪಾರಕ್ಕೂ ಸುಮಾರು ರೂ.2,000 ಗಳಷ್ಟು ವ್ಯತ್ಯಾಸ ಬರುವ ಬಗೆಗೆ ಹೇಳಿದಾಗ ಉಪಾಧ್ಯಕ್ಷರು ಸಂಘವು ಕಾನೂನು ಬದ್ಧವಾಗಿ ಸರ್ಕಾರಕ್ಕೆ ಪಾವತಿಸಬೇಕಾದ ಎಲ್ಲಾ ತೆರಿಗೆಯನ್ನು ಪಾವತಿಸಬೇಕಾಗಿರುವುದರಿಂದ ಅದಕ್ಕನುಗುಣವಾಗಿ ಅಡಿಕೆ ಖರೀದಿ ಮಾಡುತ್ತಿದ್ದು, ಕೈ ವ್ಯಾಪಾರದಲ್ಲಿ ಯಾವುದೇ ತೆರಿಗೆ ಪಾವತಿ ಇಲ್ಲದಿರುವುದರಿಂದ ಧಾರಣೆಯಲ್ಲಿ ವ್ಯತ್ಯಾಸ ಬರುತ್ತದೆ. ಆದರೆ, ಸದಸ್ಯರು ಯಾವುದೇ ಕಾರಣಕ್ಕೂ ಕೈ ವ್ಯಾಪಾರಕ್ಕೆ ಪ್ರೋತ್ಸಾಹ ನೀಡದೆ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಅಡಿಕೆಯನ್ನು ತಂದು ಮಾರಾಟ ಮಾಡುವಂತೆ ಹಾಗೂ ಬಿಲ್ ನೀಡುವವರೊಂದಿಗೆ ವ್ಯವಹರಿಸುವಂತೆ ಮನವಿ ಮಾಡಿದರು. ಅಲ್ಲದೆ, ಮಾಮ್‌ಕೋಸ್ ಸಂಸ್ಥೆಯು ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿಯೂ ರೈತರಿಗೆ ತೊಂದರೆಯಾಗದಂತೆ ಅಡಿಕೆಯನ್ನು ಖರೀದಿ ಮಾಡಿರುವುದನ್ನು ಸದಸ್ಯರ ಗಮನಕ್ಕೆ ತಂದರು.

ಮುಂದುವರೆದು, ಹಲವು ಸದಸ್ಯರುಗಳು ಈ ಸರ್ವಸದಸ್ಯರ ಸಭೆಯ ಸಂದರ್ಭದಲ್ಲಿ ಎಸ್.ಎಂ.ಎಸ್. ಮೂಲಕ ಕೆಲವು ಪ್ರಶ್ನೆಗಳನ್ನು, ಸಲಹೆ ಸೂಚನೆಗಳನ್ನು ನೀಡಿದ್ದು, ಅವುಗಳಿಗೆ ಕೆಳಕಂಡಂತೆ ಉತ್ತರವನ್ನು ನೀಡಲಾಯಿತು.

**(1) ಶ್ರೀ ಕೃಷ್ಣಮೂರ್ತಿ ಎಂ.ಹೆಚ್., ನಿಟ್ಟೂರು, ಹೊಸನಗರ ತಾಲ್ಲೂಕು:**

ಹೊಸನಗರದಲ್ಲಿ ಕೆ.ವೈ.ಸಿ. ಬರುತ್ತಿಲ್ಲ ಮತ್ತು ನಮ್ಮ ಅಡಿಕೆ ತೂಕ ಮತ್ತು ಅಡಿಕೆ ರೇಟ್ ಬಗೆಗೆ ಮಾಹಿತಿ ಬರುವುದಿಲ್ಲ.

ಸಂಘಕ್ಕೆ ಕೆ.ವೈ.ಸಿ. ದಾಖಲೆಗಳನ್ನು ನೀಡಿದ ಎಲ್ಲಾ ಸದಸ್ಯರಿಗೂ ಅಡಿಕೆ ಧಾರಣೆ ಬಗೆಗೆ ಮತ್ತು ಅವರವರ ವ್ಯವಹಾರದ ಬಗೆಗೆ ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ನೀಡಲಾಗುತ್ತಿದೆ.

**(2) ಶ್ರೀ ನಾಗಾಭಟ್ಟ ಕೆ., ಹಾಲ್ಮತ್ತೂರು, ಕೊಪ್ಪ ತಾಲ್ಲೂಕು:**

ಸಾವಯವ ಗೊಬ್ಬರವನ್ನು ಏಜೆನ್ಸಿಯಿಂದ ಮಾರಾಟ ಮಾಡುವ ವ್ಯವಸ್ಥೆ ಮಾಡುವುದು.

ಪರಿಶೀಲಿಸಲಾಗುವುದು.

**(3) ಶ್ರೀಮತಿ ವೇದಾವತಿ, ಶಿವಮೊಗ್ಗ:**

ಬೆಳೆ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದು.

ಕಳೆದ ಸಾಲಿನಲ್ಲಿ ಬಡ್ಡಿ ಕಡಿಮೆ ಮಾಡಿದ್ದು, ಈಗ ನಿಗದಿಪಡಿಸಿರುವುದು ಸೂಕ್ತವಾಗಿರುತ್ತದೆ.

**(4) ಶ್ರೀಮತಿ ರತ್ನಮ್ಮ, ಚಕ್ಕಾರು, ಹೊಸನಗರ ತಾಲ್ಲೂಕು:**

ನಗರದಲ್ಲಿ ಮೈಲುತುತ್ತ, ಸುಣ್ಣ ಸರಿಯಾದ ಸಮಯಕ್ಕೆ ಸಿಗುತ್ತಿಲ್ಲ.

ಸರಿಯಾದ ಸಮಯದಲ್ಲಿಯೇ ಕೊಳೆ ಔಷಧಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುತ್ತಿದ್ದು, ಆದರೂ ಈ ಬಗೆಗೆ ಪರಿಶೀಲಿಸಲಾಗುವುದು.

**(5) ಶ್ರೀ ಶಿವರಾಮಯ್ಯ ಎಸ್.ಟಿ., ಶೆಟ್ಟಿಸರ, ಸಾಗರ ತಾಲ್ಲೂಕು:**

ಸಂಘದ ವಯಸ್ಸಾದ ಸದಸ್ಯರಿಗೆ ಆದಷ್ಟು ಬೇಗ ಕೆಲಸವನ್ನು ಮಾಡಿಕೊಡುವ ಸಲುವಾಗಿ ಹಾಗೂ ಹೆಚ್ಚು ರೈತರು ಇರುವ ಸಂದರ್ಭದಲ್ಲಿ ಹಾಲಿ ಇರುವ ಸಿಬ್ಬಂದಿಗಳಿಗೆ ನಿರ್ದಿಷ್ಟ ಪಡಿಸಿದ ವಿಭಾಗದ ಕೆಲಸಗಳನ್ನು ಮರು ಹಂಚಿಕೆ ಮಾಡುವ ಕುರಿತು.

ಪರಿಶೀಲಿಸಲಾಗುವುದು.

**(6) ಶ್ರೀ ಜಗದೀಶ ಎನ್.ಎನ್., ನಾರ್ವೆ, ಕೊಪ್ಪ ತಾಲ್ಲೂಕು:**

(ಎ) ಸಂಘದ ಆರೋಗ್ಯ ವಿಮಾ ಯೋಜನಾ ಸೌಲಭ್ಯವು ಭಾರತದ ಯಾವ ಆಸ್ಪತ್ರೆಗಳಿಗೆ ಅಥವಾ ಕರ್ನಾಟಕದ ಅಥವಾ ಮಲೆನಾಡು ಭಾಗದ ಯಾವ ಆಸ್ಪತ್ರೆಗಳಿಗೆ ಅನ್ವಯವಾಗುತ್ತದೆ.

ಭಾರತ ಅಥವಾ ಕರ್ನಾಟಕದ ಯಾವುದೇ ಆಸ್ಪತ್ರೆಗಳಿಗಾದರೂ ಇದು ಅನ್ವಯವಾಗುತ್ತದೆ.

(ಬಿ) ಮಾಮ್‌ಕೋಸ್‌ನ ಅಡಿಕೆ ಧಾರಣೆ ಇಂಟರ್‌ನೆಟ್‌ನಲ್ಲಿ ಸಿಗದಿರುವ ಬಗೆಗೆ.

ಸಂಘಕ್ಕೆ ಕೆ.ವೈ.ಸಿ. ದಾಖಲೆ ನೀಡಿದವರಿಗೆ ಎಸ್.ಎಂ.ಎಸ್. ಮೂಲಕ ಅಡಿಕೆ ಧಾರಣೆ ಕಳಿಸಲಾಗುತ್ತಿದೆ. ಸಂಘದ ವೆಬ್‌ಸೈಟ್‌ನಲ್ಲಿಯೂ ಧಾರಣೆ ವಿವರ ಇರುತ್ತದೆ.

**(7) ಶ್ರೀ ಪುಣ್ಯಪ್ರಿಯ ಟಿ.ಕೆ., ಶೃಂಗೇರಿ:**

ವರ್ಚುವಲ್ ಕಾನ್‌ಫರೆನ್ಸ್ ಜೊತೆಗೆ ಮಿಸ್‌ಕಾಲ್ ಅವಕಾಶವನ್ನು ಕಲ್ಪಿಸಿಕೊಡುವುದು.

ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.

**(8) ಶ್ರೀ ಮಂಜುನಾಥ ಎನ್.ಎ., ನಡುತೋಟ, ಶೃಂಗೇರಿ ತಾಲ್ಲೂಕು:**

ವಯಸ್ಸಾದ ಸದಸ್ಯರು ಭಾಗವಹಿಸಲು ಈ ವರ್ಚುವಲ್ ಮೀಟಿಂಗ್ ಉಪಯುಕ್ತವಾಗಿದ್ದು, ಮುಂದಿನ ಸಾಲಿನಲ್ಲಿಯೂ ಇದನ್ನು ಮಾಡುವ ಬಗೆಗೆ.

ಪರಿಶೀಲಿಸಲಾಗುವುದು.

**(9) ಶ್ರೀ ರವೀಂದ್ರ ಎ.ಜಿ., ಕೊಪ್ಪ:**

Why did you not give new gunnybags with reasonable cost to farmers ? And business days marketing rates are not available at online from November 2020 why? And also one suggestion that is you should display stocks of each category in each and every month end. It helps the farmers to know the supply and demand.

ಸಂಘವು ಸರಬರಾಜುದಾರರಿಂದ ಹೊಸ ಗೋಣಿ ಚೀಲಗಳನ್ನು ಖರೀದಿಸಿದ ದರಕ್ಕನುಗುಣವಾಗಿ ನ್ಯಾಯ ಸಮ್ಮತವಾದ ಮಾರಾಟ ದರವನ್ನು ನಿರ್ಧರಿಸಲಾಗುವುದು. ಸದಸ್ಯರಿಂದ ಕೆ.ವೈ.ಸಿ. ದಾಖಲೆಯನ್ನು ಪಡೆಯುವ ಸಲುವಾಗಿ ತತ್ಕಾಲಿಕವಾಗಿ ಎಸ್.ಎಂ.ಎಸ್. ಅನ್ನು ಸ್ಥಗಿತಗೊಳಿಸಿದ್ದು, ಇದೀಗ ಎಸ್.ಎಂ.ಎಸ್. ಕಳುಹಿಸಲಾಗುತ್ತಿದೆ. ಪ್ರತಿ ಮಾಹೆ ಅಂತ್ಯಕ್ಕೆ ಸಂಘದ ಅಡಿಕೆ ದಾಸ್ತಾನು ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗೆಗೆ ಪರಿಶೀಲಿಸಲಾಗುವುದು.

**(10) ಶ್ರೀ ಸತೀಶ್ ಎಸ್.ವಿ., ಮರಟೆ, ಶೃಂಗೇರಿ ತಾಲ್ಲೂಕು:**

ಸುಸ್ತಿ ಸಾಲಕ್ಕೆ ಸಂಬಂಧಿಸಿದಂತೆ ಕಾನೂನು ಕ್ರಮ ಜರುಗಿಸದೇ ಇರುವ ಪ್ರಕರಣ 79 ಇದ್ದು, ಇದಕ್ಕೆ ಕಾನೂನು ಕ್ರಮವನ್ನು ಏಕೆ ಕೈಗೊಳ್ಳಲಿಲ್ಲ.

ಸಂಘದಲ್ಲಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೆ ತಂದು ವಸೂಲಿಗೆ ಪ್ರಯತ್ನಿಸಲಾಗಿದ್ದು, ಈಗ ಈ ಯೋಜನೆಯ ಅವಧಿ ಮುಗಿದಿರುವ ಕಾರಣ ಮುಂದಿನ ದಿನಗಳಲ್ಲಿ ಇವರಿಂದ ವಸೂಲಾತಿಗಾಗಿ ದಾವಾಕ್ರಮ ಇಡಲಾಗುವುದು.

**(11) ಶ್ರೀ ಮಲ್ಲಿಕಾರ್ಜುನ ಸ್ವಾಮಿ ಎಸ್., ಕೂಡ್ಲಿಗೆರೆ, ಭದ್ರಾವತಿ ತಾಲ್ಲೂಕು:**

ಕೊರೋನಾ ಸಂದರ್ಭದಲ್ಲಿ ಸಂಘವು ಯಾವ ರೀತಿ ಕೆಲಸವನ್ನು ನಿರ್ವಹಿಸಿರುತ್ತದೆ.

ಸಂಘದ ಸದಸ್ಯರ ವ್ಯವಹಾರಕ್ಕೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ಲಾಕ್‌ಡೌನ್ ಸಂದರ್ಭದಲ್ಲಿಯೂ ಸೀಮಿತ ಸಿಬ್ಬಂದಿಗಳಿಂದಲೇ ಕಛೇರಿ ಕೆಲಸವನ್ನು ನಿರ್ವಹಿಸಿರುತ್ತದೆ.

**(12) ಶ್ರೀ ರಾಮಮೂರ್ತಿ ಕೆ.ಎಲ್., ಕೊಪ್ಪ:**

ಅಡಿಕೆ ಮಾರಾಟ ಮಾಡುವ ಮೊದಲು ಒಬ್ಬ ಸದಸ್ಯರ ಅಡಿಕೆ ಮೂಟೆಗಳನ್ನು ಇನ್ನೊಬ್ಬ ಸದಸ್ಯರಿಗೆ ವರ್ಗಾವಣೆ ಮಾಡಲು ಅನುಮತಿ ನೀಡುತ್ತೀರಾ?

ಅನುಮತಿ ನೀಡಲು ಅವಕಾಶ ಇರುವುದಿಲ್ಲ.

(13) (ಎ) ಶ್ರೀ ಸಂಗಪ್ಪ ಯು., ಹಿರೇಜಂಬೂರು, ಶಿಕಾರಿಪುರ ತಾಲ್ಲೂಕು
(ಬಿ) ಶ್ರೀ ಶೃಂಗೇಶ್ವರ ಕೆ.ಕೆ., ಕಲ್ಲಾರಸುಳಿ, ಕೊಪ್ಪ ತಾಲ್ಲೂಕು
(ಸಿ) ಶ್ರೀ ಕಿಟ್ಟಪ್ಪ ಗೌಡ ಎಂ.ಬಿ., ಗುಡ್ಡೇಕೊಪ್ಪ, ಕೊಪ್ಪ ತಾಲ್ಲೂಕು

(ಎ) ಅಡಿಕೆಗೆ ಬರುವ ಸುಳಿ ರೋಗಕ್ಕೆ ಮತ್ತು ಹಿಡಿಮುಂಡಿಗೆ ರೋಗಕ್ಕೆ ಪರಿಹಾರವನ್ನು ತಿಳಿಸಿ.

(ಬಿ) ಮಲೆನಾಡಿನಲ್ಲಿ ಈ ವರ್ಷ ಅಡಿಕೆ ಬೆಳೆ ಶಿಂಗಾರ ಒಣಗುವಿಕೆಯಿಂದ ಫಸಲು ಕಡಿಮೆ ಆಗಿರುವುದರಿಂದ ವಿಜ್ಞಾನಿಗಳನ್ನು ಕಳುಹಿಸಿ ಮಾಹಿತಿ ನೀಡುವ ಬಗೆಗೆ.

(ಸಿ) ಹಳದಿ ಎಲೆ ರೋಗಕ್ಕೆ ಪರಿಹಾರ ಕುರಿತು.

ಈ ಕುರಿತು ಸಂಘಕ್ಕೆ ಲಿಖಿತ ಮೂಲಕ ಪತ್ರವನ್ನು ಬರೆದಲ್ಲಿ ಅಡಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿಗಳಿಂದ ಸದಸ್ಯರ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿಸಲಾಗುವುದು.

**(14) ಶ್ರೀ ಪರಮೇಶ್ವರಪ್ಪ ಬಿ., ಮಳೂರು, ಶಿಕಾರಿಪುರ ತಾಲ್ಲೂಕು:**

ಸಂಘದ ಶಿಕಾರಿಪುರ ಶಾಖೆಯಲ್ಲಿ ಗುರುವಾರ ವ್ಯಾಪಾರ ಮಾಡುವ ಬಗೆಗೆ.

ಪರಿಶೀಲಿಸಲಾಗುವುದು.

**(15) ಶ್ರೀ ರುದ್ರೇಗೌಡ ಬಿ.ಎಸ್., ಬಾಣೂರು, ಕಡೂರು ತಾಲ್ಲೂಕು:**

ಬ್ಯಾಂಕ್‌ನಲ್ಲಿ ಬಡ್ಡಿ ದರ ಕಡಿಮೆ ಇದೆ. ನೀವೂ ಸಹ ಕಡಿಮೆ ಮಾಡಿ.

ಈಗಿರುವ ಬಡ್ಡಿ ದರ ಸೂಕ್ತವಾಗಿರುತ್ತದೆ.

**(16) ಶ್ರೀ ಚಂದ್ರಶೇಖರ ಎನ್., ಶಿವಮೊಗ್ಗ**

ಸಂಘದ ಲಾರಿ ಬಾಡಿಗೆ ವಿವರಗಳ ಬಗೆಗೆ ಮತ್ತು ಅಗತ್ಯವಿರುವ ಕಾರಣಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಖರ್ಚನ್ನು ಬಡ್ಜೆಟ್‌ನಲ್ಲಿ ನಿರ್ವಹಿಸುವ ಬಗೆಗೆ.

ಸಂಘದ ಲಾರಿಗೆ ಸಂಬಂಧಿಸಿದಂತೆ ಈಗಾಗಲೇ ಸಭೆಯಲ್ಲಿ ವಿವರಗಳನ್ನು ನೀಡಲಾಗಿರುತ್ತದೆ. ಬಡ್ಜೆಟ್ ನಿರ್ವಹಣೆಗೆ ಸಂಬಂಧಿಸಿದಂತೆ ಸಲಹೆಯನ್ನು ಗಮನಿಸಲಾಗುವುದು.

**(17) ಶ್ರೀ ಕುಮಾರಸ್ವಾಮಿ ಎ.ಆರ್., ಅಟ್ಟಳ್ಳಿ, ಹೊಸನಗರ ತಾಲ್ಲೂಕು**

ಸಂಘದ ನಿಟ್ಟೂರು ಏಜೆನ್ಸಿಗೆ ಸಾಗರ ಶಾಖೆಯಿಂದ ಚಾಲಿ ಅಡಿಕೆಗೆ ಖಾಲಿ ಚೀಲವನ್ನು ಸರಿಯಾಗಿ ಒದಗಿಸುತ್ತಿಲ್ಲ.

ಪರಿಶೀಲಿಸಲಾಗುವುದು. ಆದರೆ, ಸಂಘದಲ್ಲಿ ಮುಂಚಿತವಾಗಿ ಖಾಲಿ ಚೀಲವನ್ನು ಒದಗಿಸುವ ಪದ್ಧತಿ ಇಲ್ಲದ ಕಾರಣ ನಿಗದಿಪಡಿಸಿದ ದರದಲ್ಲಿ ಖಾಲಿ ಚೀಲವನ್ನು ಖರೀದಿಸಬಹುದಾಗಿರುತ್ತದೆ.

**(18) ಶ್ರೀ ಶಿವಾನಂದ ಬಿ.ಎಸ್., ಬಡಕೆರೆ, ಶೃಂಗೇರಿ ತಾಲ್ಲೂಕು:**

ಮಹಾಸಭೆಯ ಖರ್ಚು ಉಳಿತಾಯ ಆಗಿರುವುದರಿಂದ ಆ ಹಣವನ್ನು ಹಳದಿ ಎಲೆ ರೋಗ ಪೀಡಿತ ತೋಟದ ಷೇರುದಾರರಿಗೆ ನೀಡುವ ಬಗೆಗೆ.

ಸಂಘದ ನಿಯಮದಲ್ಲಿ ಇದಕ್ಕೆ ಅವಕಾಶ ಇರುವುದಿಲ್ಲ.

**(19) ಶ್ರೀ ಸರ್ವೋತ್ತಮ ನಾಯಕ್ ಕೆ., ಕುರುವಳ್ಳಿ, ತೀರ್ಥಹಳ್ಳಿ ತಾಲ್ಲೂಕು:**

ಮತದಾನದ ಅನರ್ಹತೆಗೆ ಕಾರಣವೇನು? ಸದಸ್ಯರು ಐದರಲ್ಲಿ ಮೂರು ಸರ್ವಸದಸ್ಯರ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಏನು ಮಾಡಬೇಕು ಹಾಗೂ ಈ ಪದ್ಧತಿಯನ್ನು ನಿಲ್ಲಿಸುವುದು ಸೂಕ್ತ.

ಸಹಕಾರ ಸಂಘಗಳ ಕಾಯಿದೆಯಲ್ಲಿಯೇ ಈ ನಿಬಂಧನೆ ಇರುವುದರಿಂದ ಕಡ್ಡಾಯವಾಗಿ ಇದನ್ನು ಪಾಲನೆ ಮಾಡಬೇಕಾಗಿರುತ್ತದೆ. ಸಂಘದಿಂದ ನಿಲ್ಲಿಸುವುದು ಕಷ್ಟಸಾಧ್ಯವಾಗಿರುತ್ತದೆ.

**(20) ಶ್ರೀ ಜಯರಾಂ ಎಂ.ವಿ., ಹೊಸನಗರ:**

ಚುನಾವಣಾ ವರ್ಷಗಳನ್ನು ಹೊರತುಪಡಿಸಿ ಮುಂದಿನ ಜಿ.ಬಿ.ಎಂ. ಗಳಲ್ಲಿ ಸಹ ವರ್ಚುವಲ್ ಈವೆಂಟ್ ಅನ್ನು ಪರಿಗಣಿಸುತ್ತೀರಾ?

ಈ ಬಗೆಗೆ ಪರಿಶೀಲಿಸಲಾಗುವುದು.

**(21) ಶ್ರೀ ಆದಿತ್ಯ ಹೆಚ್.ಜೆ., ಹಲಸಿನಹಳ್ಳಿ, ತೀರ್ಥಹಳ್ಳಿ ತಾಲ್ಲೂಕು:**

ಮುಂದಿನ ಮಹಾಸಭೆಗಳಿಗೂ ಆನ್‌ಲೈನ್‌ನಲ್ಲಿ ಭಾಗವಹಿಸಲು ಸದಸ್ಯರಿಗೆ ಅವಕಾಶ ಮಾಡಿಕೊಡುವ ಬಗೆಗೆ ಕ್ರಮವಿಡುವ ಕುರಿತು.

ಈ ಬಗೆಗೆ ಪರಿಶೀಲಿಸಲಾಗುವುದು.

**(22) ಶ್ರೀ ಸೂರ್ಯನಾರಾಯಣ ಜೆ.ಕೆ., ಜೋಗಿಸರ, ಕೊಪ್ಪ ತಾಲ್ಲೂಕು:**

ಅಡಿಕೆ ಮೇಲಿನ ಅಡ್ವಾನ್ಸ್ ಹಣಕ್ಕೆ ಬಡ್ಡಿ ಕಡಿಮೆ ಮಾಡಿದರೆ ಅಡಿಕೆಯನ್ನು ಸಂಸ್ಥೆಯಲ್ಲಿ ದಾಸ್ತಾನು ಮಾಡಿ ಉತ್ತಮ ದರ ಬರುವವರೆಗೆ ಕಾಯಲು ಅನುಕೂಲವಾಗುತ್ತದೆ.

ಅಡಿಕೆ ಮೇಲಿನ ಮುಂಗಡ ಹಣಕ್ಕೆ ಈಗ ನಿಗದಿಪಡಿಸಿರುವ ಬಡ್ಡಿ ದರ ಸೂಕ್ತವಾಗಿರುತ್ತದೆ. ಇನ್ನು ಮುಂದೆ 3–4 ವರ್ಷಗಳಿಗೂ ಮೇಲ್ಪಟ್ಟು ದಾಸ್ತಾನಿರುವ ಅಡಿಕೆ ಮೂಟೆಗಳಿಗೆ ಶುಲ್ಕವನ್ನು ನಿಗದಿಪಡಿಸುವ ಬಗೆಗೆ ಪರಿಶೀಲಿಸಲಾಗುತ್ತಿದೆ.

**(23) ಶ್ರೀ ಅರವಿಂದ ಎ.ಡಿ., ಅಸಗೋಡು ಎಸ್ಟೇಟ್, ಕೊಪ್ಪ**

ಸಂಘದಲ್ಲಿ ಚಾಲಿ ವ್ಯಾಪಾರ ಮಾಡಿ

ಈಗಾಗಲೇ ಸಂಘದ ಸಾಗರ, ಹೊಸನಗರ ಮತ್ತು ಬೀರೂರು ಶಾಖೆಗಳಲ್ಲಿ ಚಾಲಿ ಅಡಿಕೆ ವ್ಯಾಪಾರವನ್ನು ಮಾಡಲಾಗುತ್ತಿದೆ.

**(24) ಶ್ರೀ ನಾಗೇಶ ಎಂ.ಕೆ., ಮುಜೇಖಾನ್, ಮೂಡಿಗೆರೆ ತಾಲ್ಲೂಕು:**

ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಯಲ್ಲಿ ಹೆಚ್ಚು ಅಂಕ ತೆಗೆದರೆ ಪಾರಿತೋಷಕ ಬಹುಮಾನ ಕೊಡುವುದಿಲ್ಲವಾ ?

ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಬಂದಿರುವ ಅರ್ಜಿಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ಅತ್ಯಂತ ಹೆಚ್ಚಿನ ಅಂಕ ತೆಗೆದ ಒಬ್ಬರಿಗೆ ಮಾತ್ರ ಪಾರಿತೋಷಕ ಬಹುಮಾನವನ್ನು ನೀಡಲಾಗುವುದು.

**(25) ಶ್ರೀ ತುಕಾರಾಮ ಟಿ.ಟಿ., ಕಮ್ಮಚ್ಚಿ, ಹೊಸನಗರ ತಾಲ್ಲೂಕು:**

ಸಂಘದಲ್ಲಿ ಈ ಹಿಂದೆ ಅಳವಡಿಸಿರುವ ಮರಣೋತ್ತರ ನಿಧಿ ಯೋಜನೆ – 1 ಅನ್ನು ಪುನಃ ಮುಂದುವರೆಸುವ ಬಗೆಗೆ.

ಈ ಯೋಜನೆಯಿಂದ ಸಂಘಕ್ಕೆ ಆರ್ಥಿಕ ಹೊರೆಯಾಗುತ್ತಿರುವ ಕಾರಣ ಇದನ್ನು ಸ್ಥಗಿತಗೊಳಿಸಿದ್ದು, ಇದರ ಬದಲು ಮರಣೋತ್ತರ ಯೋಜನೆ – II ಅನ್ನು ಅಳವಡಿಸಲಾಗಿದೆ.

**(26) ಶ್ರೀ ಗೋಪಾಲಕೃಷ್ಣ ಕೆ.ಎಸ್., ಸಾಗರ:**

ನಮ್ಮ ಮಲೆನಾಡಿನಲ್ಲಿ ಅಡಿಕೆ ತೋಟಗಳು ಆಮ್ಲೀಯ ಗುಣ ಹೊಂದಿದ್ದು, ಅದಕ್ಕೆ ಸುಣ್ಣವನ್ನು ಹಾಕಬೇಕು. ಈಗ ಕಾಳುಗಳ ರೂಪದಲ್ಲಿ ದೊರೆಯುತ್ತದೆ. ಇದನ್ನು ಮಾಮ್‌ಕೋಸ್‌ನಿಂದ ಸಿಗುವ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಸಂಘದಲ್ಲಿ ಡೋಲೋಮೈಟ್ ಮತ್ತು ಅಗ್ರಿಲೈಮ್ ಲಭ್ಯವಿರುತ್ತದೆ.

**(27) ಶ್ರೀ ಶೃಂಗೇಶ್ವರ ಕೆ.ಎನ್., ಕವಳಗೆರೆ, ಶೃಂಗೇರಿ ತಾಲ್ಲೂಕು:**

ಸಂಘದ ಮುಖ್ಯ ಶಾಖೆಯ ಅಡಿಕೆ ಧಾರಣೆಯನ್ನು ಸದಸ್ಯರಿಗೆ ಕಳಿಸಬೇಕು.

ಶಾಖೆಗೆ ಕೆ.ವೈ.ಸಿ. ದಾಖಲೆಯನ್ನು ನೀಡಿದ ಸದಸ್ಯರಿಗೆ ಎಸ್.ಎಂ.ಎಸ್. ಮೂಲಕ ಅಡಿಕೆ ಧಾರಣೆಯನ್ನು ತಿಳಿಸಲಾಗುತ್ತಿದೆ.

**(28) ಶ್ರೀ ಸುದರ್ಶನಕುಮಾರ್ ಟಿ., ಕೋಡನಕಟ್ಟೆ, ಸೊರಬ ತಾಲ್ಲೂಕು:**

ಹೊಸ ಕೃಷಿ ಮಸೂದೆಯ ನಂತರದ ಪರಿಣಾಮಗಳ ಬಗ್ಗೆ ಮಾಮ್‌ಕೋಸ್ ಮೇಲಾಗುವ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಿದ್ದೀರಾ?

ಈ ಕುರಿತು ಗಮನಿಸಲಾಗುತ್ತಿದೆ.

**(29) ಶ್ರೀ ಶ್ರೀಧರ ಎಂ.ಎಂ., ಮಡಸೂರು, ಸಾಗರ ತಾಲ್ಲೂಕು:**

ನಿಗದಿತ ಠೇವಣಿಯ ಅವಧಿ ಮುಕ್ತಾಯವಾಗುವ ಸಂದರ್ಭದಲ್ಲಿ ಠೇವಣಿದಾರರಿಗೆ ಮಾಹಿತಿ ನೀಡುವ ಬಗೆಗೆ.

ಈ ಬಗೆಗೆ ಈಗಾಗಲೇ ಸಂಬಂಧಿಸಿದ ಠೇವಣಿದಾರರಿಗೆ ಮಾಹಿತಿ ನೀಡಲಾಗುತ್ತಿದೆ.

**(30) ಶ್ರೀ ವೆಂಕಟಯ್ಯ ಗೌಡ ಎಂ.ಪಿ., ಮುತ್ತೂರು, ಕೊಪ್ಪ ತಾಲ್ಲೂಕು:**

ತಂದೆಯ ಷೇರು ಸಂಖ್ಯೆಯನ್ನು ಅವರ ನಾಮಿನಿದಾರರಿಗೆ ವರ್ಗಾಯಿಸುವ ಬಗೆಗೆ.

ಈ ರೀತಿ ಮಾಡಲು ಕಾಯ್ದೆ ಹಾಗೂ ನಿಯಮದಲ್ಲಿ ಅವಕಾಶ ಇರುವುದಿಲ್ಲ.

**(31) ಶ್ರೀ ಸುರೇಂದ್ರ, ಪಡುವಾನೆ, ಶೃಂಗೇರಿ ತಾಲ್ಲೂಕು:**

ಮೂರು ಬಾರಿ ನಂತರ ಅಡಿಕೆಯನ್ನು ಮಾರಾಟಕ್ಕೆ ಹಾಕಿದಲ್ಲಿ ಸಂಸ್ಥೆಯಿಂದ ಚಾರ್ಜ್ ಮಾಡುವ ವಿಚಾರವು ಪ್ರಸಕ್ತ ಸಾಲಿನ ಅಡಿಕೆಗೂ ಅನ್ವಯವಾಗುವುದೇ? ಇಲ್ಲವೇ ಎಷ್ಟು ವರ್ಷದ ಹಳೆಯ ಅಡಿಕೆಗೆ ಅನ್ವಯವಾಗುವುದು? ಕೆಲವೊಮ್ಮೆ ಸೀಜನ್‌ನಲ್ಲಿ ವ್ಯಾಪಾರಕ್ಕೆ ಹಾಕಲು ಹೇಳಿದರೂ ಮೂಟೆ ಸಿಗದೆ ಇಲ್ಲವೇ ಸ್ಥಳಾಭಾವದಿಂದ ಮೂಟೆ ವ್ಯಾಪಾರಕ್ಕೆ ಬೀಳದಿರುವ ಸಂದರ್ಭದಲ್ಲಿ ಮುಂದಿನ ವ್ಯಾಪಾರದಲ್ಲಿ ಧಾರಣೆ ಕಡಿಮೆಯಾದಲ್ಲಿ ಸಂಸ್ಥೆಯು ಆ ನಷ್ಟವನ್ನು ಭರಿಸುವುದೇ?

ಮೂರು ಬಾರಿ ನಂತರ ಅಡಿಕೆಯನ್ನು ಮಾರಾಟಕ್ಕೆ ಹಾಕಿದ ಸಂದರ್ಭದಲ್ಲಿ ಶುಲ್ಕವನ್ನು ವಿಧಿಸುವ ಬಗೆಗೆ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಮುಂದಿನ ವ್ಯಾಪಾರದಲ್ಲಿ ಧಾರಣೆ ಕಡಿಮೆಯಾದಲ್ಲಿ ಸಂಸ್ಥೆಯಿಂದ ಆ ನಷ್ಟವನ್ನು ಭರಿಸಲು ಅವಕಾಶ ಇರುವುದಿಲ್ಲ.

**(32) ಶ್ರೀ ಪ್ರಭಾಕರ ವೈ.ಎ., ಯಡೂರು, ಹೊಸನಗರ ತಾಲ್ಲೂಕು:**

How many cases are pending before courts and ARCS for the recovery of the outstanding dues of farmers and traders. What is the total amount classified as bad debts. Who are your panel advocates. What is the fee you have paid during the present accounting year.

ಸಂಘದ ಜಮಾ-ಖರ್ಚು ತಃಖ್ತೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಮಾಹಿತಿ ಲಭ್ಯವಿರುತ್ತದೆ.

**(33) ಶ್ರೀ ರೇಣುಕಪ್ಪ ಎಸ್., ಗೋರನಹಳ್ಳಿ, ಹೊಸನಗರ ತಾಲ್ಲೂಕು:**

ಬೋರ್ಡೋ ದ್ರಾವಣ ತಯಾರಿಸುವ ಕುರಿತು ರೈತರಿಗೆ ಸೂಕ್ತ ತರಬೇತಿಯನ್ನು ನೀಡುವ ಬಗೆಗೆ.

ತರಬೇತಿ ಪಡೆದ ಸಂಘದ ಶಾಖಾ ಸಿಬ್ಬಂದಿಗಳೇ ಬೋರ್ಡೋ ದ್ರಾವಣ ತಯಾರಿಸುವ ಕುರಿತು ಮಾಹಿತಿಯನ್ನು ನೀಡುತ್ತಿದ್ದಾರೆ.

**(34) ಶ್ರೀಮತಿ ಜಯಲಕ್ಷ್ಮೀ ಆರ್. ಮಯ್ಯ, ಆಡುಗೋಡು, ತೀರ್ಥಹಳ್ಳಿ ತಾಲ್ಲೂಕು:**

ಅಡಿಕೆಯ ಉತ್ಪನ್ನಗಳು ಮತ್ತು ಉಪ ಉತ್ಪನ್ನಗಳ ಕುರಿತು ಗಮನಹರಿಸುವುದು ಸೂಕ್ತ ಹಾಗೂ ತಂತ್ರಜ್ಞಾನವನ್ನು ಬಳಸಿಕೊಂಡು ಭಾರತದ ವಿವಿಧೆಡೆಗಳಲ್ಲೂ ದೊಡ್ಡ ಪ್ರಮಾಣದಲ್ಲಿ ಅಡಿಕೆಯನ್ನು ನೇರವಾಗಿ ಖರೀದಿದಾರರಿಗೆ ಮಾರಾಟ ಮಾಡುವುದು.

ಸಲಹೆಯನ್ನು ಗಮನಿಸಲಾಗುವುದು.

**(35) ಶ್ರೀ ಬಾಲರಾಜ ಹೆಚ್.ಬಿ., ಕೆಂಚೂರು, ಮೂಡಿಗೆರೆ ತಾಲ್ಲೂಕು:**

ಹೆಚ್ಚಿನ ಪ್ರಮಾಣದಲ್ಲಿ ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಅಡಿಕೆ ಸಂಗ್ರಹಣಾ ಏಜೆನ್ಸಿಯನ್ನು ತೆರೆಯುವ ಕುರಿತು.

ಈಗಾಗಲೇ ಇಂತಹ ಕಡೆಗಳಲ್ಲಿ ಏಜೆನ್ಸಿಯನ್ನು ತೆರೆಯಲಾಗಿದ್ದು, ಕೆಲವೆಡೆಗಳಲ್ಲಿ ಅಡಿಕೆ ಖರೀದಿ ಕೇಂದ್ರವನ್ನು ತೆರೆಯುವ ಬಗೆಗೆ ಪರಿಶೀಲಿಸಲಾಗುತ್ತಿದೆ.

**(36) ಶ್ರೀಮತಿ ಮಹಾಲಕ್ಷ್ಮೀ ಬಿ.ಜಿ., ಬಂಜಗಾರು, ಸಾಗರ ತಾಲ್ಲೂಕು:**

ಸಂಘದ ನೌಕರರಿಗೆ ಸಮವಸ್ತ್ರವನ್ನು ಜಾರಿಗೆ ತಂದು ಕಡ್ಡಾಯಗೊಳಿಸಿ.

ಸಲಹೆಯನ್ನು ಗಮನಿಸಲಾಗುವುದು.

**(37) ಶ್ರೀ ಬಂಗಾರೇಶ್ವರ ಭಟ್ಟ ಕೆ.ಪಿ., ಕಾನ್ಮನೆ, ಸಾಗರ ತಾಲ್ಲೂಕು:**

ಎ.ಪಿ.ಎಂ.ಸಿ. ಸೆಸ್ ಅನ್ನು 0.35 ರಿಂದ ರೂ.1.00 ಮಾಡಿದ್ದರಿಂದ ಖರೀದಿದಾರರು ವ್ಯಾಪಾರ ನಿಲ್ಲಿಸಿದ್ದು, ಇದರಿಂದ ಸಂಸ್ಥೆಗೆ ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆಯಾ? ಸಂಸ್ಥೆಯ ಮುಂದಿನ ನಡೆ ಏನು? ಸದಸ್ಯರಿಗೆ ಏನು ಭರವಸೆ ಕೊಡುತ್ತೀರಾ?

ಮಾಮ್‌ಕೋಸ್ ಸಂಸ್ಥೆಗೆ ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಸದಸ್ಯರು ಆತಂಕ ಪಡುವ ಅಗತ್ಯ ಇರುವುದಿಲ್ಲ.

**(38) ಶ್ರೀ ದತ್ತಮೂರ್ತಿ ಕೆ.ಜಿ., ಶಿರವಂತೆ, ಸಾಗರ ತಾಲ್ಲೂಕು:**

ಮಾಮ್‌ಕೋಸ್ ಇತ್ತೀಚಿನ ದಿನಗಳಲ್ಲಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ. ಆಡಳಿತ ಮಂಡಳಿಗೆ ಧನ್ಯವಾದಗಳು.

ಆಡಳಿತ ಮಂಡಳಿ ಪರವಾಗಿ ತಮಗೂ ಹೃತ್ಪೂರ್ವಕ ಧನ್ಯವಾದಗಳು.

**(39) (ಎ) ಶ್ರೀ ಮಹಾವೀರ ಸಿ.ಪಿ., ತುಮರಿ, ಸಾಗರ ತಾಲ್ಲೂಕು**
**(ಬಿ) ಶ್ರೀ ಲಕ್ಷ್ಮೀನಾರಾಯಣ ಭಟ್ಟ ಹೆಚ್.ಎಂ., ಹೊನಗೋಡು, ಸಾಗರ ತಾಲ್ಲೂಕು**
**(ಸಿ) ಶ್ರೀ ಟಿ.ಎಂ.ಶೇಷಗಿರಿ, ತುಮರಿ, ಸಾಗರ ತಾಲ್ಲೂಕು**

(ಎ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರೈತರಿಗೆ ಕೃಷಿ ಉಪಕರಣಗಳು ಮತ್ತು ಸಿಮೆಂಟ್, ಕಬ್ಬಿಣ ವ್ಯಾಪಾರ ಮಳಿಗೆ ತೆರೆಯುವುದು. ಸಾಗರ ತಾಲ್ಲೂಕಿನ ತುಮರಿಯಲ್ಲಿ ಎ.ಪಿ.ಎಂ.ಸಿ. ಜಾಗ ಖರೀದಿಸಿ, ಶಾಖೆ ಪ್ರಾರಂಭಿಸುವುದು.

(ಬಿ) ಸಾಗರದಲ್ಲಿ ಮಾಮ್‌ಕೋಸ್ ಮತ್ತು ಆಪ್ಸ್‌ಕೋಸ್ ಎರಡೂ ಕಡೆ ಷೇರು ಇರಲಿಕ್ಕೆ ನಿರ್ಬಂಧ ಇದೆ ಯಾಕೆ? ಸಾಗರ ತಾಲ್ಲೂಕಿನ ತುಮರಿಯಲ್ಲಿ ಸಂಘದ ಶಾಖೆಯನ್ನು ತೆರೆಯಲು ಬೇಡಿಕೆ ಇದೆ.

(ಸಿ) ತುಮರಿಯಲ್ಲಿ ಸಂಘದ ಏಜೆನ್ಸಿಯನ್ನು ತೆರೆಯುವ ಬಗೆಗೆ.

ವ್ಯಾಪಾರ ಮಳಿಗೆ ತೆರೆಯುವ ಬಗೆಗೆ ಪರಿಶೀಲಿಸಲಾಗುವುದು. ಸಹಕಾರ ಸಂಘಗಳ ಕಾಯಿದೆ ಅನ್ವಯ ಒಂದೇ ರೀತಿ ವ್ಯವಹಾರ ನಡೆಸುವ ಎರಡು ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಲು ಅವಕಾಶ ಇರುವುದಿಲ್ಲ. ತುಮರಿಯಲ್ಲಿ ಸಂಘದ ಅಡಿಕೆ ಸಂಗ್ರಹಣಾ ಏಜೆನ್ಸಿಯನ್ನು ತೆರೆಯಲು ಉದ್ದೇಶಿಸಲಾಗಿದೆ.

**(40) ಶ್ರೀ ಶಶಿ ಹೆಚ್.ಎಸ್., ಹಿರೇಬೈಲು, ತೀರ್ಥಹಳ್ಳಿ ತಾಲ್ಲೂಕು:**

ಶಾಖಾ ಕಚೇರಿಯಲ್ಲಿ ಮೈಲುತುತ್ತವನ್ನು ಖರೀದಿಸಿದಾಗ ಡಿಜಿಟಲ್ ಪಾವತಿಯನ್ನು ಬಳಸುವ ಬಗೆಗೆ.

ಪರಿಶೀಲಿಸಲಾಗುವುದು.

**(41) ಶ್ರೀ ನಾಗೇಂದ್ರ ಪ್ರಸಾದ್ ಬಿ.ವಿ., ದೇವರಕಾಡು ಎಸ್ಟೇಟ್, ಕೊಪ್ಪ ತಾಲ್ಲೂಕು:**

ಕೋವಿಡ್ ಸಮಯದಲ್ಲಿಯೂ ಸೋಷಿಯಲ್ ಮೀಡಿಯಾ ಉಪಯೋಗಿಸಿ ರೈತರೊಂದಿಗೆ ಸಭೆ ನಡೆಸುತ್ತಿರುವುದು ಶ್ಲಾಘನೀಯ. ಎಲ್ಲಾ ನಿರ್ದೇಶಕರಿಗೆ ಮತ್ತು ಉಪಾಧ್ಯಕ್ಷರಿಗೆ ಅಭಿನಂದನೆಗಳು.

ಆಡಳಿತ ಮಂಡಳಿ ಪರವಾಗಿ ತಮಗೆ ಧನ್ಯವಾದಗಳು.

**(42) ಶ್ರೀ ನಾಗಭೂಷಣರಾವ್ ಕೆ.ಹೆಚ್., ಕಾಸರವಳ್ಳಿ, ತೀರ್ಥಹಳ್ಳಿ ತಾಲ್ಲೂಕು ಮತ್ತು ಶ್ರೀ ಓಬಯ್ಯಗೌಡ ಹೆಚ್.ಎನ್., ಹೊಳೆಮೊದಲು, ತೀರ್ಥಹಳ್ಳಿ ತಾಲ್ಲೂಕು:**

ಈಗ ಎ.ಪಿ.ಎಂ.ಸಿ.ಗೆ ಅಡಿಕೆ ಹೋಗಬೇಕು ಅಂತ ಇಲ್ಲದ ಕಾರಣ ರೈತರು ಬೇರೆ ವ್ಯಾಪಾರಿಗಳಿಗೆ ಅಡಿಕೆಯನ್ನು ಮನೆ ಬಾಗಿಲಿನಲ್ಲೇ ಮಾರಾಟ ಮಾಡುತ್ತಿದ್ದಾರೆ. ಅದರಿಂದ ಸಂಸ್ಥೆಗೆ ಅಡಿಕೆ ತುಂಬಾ ಕಡಿಮೆ ಬಂದು ನಷ್ಟ ಆಗುತ್ತದೆ. ಅದರ ಬಗೆಗೆ ನೀವೇನು ಕ್ರಮ ಕೈಗೊಂಡಿದ್ದೀರಾ ಅಂತ ಎಲ್ಲರಿಗೂ ತಿಳಿಸಿ.

ಈಗಾಗಲೇ ಸಂಘದ ಸದಸ್ಯರಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಅಡಿಕೆಯನ್ನು ತಂದು ಮಾರಾಟ ಮಾಡಿ ಎಂದು ಮನವಿ ಮಾಡಿಕೊಳ್ಳಲಾಗುತ್ತಿದೆ. ಸಂಘದಿಂದಲೂ ಸಹ ಕೆಲವು ಕಡೆಗಳಲ್ಲಿ ಅಡಿಕೆ ಖರೀದಿ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಂಡಿದೆ.

**(43) ಶ್ರೀ ನಾಗರಾಜ ಕೆ.ಎಸ್., ಕೋಡನಕಟ್ಟೆ, ಸೊರಬ ತಾಲ್ಲೂಕು:**

ಸಂಘದ ವೆಬ್‌ಸೈಟ್‌ನಲ್ಲಿ ಅಡಿಕೆ ಧಾರಣೆ ಕ್ರಮಬದ್ಧವಾಗಿ ಅಪ್‌ಡೇಟ್ ಆಗುತ್ತಿಲ್ಲ. ಸದಸ್ಯರಿಗೆ ಎಸ್.ಎಂ.ಎಸ್. ಕಳುಹಿಸಿದ ದಿನವೇ ವೆಬ್‌ಸೈಟ್‌ನಲ್ಲೂ ಧಾರಣೆ ಅಪ್‌ಡೇಟ್ ಮಾಡುವುದು.

ಕ್ರಮ ಕೈಗೊಳ್ಳಲಾಗುವುದು.

**(44) ಶ್ರೀರಮಣರಾವ್ ಹೆಚ್.ಜಿ., ಹಿಂಬರವಳ್ಳಿ, ಶೃಂಗೇರಿ ತಾಲ್ಲೂಕು:**

ಗುಂಪು ವಿಮಾ ಯೋಜನೆಯಂತೆ ಫಸಲು ವಿಮಾ ಯೋಜನೆಗೂ ಸ್ವಯಂಪ್ರೇರಣೆಯಿಂದ ಪ್ರೀಮಿಯಂ ಪಾವತಿಸುವ ಕುರಿತು.

ಫಸಲು ವಿಮಾ ಯೋಜನೆ ಸರ್ಕಾರದ ಯೋಜನೆಯಾಗಿದ್ದು, ಸಂಘದಿಂದ ಪಾವತಿಸಲು ಬರುವುದಿಲ್ಲ.

**(45) ಶ್ರೀ ಜಯಶೀಲ ಕೆ.ಎಂ., ಕಲ್ಯಾಣಪುರ, ಸಾಗರ ತಾಲ್ಲೂಕು:**

ಸಂಘದಲ್ಲಿ ಸಿಪ್ಪೆಗೋಟು ಸಂಗ್ರಹಣೆಗೆ ಹೆಚ್ಚಿನ ಸ್ಥಳಾವಕಾಶ ಇಲ್ಲದ ಬಗೆಗೆ.

ಗೋದಾಮು ಸೌಲಭ್ಯ ಚೆನ್ನಾಗಿದ್ದು, ಸಿಪ್ಪೆಗೋಟು ಸಂಗ್ರಹಣೆಗೆ ಸ್ಥಳಾವಕಾಶ ಇರುತ್ತದೆ.

**(46) ಶ್ರೀಮತಿ ಜಯಶ್ರೀ ಆರ್.ಆಚಾರ್ಯ, ತೀರ್ಥಹಳ್ಳಿ:**

ಆಸಕ್ತ ಸ್ತ್ರೀಯರು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡುವ ಯೋಜನೆ ಏನಾದರೂ ಸಂಘದಲ್ಲಿ ಇದೆಯಾ?

ಅಂತಹ ಯೋಜನೆಯೇನೂ ಇರುವುದಿಲ್ಲ.

**(47) ಶ್ರೀ ಪುಟ್ಟಪ್ಪ ಜಿ., ಗುಡುಮಘಟ್ಟ, ಭದ್ರಾವತಿ ತಾಲ್ಲೂಕು:**

ಸಂಘದಲ್ಲಿ ವರ್ಚುವಲ್ ಸಭೆಯ ಬದಲು ಸಾಮಾನ್ಯ ಸಭೆಯನ್ನು ಏಕೆ ಕರೆದಿರುವುದಿಲ್ಲ. ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಒಪ್ಪಿಗೆಯನ್ನು ಪಡೆದಿರುವಿರಾ?

ಸರ್ಕಾರದ ಆದೇಶ ಮತ್ತು ಮಾನ್ಯ ಸಹಕಾರ ಸಂಘಗಳ ನಿಬಂಧಕರ ನಿರ್ದೇಶನದ ಮೇರೆಗೆ ವರ್ಚುವಲ್ ಸಭೆಯನ್ನು ಕರೆದಿದ್ದು, ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಸಭೆಯನ್ನು ನಡೆಸಲಾಗಿದೆ.

**(48) ಶ್ರೀ ಶಂಕರಪ್ಪ ಟಿ., ಟೆಂಕಬೈಲು, ತೀರ್ಥಹಳ್ಳಿ ತಾಲ್ಲೂಕು:**

ಸಂಘದಿಂದ ಮಾರಾಟ ಮಾಡುವ ಸಾವಯವ ಗೊಬ್ಬರದ ಬೆಲೆ ಜಾಸ್ತಿ ಇದ್ದು, ಕಡಿಮೆ ಮಾಡುವ ಬಗೆಗೆ.

ಸಂಘದಿಂದ ಖರೀದಿ ಮಾಡಿದ ಗೊಬ್ಬರದ ದರವನ್ನು ಪರಿಗಣಿಸಿ ಬೆಲೆ ನಿಗದಿ ಮಾಡಿದ್ದು, ಸಮಂಜಸವಾಗಿರುತ್ತದೆ.

ಮುಂದುವರೆದು, ಹಲವಾರು ಸದಸ್ಯರು ಸಂಘದಲ್ಲಿ ಅಳವಡಿಸಿರುವ ಗುಂಪು ವಿಮಾ ಯೋಜನೆ ಮತ್ತು ಆರೋಗ್ಯ ವಿಮಾ ಯೋಜನೆ ಬಗೆಗೆ ಹೆಚ್ಚಿನ ಮಾಹಿತಿ ನೀಡುವಂತೆ ಕೋರಿದ್ದು, ಈಗಾಗಲೇ ಈ ಬಗೆಗೆ ಶಾಖೆಗಳಲ್ಲಿ ಕರಪತ್ರಗಳನ್ನು ಇಡಲಾಗಿರುವುದಲ್ಲದೆ, ಸಂಘದ ನೋಟಿಸ್ ಬೋರ್ಡ್‌ನಲ್ಲಿ, ವರದಿ ಪುಸ್ತಕಗಳಲ್ಲಿ, ವೆಬ್‌ಸೈಟ್‌ನಲ್ಲಿ ವಿವರಗಳನ್ನು ಹಾಕಲಾಗಿದ್ದು, ಸದಸ್ಯರು ಸಮೀಪದ ಶಾಖೆಯಿಂದ ಮಾಹಿತಿ ಪಡೆಯಬಹುದಾಗಿದೆ.

ರೈತರ ಅಡಿಕೆ ತೋಟಕ್ಕೆ ಮಂಗನ ಹಾವಳಿ ಹೆಚ್ಚಾಗಿರುವ ಬಗೆಗೆ ಹಾಗೂ ಮಂಕಿ ಪಾರ್ಕ್ ಬಗೆಗೆ ಹಲವಾರು ಸದಸ್ಯರು ಪ್ರಸ್ತಾಪಿಸಿದ್ದು, ಈಗಾಗಲೇ ಹಲವಾರು ಬಾರಿ ಸರ್ವ ಸದಸ್ಯರ ಸಭೆಗಳಲ್ಲಿ ತಿಳಿಸಿದಂತೆ ಇದು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದರಿಂದ ಮಂಗನ ಹಾವಳಿಯಿಂದ ಬೆಳೆ ನಷ್ಟಗೊಂಡ ಸದಸ್ಯರು ಅರಣ್ಯ ಇಲಾಖೆಗೆ ಪತ್ರಿಸುವಂತೆ ಕೋರಲಾಯಿತು. ಮಂಕಿ ಪಾರ್ಕ್‌ಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಕ್ರಮಕೈಗೊಳ್ಳಬೇಕಾಗಿರುತ್ತದೆ.

ಈ ಸರ್ವಸದಸ್ಯರ ಸಭೆಯ ಹಾಜರಾತಿಗೆ ಸಂಬಂಧಿಸಿದಂತೆ ಹಲವಾರು ಸದಸ್ಯರು ಪ್ರಸ್ತಾಪಿಸಿದ್ದು, ಈ ವರ್ಚುವಲ್ ಸಭೆಗೆ ಲಾಗಿನ್ ಆಗಿ ಕನಿಷ್ಠ ಸತತ ಐದು ನಿಮಿಷಗಳು ಇದ್ದಲ್ಲಿ ಮಾತ್ರ ಹಾಜರಾತಿ ದಾಖಲಾಗಿರುತ್ತದೆ.

ಸಂಘದಿಂದ ಪವರ್ ಸ್ಪ್ರೇಯರ್ ಮತ್ತು ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ನೀಡುವ ಬಗೆಗೆ ಮತ್ತು ಕೃಷಿ ಯಂತ್ರೋಪಕರಣಗಳನ್ನು ಸಂಘದಲ್ಲಿ ಮಾರಾಟ ಮಾಡುವ ಬಗೆಗೆ ಹಲವಾರು ಸದಸ್ಯರು ಪ್ರಸ್ತಾಪಿಸಿದ್ದು, ಪವರ್ ಸ್ಪ್ರೇಯರ್ ಮತ್ತು ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ನೀಡುವುದು ಕಷ್ಟಸಾಧ್ಯವಾಗಿರುತ್ತದೆ. ಕೃಷಿ ಯಂತ್ರೋಪಕರಣಗಳನ್ನು, ಕೃಷಿ ಸಲಕರಣೆಗಳನ್ನು ಸಂಘದಲ್ಲಿ ಮಾರಾಟ ಮಾಡುವ ಬಗೆಗೆ ಪರಿಶೀಲಿಸಲಾಗುವುದು.

ಹಲವಾರು ಸದಸ್ಯರು ಬೆಳೆ ಸಾಲವನ್ನು ಹೆಚ್ಚಿಗೆ ಮಾಡುವಂತೆ ಕೋರಿದ್ದು, ಇದಕ್ಕಾಗಿ ಸಂಘದ ಬೈಲಾವನ್ನು ತಿದ್ದುಪಡಿ ಮಾಡಬೇಕಾಗಿರುವುದರಿಂದ ಈ ಬಗೆಗೆ ಪರಿಶೀಲಿಸಲಾಗುವುದು.

ಹಾಗೆಯೇ, ಹಲವಾರು ಸದಸ್ಯರು ಸಂಘದ ಕಾರ್ಯವೈಖರಿ ಬಗೆಗೆ, ವ್ಯವಹಾರಗಳ ಬಗೆಗೆ ಮತ್ತು ಸಂಘದ ಅಭಿವೃದ್ಧಿಗೆ ಸಂಬಂಧಿಸಿದಂತೆ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿರುವುದಲ್ಲದೆ, ಸಂಘವು ನಡೆಸುತ್ತಿರುವ ಈ ಸರ್ವಸದಸ್ಯರ ವೀಡಿಯೋ ಕಾನ್‌ಫರೆನ್ಸ್/ವರ್ಚುವಲ್ ಸಭೆಗೆ ಮೆಚ್ಚುಗೆಯನ್ನು ನೀಡಿರುತ್ತಾರೆ. ಇದಕ್ಕಾಗಿ ಆಡಳಿತ ಮಂಡಳಿಯು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಮುಂದುವರೆದು, ಶ್ರೀ ಪಿ.ಎನ್.ರಂಗನಾಥ ಇವರು ಸಂಸ್ಥೆಯು ಸರ್ವಸದಸ್ಯರ ವೀಡಿಯೋ ಕಾನ್‌ಫರೆನ್ಸ್/ ವರ್ಚುವಲ್ ಮೂಲಕ ನಡೆಸಿರುವ ಸಭೆಗೆ ಬಹಳಷ್ಟು ಜನರಿಗೆ ಲಾಗಿನ್ ಆಗಲು ಸಾಧ್ಯವಾಗದಿದ್ದರೂ ಕೋವಿಡ್–19 ಸಂದರ್ಭದಲ್ಲಿಯೂ ಕಾಯಿದೆ ಪ್ರಕಾರ ಅತ್ಯುತ್ತಮವಾಗಿ ಸಭೆಯನ್ನು ನಡೆಸಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ, ಸರ್ವಸದಸ್ಯರ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು.



# ಅಭಿನಂದನೆಗಳು

ಸಂಘದ ನಿರ್ದೇಶಕರಾದ ಶ್ರೀ ಜಿ.ಈ.ವಿರೂಪಾಕ್ಷಪ್ಪ ಇವರು ವಂದನಾರ್ಪಣೆಯಲ್ಲಿ – ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಗೆ, ಈ ವರ್ಚುವಲ್ ಸಭೆಯಲ್ಲಿ ಲಾಗಿನ್ ಆಗಿ ಭಾಗವಹಿಸಿ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ ಸಲಹೆಗಳನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಂಘದ ಸದಸ್ಯರಿಗೆ, ಸಂಘದ ಮಾನ್ಯ ಉಪಾಧ್ಯಕ್ಷರಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಸಂಘದ ಸಿಬ್ಬಂದಿಗಳಿಗೆ, ಸಂಘದ ಲೆಕ್ಕಪರಿಶೋಧನೆ ಮಾಡಿದ ಸನ್ನದು ಲೆಕ್ಕಪರಿಶೋಧಕರಿಗೆ, ಅಂಚೆ ಇಲಾಖೆಯವರಿಗೆ, ಈ ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯು ಆನ್‌ಲೈನ್ ಮೂಲಕ ಅಚ್ಚುಕಟ್ಟಾಗಿ ನೆರವೇರಲು ಕಾರಣರಾದ ತಂತ್ರಜ್ಞರಿಗೆ, ಮಾಧ್ಯಮದವರಿಗೆ, ಶಾಮಿಯಾನ–ಮೈಕ್ ವ್ಯವಸ್ಥೆ ಮಾಡಿದವರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಸಹಿ/–
**ವ್ಯವಸ್ಥಾಪಕ ನಿರ್ದೇಶಕರು**
(ಪ್ರಭಾರ)

ಸಹಿ/–
**ಕೆ.ಬಿ.ಶಿವಕುಮಾರ್,** ಐ.ಎ.ಎಸ್.
ಶಿವಮೊಗ್ಗ ಜಿಲ್ಲಾಧಿಕಾರಿಗಳು
ಹಾಗೂ ಸಂಘದ ಅಧ್ಯಕ್ಷರು.

*****************************************************

## ದಿನಾಂಕ:21/12/2020ರಂದು ನಡೆದ ಸಂಘದ 2019–20ನೇ ಸಾಲಿನ ಸರ್ವ ಸದಸ್ಯರ ವೀಡಿಯೋ ಕಾನ್‌ಫರೆನ್ಸ್ / ವರ್ಚುವಲ್ ಸಭೆಯ ನಡಾವಳಿಯ ಮೇಲೆ ಕೈಗೊಂಡ ಕ್ರಮಗಳ ವಿವರ

1) 'VISION-2020' ಅಡಿಯಲ್ಲಿ ಸಂಘವು ಹಮ್ಮಿಕೊಂಡಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ.

2) ಸಂಘದ ವ್ಯಾಪ್ತಿಯೊಳಗಡೆ ಅಂದರೆ ಶಿವಮೊಗ್ಗ, ಸಾಗರ, ಕಳಸ, ಎನ್.ಆರ್.ಪುರ ತಾಲ್ಲೂಕಿನ ಬಿ.ಹೆಚ್.ಕೈಮರಗಳಲ್ಲಿ ಅಡಿಕೆಯ ನೇರ ಖರೀದಿ ಕೇಂದ್ರವನ್ನು ತೆರೆಯಲಾಗಿದೆ. ಅವಶ್ಯವಿರುವ ಕಡೆಗಳಲ್ಲಿ ನೇರ ಖರೀದಿ ಕೇಂದ್ರವನ್ನು ತೆರೆಯುವ ಬಗೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

3) ಸಂಘದಲ್ಲಿ ಜಾರಿಯಲ್ಲಿರುವ 'ಗುಂಪು ವಿಮಾ ಅಭಿರಕ್ಷೆ' ಯೋಜನೆಯ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಸದಸ್ಯರನ್ನು ತರಲಾಗಿದೆ.

4) ಸಂಘದಲ್ಲಿ 'ಆರೋಗ್ಯ ವಿಮಾ ಯೋಜನೆ'ಯನ್ನು ದಿನಾಂಕ:01/01/2021 ರಿಂದ ಜಾರಿಗೊಳಿಸಿದ್ದು, ಸದಸ್ಯರು ಮತ್ತು ಅವರ ಕುಟುಂಬದ ಒಟ್ಟು 5444 ಜನರು ಈ ಯೋಜನೆಯಲ್ಲಿ ನೋಂದಾಯಿಸಿರುತ್ತಾರೆ.

5) ಸಂಘದಿಂದ ಮಾರಾಟ ಮಾಡುತ್ತಿರುವ 'ಮಾಮ್‌ಕೋಸ್ ಸಸ್ಯ ಚೈತನ್ಯ' ಸಾವಯವ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಗರಿಷ್ಠ ಪ್ರಮಾಣದಲ್ಲಿ ಮಾರಾಟ ಮಾಡಲಾಗುತ್ತಿದೆ.

6) ಸಂಘಕ್ಕೆ ಅಡಿಕೆ ಮೂಟೆ ವ್ಯಾಪಾರಕ್ಕೆ ಬಿಡುವ ಸದಸ್ಯರು ಒಮ್ಮೆ ವ್ಯಾಪಾರಕ್ಕೆ ಹಾಕಿಸಿದ ಮೂಟೆಗಳನ್ನು ಹಲವಾರು ಬಾರಿ ವ್ಯಾಪಾರಕ್ಕೆ ಹಾಕಿಸುತ್ತಿರುವ ಹಿನ್ನೆಲೆಯಲ್ಲಿ ಮೂರು ಬಾರಿವರೆಗೆ ಮಾತ್ರ ಉಚಿತವಾಗಿರಿಸಿ, ನಂತರ ಮಾರಾಟಕ್ಕೆ ಹಾಕುವವರಿಗೆ ಶುಲ್ಕ ನಿಗದಿಪಡಿಸುವ ಬಗೆಗೆ ಆಡಳಿತ ಮಂಡಳಿಯಲ್ಲಿ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು.

7) ಸಂಘದ 2020–21ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಎಸ್.ಕೃಷ್ಣಸ್ವಾಮಿ ಅಂಡ್ ಕೋ., ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ ಇವರಿಂದ ಮಾಡಿಸಲಾಗಿದೆ.

8) ಸರ್ವ ಸದಸ್ಯರ ಸಭೆಯು ನಿಗದಿಪಡಿಸಿದ ಠೇವಣಿ ಮೊತ್ತ ಮತ್ತು ಸಾಲದ ಮೊತ್ತದ ಮಿತಿಯಲ್ಲಿ ವ್ಯವಹರಿಸಲಾಗಿದೆ.

9) ಇತ್ತೀಚಿನ ತಾಂತ್ರಿಕ ಸ್ಥಿತಿಗನುಗುಣವಾಗಿ ಸಂಘದ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

10) ಸಂಘದಿಂದ ಕೃಷಿ ಉಪಕರಣ ಮತ್ತು ನಿತ್ಯೋಪಕರಣಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವ ಬಗೆಗೆ ಪರಿಶೀಲಿಸಲಾಗುವುದು.

11) ಸಂಘದಿಂದ ಹಸಿ ಅಡಿಕೆ ಟೆಂಡರ್ ವ್ಯವಹಾರ ನಡೆಸುವ ಬಗೆಗೆ ಪರಿಶೀಲಿಸಲಾಗುವುದು.

12) ಸಂಘದ ವ್ಯಾಪ್ತಿಯ ಕೆಲವೆಡೆಗಳಲ್ಲಿ ಎ.ಪಿ.ಎಂ.ಸಿ. ಪ್ರಾಂಗಣದ ಹೊರಗಡೆ ಅಡಿಕೆಯ ನೇರ ಖರೀದಿ ಕೇಂದ್ರವನ್ನು ತೆರೆದಿರುವುದಲ್ಲದೆ, ಖಾಸಗಿ ಖರೀದಿದಾರರ ಮತ್ತು ದಲ್ಲಾಳಿಗಳೊಂದಿಗೆ ಸ್ಪರ್ಧಾತ್ಮಕವಾಗಿ ವ್ಯವಹಾರ ನಡೆಸುವ ಬಗೆಗೆ ಗಮನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

13) ಸದಸ್ಯರ ಅಡಿಕೆಗೆ ಉತ್ತಮ ಧಾರಣೆಯನ್ನು ನೀಡುವ ಮೂಲಕ ಕೈ ವ್ಯಾಪಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾಮ್‌ಕೋಸ್ ಜಾಗ್ರತೆ ವಹಿಸಿದೆ.

14) ಕಟಾವು ಸಾಲದ ಮಿತಿಯನ್ನು ಹೆಚ್ಚಿಸುವ ಬಗೆಗೆ ಬೈಲಾ ತಿದ್ದುಪಡಿ ಮಾಡಬೇಕಾಗಿರುತ್ತದೆ.

15) ಸಂಘದ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಅಡಿಕೆ ದರವನ್ನು ಅಪ್‌ಡೇಟ್ ಮಾಡಲಾಗುತ್ತಿದೆ.

16) ಸದಸ್ಯರು ಸಂಘದ ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಆನ್‌ಲೈನ್ ಮೂಲಕ ಅಡಿಕೆ ಮಾರಾಟ ಮಾಡಲು ಅವಕಾಶ ನೀಡುವ ಬಗೆಗೆ ಪರಿಶೀಲಿಸಲಾಗುತ್ತಿದೆ.

17) ಮಲೆನಾಡು ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಡಿಕೆಯನ್ನು ಖರೀದಿ ಮಾಡುವಂತೆ ಕ್ಯಾಂಪ್ಕೋ ಸಂಸ್ಥೆಯವರನ್ನು ಕೋರಲಾಗಿದೆ.

18) ಗೌ.ಸರ್ವೋಚ್ಚ ನ್ಯಾಯಾಲಯದಲ್ಲಿ ಅಡಿಕೆಗೆ ಸಂಬಂಧಿಸಿದಂತೆ ಇರುವ ಪ್ರಕರಣಗಳು ರೈತರ ಪರವಾಗಿ ತೀರ್ಮಾನವಾಗುವ ಬಗೆಗೆ ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ಸಹಕಾರದೊಂದಿಗೆ ಕ್ರಮ ವಹಿಸಲಾಗುತ್ತಿದೆ.

19) ಅಡಿಕೆಗೆ ಸಂಬಂಧಿಸಿದಂತೆ ಬೆಂಗಳೂರಿನ ರಾಮಯ್ಯ ಹಾಸ್ಪಿಟಲ್‌ನ ವಿಜ್ಞಾನಿಗಳ ತಂಡ ಸಂಶೋಧನೆ ನಡೆಸುತ್ತಿದ್ದು, ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದವರು ಫಾಲೋಅಪ್ ಮಾಡುತ್ತಿದ್ದು, ಸಂಘದಿಂದಲೂ ಈ ಕುರಿತು ಗಮನಿಸಲಾಗುತ್ತಿದೆ.

20) ಸಾವಯವ ಗೊಬ್ಬರವನ್ನು ಏಜೆನ್ಸಿ ಮೂಲಕ ಮಾರಾಟ ಮಾಡುವ ಬಗೆಗೆ ಪರಿಶೀಲಿಸಲಾಗುವುದು.

21) ಶಾಖೆಗಳಲ್ಲಿ ಸಿಬ್ಬಂದಿಗಳ ವರ್ಗಾವಣೆ ಮಾಡಿದ್ದು, ಸದಸ್ಯರಿಗೆ ತ್ವರಿತವಾಗಿ ಕೆಲಸ ಮಾಡಿಕೊಡುವಂತೆ ಸೂಚಿಸಲಾಗಿದೆ.

22) ಪ್ರತಿ ಮಾಹೆ ಅಂತ್ಯಕ್ಕೆ ಸಂಘದ ಅಡಿಕೆ ದಾಸ್ತಾನು ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗೆಗೆ ಕ್ರಮ ಕೈಗೊಂಡಿದೆ.

23) ಅಡಿಕೆಯ ಉತ್ಪನ್ನಗಳು ಮತ್ತು ಉಪ ಉತ್ಪನ್ನಗಳ ಮೌಲ್ಯವರ್ಧನೆ ಬಗೆಗೆ ಪರಿಶೀಲಿಸಲಾಗುವುದು

24) ಸಂಘದಲ್ಲಿ ವಾಹನ ಚಾಲಕರು, ಅಟೆಂಡರ್, ಜವಾನರು ಮತ್ತು ಹಮಾಲರಿಗೆ ಸಮವಸ್ತ್ರವನ್ನು ಜಾರಿಗೆ ತರಲಾಗಿದೆ.

25) ತುಮರಿಯಲ್ಲಿ ಸಂಘದ ಅಡಿಕೆ ಸಂಗ್ರಹಣಾ ಏಜೆನ್ಸಿಯನ್ನು ತೆರೆಯಲಾಗಿದೆ.

26) ಶಾಖಾ ಕಚೇರಿಯಲ್ಲಿ ಮೈಲುತುತ್ತವನ್ನು ಖರೀದಿಸಿದಾಗ ಡಿಜಿಟಲ್ ಪಾವತಿಯನ್ನು ಮಾಡಲು ಅವಕಾಶ ನೀಡಲಾಗಿದೆ.

27) ಈಗಾಗಲೇ ಸಂಘದಿಂದ ಪವರ್ ಸ್ಪ್ರೇಯರ್ ಯಂತ್ರವನ್ನು ಮಾರಾಟ ಮಾಡಲಾಗುತ್ತಿದೆ.

28) ಸಂಘವು ಸರಬರಾಜುದಾರರಿಂದ ಹೊಸ ಗೋಣಿ ಚೀಲಗಳನ್ನು ಖರೀದಿಸಿದ ದರಕ್ಕನುಗುಣವಾಗಿ ನ್ಯಾಯ ಸಮ್ಮತವಾದ ಮಾರಾಟ ದರವನ್ನು ರೈತರಿಗೆ ನಿಗದಿಪಡಿಸಿ ನೀಡಲಾಗುತ್ತಿದೆ.

29) ಸಂಘಕ್ಕೆ ಸದಸ್ಯರು ಕೆ.ವೈ.ಸಿ. ದಾಖಲೆಗಳೊಂದಿಗೆ ನೀಡಿದ ಮೊಬೈಲ್ ಸಂಖ್ಯೆಗಳಿಗೆ ಎಸ್.ಎಂ.ಎಸ್. ಕಳುಹಿಸಲಾಗುತ್ತಿದೆ.



# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ
## 2020-2021 ನೇ ಸಾಲಿನ ಕ್ರೋಢೀಕೃತ ಜಮಾ - ಖರ್ಚು ತಃಖ್ತೆ

| ಕ್ರ. ಸಂ. | ಜಮಾ ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು | ಕ್ರ. ಸಂ. | ಖರ್ಚು ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು |
|---|---|---|---|---|---|---|---|
| | | ರೂ. ಪೈ. | ರೂ. ಪೈ. | | | ರೂ. ಪೈ. | ರೂ. ಪೈ. |
| 1 | ಷೇರು ಬಂಡವಾಳ | | | 1 | ಷೇರು ಬಂಡವಾಳ | | |
| | ಸದಸ್ಯರ ಷೇರು ಧನ | 30,41,300.00 | | | ಸದಸ್ಯರ ಷೇರು ಧನ | 14,22,300.00 | |
| | ನಾಮಮಾತ್ರ ಸದಸ್ಯತ್ವ | 47,950.00 | 30,89,250.00 | | ನಾಮಮಾತ್ರ ಸದಸ್ಯತ್ವ | 47,950.00 | 14,70,250.00 |
| 2 | ಬ್ಯಾಂಕ್ ಖಾತೆಗಳು | | | 2 | ಬ್ಯಾಂಕ್ ಖಾತೆಗಳು | | |
| 1) | ಸಹಕಾರ ಬ್ಯಾಂಕ್ ಖಾತೆ | | | 1) | ಸಹಕಾರ ಬ್ಯಾಂಕ್ ಖಾತೆ | | |
| | ಡಿ.ಸಿ.ಸಿ. ಬ್ಯಾಂಕ್ ಉಳಿತಾಯ ಖಾತೆ | 3,08,649.00 | | | ಡಿ.ಸಿ.ಸಿ. ಬ್ಯಾಂಕ್ ಉಳಿತಾಯ ಖಾತೆ | 3,01,309.00 | |
| | ಡಿ.ಸಿ.ಸಿ. ಬ್ಯಾಂಕ್ ಚಾಲ್ತಿ ಖಾತೆ | 51,42,88,337.90 | | | ಡಿ.ಸಿ.ಸಿ. ಬ್ಯಾಂಕ್ ಚಾಲ್ತಿ ಖಾತೆ | 51,44,11,172.00 | |
| | ಶಿ.ಅ.ಮ.ವ. ಸಹಕಾರ ಬ್ಯಾಂಕ್ ಚಾಲ್ತಿ ಖಾತೆ | 34,38,11,822.00 | 85,84,08,808.90 | | ಶಿ.ಅ.ಮ.ವ. ಸಹಕಾರ ಬ್ಯಾಂಕ್ ಚಾಲ್ತಿ ಖಾತೆ | 34,09,17,670.00 | 85,56,30,151.00 |
| 2) | ವಾಣಿಜ್ಯ ಬ್ಯಾಂಕ್ ಚಾಲ್ತಿ ಖಾತೆ | | | 2) | ವಾಣಿಜ್ಯ ಬ್ಯಾಂಕ್ ಚಾಲ್ತಿ ಖಾತೆ | | |
| | ಕರ್ನಾಟಕ ಬ್ಯಾಂಕ್ | 62,39,04,587.33 | | | ಕರ್ನಾಟಕ ಬ್ಯಾಂಕ್ | 61,98,14,310.00 | |
| | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 45,42,93,200.45 | | | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 45,58,01,833.10 | |
| | ಬ್ಯಾಂಕ್ ಆಫ್ ಬರೋಡ | 1,96,70,787.57 | | | ಸಿಂಡಿಕೇಟ್ ಬ್ಯಾಂಕ್ (ಕೆನರಾ ಬ್ಯಾಂಕ್) | 15,78,41,098.00 | |
| | ಸಿಂಡಿಕೇಟ್ ಬ್ಯಾಂಕ್ (ಕೆನರಾ ಬ್ಯಾಂಕ್) | 15,87,42,321.54 | | | ಕೆನರಾ ಬ್ಯಾಂಕ್ | 85,17,41,701.40 | |
| | ಕೆನರಾ ಬ್ಯಾಂಕ್ | 82,85,90,481.44 | | | ಬ್ಯಾಂಕ್ ಆಫ್ ಇಂಡಿಯಾ | 27,88,873.00 | |
| | ಬ್ಯಾಂಕ್ ಆಫ್ ಇಂಡಿಯಾ | 28,32,666.43 | | | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 7,34,20,97,719.22 | |
| | ಆಕ್ಸಿಸ್ ಬ್ಯಾಂಕ್ | 83,74,86,416.98 | | | ಬ್ಯಾಂಕ್ ಆಫ್ ಬರೋಡ | 2,15,45,890.00 | |
| | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 7,33,45,46,447.16 | | | ಆಕ್ಸಿಸ್ ಬ್ಯಾಂಕ್ | 83,76,18,977.76 | 10,28,92,50,402.48 |
| | ಇಂಡಿಯನ್ ಬ್ಯಾಂಕ್ | 23,608.00 | 10,26,00,90,516.90 | 3) | ವಾಣಿಜ್ಯ ಬ್ಯಾಂಕ್ ಉಳಿತಾಯ ಖಾತೆ | | |
| 3) | ವಾಣಿಜ್ಯ ಬ್ಯಾಂಕ್ ಉಳಿತಾಯ ಖಾತೆ | | | | ಕೆನರಾ ಬ್ಯಾಂಕ್ | 67,36,39,122.00 | |
| | ಕೆನರಾ ಬ್ಯಾಂಕ್ | 66,90,33,252.46 | | | ಕರ್ನಾಟಕ ಬ್ಯಾಂಕ್ | 2,21,31,15,247.75 | |

| ಕ್ರ. ಸಂ. | ಜಮಾ ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು | ಕ್ರ. ಸಂ. | ಖರ್ಚು ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು |
|---|---|---|---|---|---|---|---|
| | | ರೂ. ಪೈ. | ರೂ. ಪೈ. | | | ರೂ. ಪೈ. | ರೂ. ಪೈ. |
| | ಕರ್ನಾಟಕ ಬ್ಯಾಂಕ್ | 2,20,23,05,125.91 | | | ಸ್ಟೇಟ್‌ಬ್ಯಾಂಕ್ ಆಫ್‌ಇಂಡಿಯಾ | 36,84,00,531.80 | |
| | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 7,32,61,90,142.62 | | | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 7,55,98,03,995.49 | |
| | ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ | 36,87,97,483.30 | | | ಬ್ಯಾಂಕ್ ಆಫ್ ಬರೋಡ | 41,213.00 | 10,81,50,00,110.04 |
| | ಬ್ಯಾಂಕ್ ಆಫ್ ಬರೋಡ | 79,655.90 | 10,56,64,05,660.19 | 3 | ವಿನಿಯೋಗಗಳು | | |
| 3 | ವಿನಿಯೋಗಗಳು | | | | ವಾಣಿಜ್ಯ ಬ್ಯಾಂಕ್ ಠೇವಣಿ | 95,80,09,417.01 | |
| | ವಾಣಿಜ್ಯ ಬ್ಯಾಂಕ್ ಠೇವಣಿ | 96,20,00,000.00 | 96,20,00,000.00 | | ಸಹಕಾರಿ ಸಂಘದ ಷೇರು | 60,000.00 | 95,80,69,417.01 |
| 4 | ಸದಸ್ಯರಿಂದ ಪಡೆದ ಠೇವಣಿ/ಡಿಪಾಜಿಟ್‌ಗಳು | | | 4 | ಸದಸ್ಯರಿಂದ ಪಡೆದ ಠೇವಣಿ/ಡಿಪಾಜಿಟ್‌ಗಳು | | |
| | ಉಳಿತಾಯ ಖಾತೆ | 5,86,29,96,398.81 | | | ಉಳಿತಾಯ ಖಾತೆ | 5,75,54,80,965.33 | |
| | ನಿರಖು ಠೇವಣಿ | 99,63,04,100.00 | | | ನಿರಖು ಠೇವಣಿ | 83,20,81,000.00 | |
| | ಕರೆ ಠೇವಣಿ | 1,48,30,000.00 | 6,87,41,30,498.81 | | ಕರೆ ಠೇವಣಿ | 4,07,35,000.00 | 6,62,82,96,965.33 |
| 5 | ಇತರೆ ಠೇವಣಿಗಳು | | | 5 | ಇತರೆ ಠೇವಣಿಗಳು | | |
| | ವರ್ತಕರ ಭದ್ರತಾ ಠೇವಣಿ | 3,62,90,000.00 | | | ವರ್ತಕರ ಭದ್ರತಾ ಠೇವಣಿ | 56,70,000.00 | |
| | ಸಿಬ್ಬಂದಿ ಭದ್ರತಾ ಠೇವಣಿ | 1,99,205.00 | | | ಸಿಬ್ಬಂದಿ ಭದ್ರತಾ ಠೇವಣಿ | 55,683.00 | |
| | ಏಜೆನ್ಸಿ ಭದ್ರತಾ ಠೇವಣಿ | 46,90,000.00 | | | ಏಜೆನ್ಸಿ ಭದ್ರತಾ ಠೇವಣಿ | 9,20,000.00 | 66,45,683.00 |
| | ಕಾವಲುಗಾರರ ಭದ್ರತಾ ಠೇವಣಿ | 80,000.00 | 4,12,59,205.00 | 6 | ಅಡಿಕೆ ಮಾರಾಟದ ಹಣ | 5,39,71,97,169.05 | 5,39,71,97,169.05 |
| 6 | ಅಡಿಕೆ ಮಾರಾಟದ ಹಣ | 5,36,91,35,122.60 | 5,36,91,35,122.60 | 7 | ಪಡೆದ ಸಾಲಗಳು | | |
| 7 | ಪಡೆದ ಸಾಲಗಳು | | | | ವಾಣಿಜ್ಯ ಬ್ಯಾಂಕ್‌ಗಳ ಸಾಲಗಳು | | |
| | ವಾಣಿಜ್ಯ ಬ್ಯಾಂಕ್‌ಗಳ ಸಾಲಗಳು | | | | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿ ಸಿ ಖಾತೆ | 4,88,04,94,903.00 | 4,88,04,94,903.00 |
| | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿ ಸಿ ಖಾತೆ | 5,15,92,25,699.30 | 5,15,92,25,699.30 | 8 | ಸದಸ್ಯರ ಸಾಲ / ಮುಂಗಡಗಳು | | |
| 8 | ಸದಸ್ಯರ ಸಾಲ / ಮುಂಗಡಗಳು | | | | ಕಟಾವು ಸಾಲ | 28,66,04,777.00 | |
| | ಕಟಾವು ಸಾಲ | 29,57,20,328.00 | | | ಕೊಳೆ ಔಷಧಿ ಸಾಲ | 1,02,71,384.00 | |
| | ಕೊಳೆ ಔಷಧಿ ಸಾಲ | 1,05,82,231.00 | | | ಅಡಿಕೆ ಆಧಾರ ಮುಂಗಡ | 1,12,84,83,204.34 | |
| | ಅಡಿಕೆ ಆಧಾರ ಮುಂಗಡ | 1,13,77,07,658.98 | | | ಠೇವಣಿ ಆಧಾರದ ಸಾಲ | 1,32,93,000.00 | 1,43,86,52,365.34 |

| ಕ್ರ. ಸಂ. | ಜಮಾ ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು | ಕ್ರ. ಸಂ. | ಖರ್ಚು ವಿವರ | ಉಪ ಖಾತೆವಾರು ಮೊಬಲಗು | ಮುಖ್ಯ ಖಾತೆವಾರು ಮೊಬಲಗು |
|---|---|---|---|---|---|---|---|
| | | ರೂ. ಪೈ. | ರೂ. ಪೈ. | | | ರೂ. ಪೈ. | ರೂ. ಪೈ. |
| | ಠೇವಣಿ ಆಧಾರದ ಸಾಲ | 1,39,41,844.00 | 1,45,79,52,061.98 | 9 | ಇತರೆ ಸಾಲ ಮತ್ತು ಮುಂಗಡ | | |
| 9 | ಇತರೆ ಸಾಲ ಮತ್ತು ಮುಂಗಡ | | | | ಇತರೆ ಮುಂಗಡಗಳು | 8,65,46,732.38 | |
| | ಇತರೆ ಮುಂಗಡಗಳು | 10,86,43,611.38 | | | ಮಾಮ್‌ಕೋಸ್ ಇ.ಸಿ.ಎಸ್ ಸಾಲ | 51,33,460.00 | |
| | ಮಾಮ್‌ಕೋಸ್ ಇ.ಸಿ.ಎಸ್ ಸಾಲ | 51,33,460.00 | | | ಬಾಡಿಗೆ ಮುಂಗಡ ಜಮಾ ಖಾತೆ | 2,00,000.00 | |
| | ಬಾಡಿಗೆ ಮುಂಗಡ ಪಾವತಿ | 2,30,200.00 | | | ಟ್ರೇಡ್ ಡೆಟಾರ್ಸ್ | 1,97,71,43,781.00 | 2,06,90,23,973.38 |
| | ಸಿಬ್ಬಂದಿ ಮನೆ ಕೊಳ್ಳುವ ಸಾಲ | 1,896.00 | | 10 | ವರ್ತಕರ ಖಾತೆ | 4,40,34,24,682.00 | 4,40,34,24,682.00 |
| | ಟ್ರೇಡ್ ಡೆಟಾರ್ಸ್ | 1,82,02,67,264.00 | 1,93,42,76,431.38 | 11 | ಸಲ್ಲತಕ್ಕ ಜವಾಬ್ದಾರಿಗಳು | | |
| 10 | ವರ್ತಕರ ಖಾತೆ | 4,39,06,21,515.84 | 4,39,06,21,515.84 | | ಎ.ಪಿ.ಎಂ.ಸಿ. ಸೆಸ್ | 3,04,64,671.00 | |
| 11 | ಸಲ್ಲತಕ್ಕ ಜವಾಬ್ದಾರಿಗಳು | | | | ಷೇರು ಅಮಾನತ್ತು | 7,04,060.00 | |
| | ಎ.ಪಿ.ಎಂ.ಸಿ. ಸೆಸ್ | 3,04,64,671.00 | | | ಇ.ಎಂ.ಡಿ. | 28,95,000.00 | |
| | ಷೇರು ಅಮಾನತ್ತು | 7,04,060.00 | | | ಅಮಾನತ್ತು | 4,22,11,104.85 | |
| | ಇ.ಎಂ.ಡಿ. | 40,95,000.00 | | | ಜಿಎಸ್‌ಟಿ ಪಾವತಿಸಬೇಕಾದ್ದು | 21,80,69,975.06 | |
| | ಅಮಾನತ್ತು | 4,24,88,836.55 | | | ಪಾವತಿಸಬೇಕಾದದ್ದು | 13,26,73,416.10 | |
| | ಏಜೆನ್ಸಿ ಕಮಿಷನ್ ಪಾವತಿಸಬೇಕಾದ್ದು | 1,61,67,828.00 | | | ವೃತ್ತಿ ತೆರಿಗೆ | 3,02,800.00 | |
| | ಜಿಎಸ್‌ಟಿ ಪಾವತಿಸಬೇಕಾದ್ದು | 25,50,34,144.06 | | | ಆದಾಯ ತೆರಿಗೆ ಕಟಾಯಿಸಿದ್ದು | 18,99,506.10 | |
| | ಪಾವತಿಸಬೇಕಾದದ್ದು | 9,86,81,788.27 | | | ಸಿಬ್ಬಂದಿ ಆದಾಯ ತೆರಿಗೆ | 1,45,500.00 | |
| | ವೃತ್ತಿ ತೆರಿಗೆ | 3,02,800.00 | | | ನೌಕರರ ಜೀವ ವಿಮೆ | 19,95,036.40 | |
| | ಆದಾಯ ತೆರಿಗೆ ಕಟಾಯಿಸಿದ್ದು | 18,73,577.10 | | | ಫ್ರೈಟ್ ಚಾರ್ಜಸ್ | 14,69,853.00 | |
| | ಸಿಬ್ಬಂದಿ ಆದಾಯ ತೆರಿಗೆ | 1,43,500.00 | | | ನೌಕರರ ಭವಿಷ್ಯ ನಿಧಿ | 76,83,288.00 | |
| | ನೌಕರರ ಜೀವ ವಿಮೆ | 19,95,036.40 | | | ವಿಶೇಷ ಪಾರಿತೋಷಕ ನಿಧಿ | 1,35,500.00 | |
| | ಫ್ರೈಟ್ ಚಾರ್ಜಸ್ | 8,83,155.00 | | | ಎ.ಪಿ.ಎಂ.ಸಿ. ತೂಕದ ಚಾರ್ಜ್ | 14,49,706.21 | |
| | ನೌಕರರ ಭವಿಷ್ಯ ನಿಧಿ | 76,83,288.00 | | | ಗುಂಪು ವಿಮೆ | 87,54,980.46 | |
| | ವಿಶೇಷ ಪಾರಿತೋಷಕ ನಿಧಿ | 3,76,000.00 | | | ವರ್ತಕರ ಲಾರಿ ಬಾಡಿಗೆ | 24,33,537.00 | |

